
ಪ್ರಚೋದನೆ

ಲಂಕೇಶ್



ಬಿಜಾಪುರ ಚೀನಿ ಮಹಲ್ ಕತೆ

ಜನವರಿ 02, 2013 ಪುಟ 20 ರೂ. 14/-



ಬೆಳಗಾಂ ಶಾಸಕ ಭಯ ಪಾಟೀಲ

ವಂಧೆ ಮತ್ತು ದಾಳಿ



ತಂದೂರಿ v/s ರಾಗಿ ಮುದ್ದೆ

ರ ಕನ್ನಡ ಬಿಜೆಪಿಯಲ್ಲಿ ಸ್ಪರ್ಧಿಗಳಿಗೆ ಬರ


ಚಾಮರಾಜನಗರ ಬಿಜೆಪಿಗೆ ಕೆಜೆಪಿ ಸವಾಲ್



ಎಲೆಕ್ಷನ್ ಗೂಂಡಾಗಿರಿ ಶುರು

ರವಿಪೂಜಾರಿ ಗ್ಯಾಂಗ್ ತನ್ವೀರ್ ಹತ್ಯೆಗೆ ಬಚಖಾನನ ರಿವಾಲ್ವರ್






•ಪಾರ್ವತೀಶ ಬಿಡಿ ಚಿತ್ರಗಳು

ಲೇಖಕರು ತಮ್ಮ ಕೃತಿಯೊಂದಿಗೆ ಅದೆಷ್ಟು ಕಾಲ ಇರಬೇಕು...?

ಕಳೆದ ವಾರ ಕೋರ್ಟ್ ಕೇಸೊಂದನ್ನು ಅಟೆಂಡ್ ಮಾಡಲು ಶಿವಮೊಗ್ಗೆಗೆ ಹೋಗಿದ್ದಾಗ ಅದೇ ದಿನ ಸಂಜೆ ಕಲ್ಕುಳಿ ವಿಠ್ಠಲ ಹೆಗ್ಗಡೆಯವರ 'ಮಂಗನ ಬ್ಯಾಟೆ' ಪುಸ್ತಕ ಬಿಡುಗಡೆಯ ಸಮಾರಂಭಕ್ಕೂ ಹೋದೆವು. ಲಂಕೇಶ್ ಪ್ರಕಾಶನದ ಈ ಪುಸ್ತಕದ ಬಗ್ಗೆ ಆದಾಗಲೇ ಬೆಂಗಳೂರು ಹಾಗೂ ಶೃಂಗೇರಿಯಲ್ಲೂ ಕಾರ್ಯಕ್ರಮಗಳಾಗಿದ್ದವು. ಶಿವಮೊಗ್ಗೆಯ ಕಮಲಾ ನೆಹರು ಕಾಲೇಜಿನ ಸಭಾಂಗಣ ಅವತ್ತು ಭರ್ತಿ. ರಾಜೇಂದ್ರ ಚೆನ್ನಿಯವರ ಅದ್ಭುತ ಭಾಷಣ, ಸತ್ಯಮೂರ್ತಿ ಆನಂದೂರರ ಮೆಚ್ಚುಗೆ, ಕಡಿದಾಳು ಶಾಮಣ್ಣನವರ ಲಹರಿ ಹರಿದಂತೆ ಸಾಗಿದ ಮಾತು ಸಭಿಕರನ್ನು ರಂಜಿಸಿದವು. ಅವತ್ತಿನ ಸಭೆಯಲ್ಲಿ ಮಾತನಾಡಬೇಕಿದ್ದ ನಾನು ತಡವಾಗಿ ತಲುಪಿದ್ದೆ. ಹಾಗಾಗಿ ಅಲ್ಲಿ ಹೇಳಲಾಗದ್ದನ್ನು ಇಲ್ಲಿ ಚರ್ಚಿಸಬಹುದೆನಿಸಿದೆ.




ವಿಠ್ಠಲ್

ಲೇಖಕರೊಬ್ಬರು ತಮ್ಮ ಕಲಾಕೃತಿಯೊಂದಿಗೆ ಎಷ್ಟು ಕಾಲ ಇರಬೇಕು? ಎಂಬ ಪ್ರಶ್ನೆ ಬಹಳ ಹಳೆಯದು. ಈಗ್ಗೆ ತಿಂಗಳ ಹಿಂದೆ ಗೆಳೆಯ ಎಂ.ಸಿ.ನಾಗರಾಜನ ಮೊದಲ ಪುಸ್ತಕ 'ತೇಲು ತೇಲುತಾ ಅಂಡಮಾನ್' ಬಿಡುಗಡೆಯಾದಾಗ ನಾನವನಿಗೆ "ಅಯ್ಯಾ ಮಿತ್ರ, ನೀನಿ ಪುಸ್ತಕದ ಕೆಲಸ ಮುಗಿಸಿ ಈಗಾಗಲೇ ಹನ್ನೆರಡು ದಿನ ಆಗಿದೆ. ಮೊದಲು ಅದರಿಂದ ಕಳಚಿಕೊ, ಆ ಹ್ಯಾಂಗೋವರ್‌ನಿಂದ ನಿನ್ನನ್ನು ಬಿಡಿಸಿಕೊ, ಆಗಲೇ ನೀನು ಹೊಸ ಬರಹದ ಬಗ್ಗೆ ಯೋಚಿಸಲು ಸಾಧ್ಯ" ಅಂದಿದ್ದೆ. ಜೊತೆಗೆ "ಯಾರಾದರು ಪುಸ್ತಕ ಹೊಗಳಿದರೆ ಸುಮ್ಮನಿರು, ಟೀಕೆ-ವಿಮರ್ಶೆ ಮಾಡಿದರೆ ನಿಗಾ ಇಟ್ಟು ಕೇಳಿಸಿಕೊ" ಅಂತಲೂ ಗುರೂಪದೇಶ ಮಾಡಿದ್ದೆ.

ವಿಠ್ಠಲ ಹೆಗ್ಗಡೆಯವರ 'ಮಂಗನ ಬ್ಯಾಟೆ' ಒಮ್ಮೆ ಕೈಗೆತ್ತಿಕೊಂಡರೆ ಓದಿ ಮುಗಿಸದೆ ಮತ್ತೊಂದು ಪುಸ್ತಕದತ್ತ ಹೋಗಲು ಬಿಡದಂತೆ ಸೆಳೆಯುವಂತದ್ದು. ಮಲೆನಾಡಿನ ಬದುಕಿನ ದಟ್ಟ ವಿವರಗಳನ್ನು ಕೊಡುವ ಇದು ಬಹುಶಃ ಮಲೆನಾಡಿನ ಎನ್‌ಸೈಕ್ಲೋಪೀಡಿಯಾದ ಮೊದಲ ಸಂಪುಟದಂತಿದೆ. ಚೆಂಗೂಲಿ ಕಾಯಕದ ಸಿದ್ದ ಊರೂರು ಅಲೆಯುತ್ತಾ ಒಮ್ಮೆ ತನ್ನ ಮನೆಗೆ ವಾಪಸ್ ಬಂದಾಗ ಅವನ ಮನೆಯ ಸಾಕು ನಾಯಿಯೇ ಸಿದ್ದನನ್ನು ಗುರುತಿಸದೆ ಬೊಗಳಿ ಗಲಾಟೆ ಮಾಡುತ್ತದೆ. ಯಾವ ಆಸ್ತಿ, ಜೀವನ ಭದ್ರತೆಯೂ ಇರದ ಸಿದ್ದನಂತವರ ಅತಂತ್ರ ಬದುಕನ್ನು ಸಂಕೇತಿಸುವ ಈ ಘಟನೆ ಸಿದ್ದನನ್ನು ಮಂಗನ ಬ್ಯಾಟೆಗೆ ದೂಡಿ, ನಂತರ ಆ ಮಂಗಗಳು ಪೇಟೆಗೆ ಅಟ್ಟಲ್ಪಟ್ಟು ಅಲ್ಲಿ ಆ ಮಂಗಗಳಿಂದ ಪೇಟೆಯ ಜನ ನಾನಾರೀತಿಯ ಉಪದ್ರವ ಅನುಭವಿಸಿ ಕೊನೆಗೆ ಮಂಗಗಳೆಲ್ಲಾ ಪುನಃ ಕಾಡಿಗೆ ರವಾನಿಸಲ್ಪಡುವುದರೊಂದಿಗೆ ಪುಸ್ತಕ ಮುಗಿಯುತ್ತದೆ.

ಇಲ್ಲಿ ಕಾಣುವ ದುರಂತವೆಂದರೆ ಸಿದ್ದ ಹೇಗೆ ಅತಂತ್ರನೊ, ಆ ಮಂಗಗಳ ಜೀವನವೂ ಅತಂತ್ರವೆ. ಹಳ್ಳಿಯ ರೈತರು, ಪೇಟೆಯ ಮಂದಿ, ಮಠಾಧೀಶರು, ಪೊಲೀಸರು, ಆದಿವಾಸಿಗಳು... ಹೀಗೆ ಮಲೆನಾಡು ಪ್ರಪಂಚದ ಪ್ರತಿಯೊಂದೂ ಇನ್ನೊಂದರ ವಿರುದ್ಧ ಸಿದ್ದನ ನಾಯಿಯು ಬೊಗಳಿ ಸಿದ್ದನನ್ನೇ ಪರಕೀಯಗೊಳಿಸಿದಂತೆ ಗುರುಗುಟ್ಟುತ್ತಾ, ಒಂದು ಸಮುದಾಯ ಮತ್ತೊಂದರ ದೃಷ್ಟಿಯಲ್ಲಿ ಮಂಗಗಳಂತೆಯೇ ಉಪದ್ರವಕಾರಿಗಳೆಂಬಂತೆ ಪರಿಗಣಿತವಾಗುವ ಜೊತೆಗೆ ಅಭದ್ರತೆಯ ಚಿತ್ರಣವನ್ನು 'ಮಂಗನ ಬ್ಯಾಟೆ' ನೀಡುತ್ತದೆ.

ಜನಸಾಮಾನ್ಯರ ಒಡನಾಡಿಯಾಗಿರುವ ವಿಠ್ಠಲ ಹೆಗ್ಗಡೆಗೆ ತಮ್ಮ ಬರಹದ ಆಂತರಿಕ ಶ್ರೀಮಂತಿಕೆ ಸಾಲದೆನಿಸಿತೋ ಏನೋ. ಅದ್ದೂರಿಯಾಗಿ ಪುಸ್ತಕ ಮಾಡಿಸಿ, ಅದರ ಬೆಲೆ ಜನಸಾಮಾನ್ಯರ ಕೈಗೆಟುಕದಂತೆ ಮಾಡಿರುವುದು, ಕತೆ ಸಾಗುವಾಗ ಲೇಖಕನೊಬ್ಬನ ಸೃಜನಶೀಲ ಮಧ್ಯಪ್ರವೇಶದ ಅಗತ್ಯತೆಯನ್ನು ಕೆಲ ಬಾರಿ ನಿರ್ಲಕ್ಷಿಸಿರುವುದು, ಹೆಬ್ಬಾವು ನುಂಗಿದ ಮೇಲೂ ರೈತನೊಬ್ಬ ಬದುಕಿ ಬಂದ ಉತ್ಪ್ರೇಕ್ಷೆಯ ಘಟನೆಯನ್ನು ನಿಜವೆಂಬಂತೆ ಬಿಂಬಿಸಿರುವುದು.... ಇಂತಹ ಕೆಲ ಮಿತಿಗಳನ್ನು ಹೊರತುಪಡಿಸಿದರೆ ಓದಿನ ಮುದ-ಖುಷಿ ನೀಡುವ ಪುಸ್ತಕ ಇದು.



ಡ್ಯೂಮಾಸ್

ಈಗ್ಗೆ ಎರಡು ವರ್ಷಗಳ ಹಿಂದೆ ವಿಠ್ಠಲ್ ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಅವರಿಗಿರುವ ಬರವಣಿಗೆಯ ಸಾಧ್ಯತೆಗಳ ಬಗ್ಗೆ ನಮ್ಮ ಆಫೀಸ್‌ನಲ್ಲಿ ಸುದೀರ್ಘವಾಗಿ ಚರ್ಚಿಸಿ ಹರಟಿದ್ದೆವು.

ವಿಠ್ಠಲ್ ಅದನ್ನೀಗ ಸಾಧಿಸಿ ತೋರಿಸಿದ್ದಾರೆ.

ಲೇಖಕನೊಬ್ಬ ತನ್ನ ಕೃತಿಯೊಂದಿಗೆ ಎಷ್ಟು ಕಾಲ ಇರಬೇಕೆಂಬ ಪ್ರಶ್ನೆಗೆ ಉತ್ತರ ಹುಡುಕುವಾಗ ಇಲ್ಲಿ ಇನ್ನೊಂದೆರಡು ಪ್ರಸಂಗಗಳ ಬಗ್ಗೆ ಹೇಳಬಹುದು.

ಗೆಳೆಯ ಶಿವಸುಂದರ್ ಆವಾಗೀವಾಗ ಪದ್ಯಗಳನ್ನೂ ಬರೆಯುವುದುಂಟು. ಮೊನ್ನೆ ಅವರಿಗೆ "ನಿಮ್ಮ ಪದ್ಯಗಳು ಎಷ್ಟಿವೆ... ಒಂದು ಕವನ ಸಂಕಲನ ಮಾಡಿ ಪ್ರಕಟಿಸಬಹುದಾ?" ಅಂತ ಕೇಳಿದಾಗ ಶಿವಸುಂದರ್ ಆಕಾಶದತ್ತ ಕೈಮಾಡಿ ನಕ್ಕು ಸುಮ್ಮನಾದರು. ಅಸಲಿ ವಿಚಾರ ಏನೆಂದರೆ ಅವರು ಬರೆದ ಪದ್ಯಗಳ ಪ್ರತಿಯೇ ಅವರ ಹತ್ತಿರ ಇಲ್ಲ ಅಂತಾ ನಮಗೆ ಗೊತ್ತಾಗಲು ತಡವಾಗಲಿಲ್ಲ. ಗೆಳೆಯರಾದ ತಪ್ಪಿಗೆ ಈಗ ನಾವೇ ಅವನ್ನೆಲ್ಲಾ ಹುಡುಕಬೇಕಾಗಿ ಬಂದಿದೆ.

ಸಾರಾಂಶದಲ್ಲಿ ಹೇಳಬೇಕೆಂದರೆ ಶಿವಸುಂದರ್ ತಮ್ಮ ಪದ್ಯಗಳಿಂದ ಅವನ್ನು ಬರೆದು ಮುಗಿಸಿದ ಬೆನ್ನಲ್ಲೆ ಕಳಚಿಕೊಂಡಿದ್ದರು ಅಥವಾ ಅದರೊಂದಿಗೆ ದೀರ್ಘಕಾಲ ಇರಬಯಸಿರಲಿಲ್ಲ.

ಜಗತ್ಪ್ರಸಿದ್ಧ ಫ್ರೆಂಚ್ ಲೇಖಕ ಅಲೆಗ್ಸಾಂಡರ್ ಡ್ಯೂಮಾಸ್ ನ[illegible] ಇನ್ನೂ ವಿಚಿತ್ರವಾಗಿದೆ. ಆಫ್ರಿಕಾ ಮೂಲದ ಗುಲಾಮ ಹೆಣ್ಣು[illegible] ಫ್ರೆಂಚ್ ಗಣ್ಯನೊಬ್ಬನ ಸಂತತಿಯ ಡ್ಯೂಮಾಸ್ ಬದುಕಿದ್ದು ಕೇವಲ ಅರವತ್ತೆಂಟು ವರ್ಷ ಮಾತ್ರ. ನನಗೂ ಇಷ್ಟವಾದ ಅವನ ದಿ ಕೌಂಟ್ ಆಫ್ ಮಾಂಟೆಕ್ರಿಸ್ಟೊ, ತ್ರೀ ಮಸ್ಕಿಟೀಯರ್ಸ್, ಟ್ವೆಂಟಿ ಇಯರ್ಸ್ ಆಫ್ಟರ್ ಪುಸ್ತಕಗಳನ್ನೂ ಸೇರಿಸಿ ಡ್ಯೂಮಾಸ್ ಒಟ್ಟು ಬರೆದದ್ದು ಎಷ್ಟು ಗೊತ್ತೆ?

ಒಂದು ಲಕ್ಷ ಪುಟಗಳ ಸಾಹಿತ್ಯ!

ಡ್ಯೂಮಾಸ್‌ಗೆ ಬರವಣಿಗೆಯ ಗೀಳು ಬಿಟ್ಟರೆ ಬೇರೇನೂ passion ಇರಲಿಲ್ಲ. ಇನ್ನು ತನ್ನ ಕೃತಿಗಳ ಬಗ್ಗೆ ತೀರಾ ಅಬ್ಸೆಷನ್ ಇರಲಿಲ್ಲ. ಅವನೊಂದು ಪುಸ್ತಕದ ಬರವಣಿಗೆ ಶುರು ಮಾಡಿ ಮುಂದೊಂದು ದಿನ ಮಧ್ಯಾಹ್ನದ ವೇಳೆಗೆ ಅದನ್ನು ಮುಗಿಸಿದ ಎಂದಿಟ್ಟುಕೊಳ್ಳಿ. ಡ್ಯೂಮಸ್ ಲಂಚ್ ಮುಗಿಸಿದ ನಂತರ ಕ್ಷಣವೂ ವಿರಮಿಸದೆ ಸಂಜೆಯೊಳಗಾಗಿ ಹೊಸ ಪುಸ್ತಕದ ಬರವಣಿಗೆ ಆರಂಭಿಸಿರುತ್ತಿದ್ದ. ಹೀಗೆ ಬಿಟ್ಟುಬಿಡದೆ ಬರೆದರೂ ಡ್ಯೂಮಾಸ್ ತನ್ನ ಓದುಗರಿಗೆ ಎಂದೂ ನಿರಾಶೆ ಮಾಡಲಿಲ್ಲ.

ಇಲ್ಲಿ ಇಷ್ಟೆಲ್ಲ ಹೀಗೆ ಹರಟಿದ್ದೇಕೆಂದರೆ ವಿಠ್ಠಲ ಹೆಗ್ಗಡೆಯವರ ಪುಸ್ತಕ ಜನರ ಕೈಗೆ ತಲುಪಲು ಶುರುವಾಗಿ ಈಗಾಗಲೇ ಒಂದು ತಿಂಗಳಾಗುತ್ತ ಬಂದಿದೆ. ಅವರು 'ಮಂಗನ ಬ್ಯಾಟೆ'ಯ ಚರ್ಚೆ, ವಿಮರ್ಶೆಗಳನ್ನು ಓದುಗರಿಗೆ ಬಿಟ್ಟು ಬೇಗನೆ ಹೊಸ ಕೃತಿಯ ಬೆನ್ನತ್ತಿ ಹೋಗಬೇಕು. ಮಲೆನಾಡಿನ ಅಕ್ಷಯ ಪಾತ್ರೆಯಂತಹ ಬದುಕಿನಿಂದ ಕನ್ನಡ ಸಾಹಿತ್ಯದ ಅಕ್ಷರ ಪಾತ್ರೆ ತುಂಬಿಸುವ ಸೃಜನಶೀಲ ಸವಾಲನ್ನು ವಿಠ್ಠಲ್ ಕೂಡ ಕೈಗೆತ್ತಿಕೊಳ್ಳಲಿ.

ಲೇಖಕನೊಬ್ಬ ತನ್ನ ಕೃತಿಯೊಂದಿಗೆ ದೀರ್ಘಕಾಲ ಇರಬಾರದೆಂಬುದು ನನ್ನ ವಿನಮ್ರ ಸಲಹೆ... ಇದು ಸರಿಯಾ?

ನರ್ಸ್ ಜೆಸಿಂತಾ



ಮಂಗಳೂರು ಮೂಲದ ನರ್ಸ್ ಜೆಸಿಂತಾ ಆತ್ಮಹತ್ಯೆ ಪ್ರಕರಣ ಇಡೀ ಜಗತ್ತನ್ನೇ ಅಲುಗಾಡಿಸಿದ ಒಂದು ದುರಂತ ಘಟನೆಯಂತೆ ಸುದ್ದಿ ಮಾಡಿದೆ.

ಈ ಘಟನೆಯ ನೈಜ ದುರಂತವಿರುವುದು ಜೆಸಿಂತಾ ಎಂಬ ಮೃದು ಸ್ವಭಾವದ ಮಹಿಳೆಯ ಆತ್ಮಹತ್ಯೆಯ ಪೆದ್ದು ತೀರ್ಮಾನದಲ್ಲಿ ಮಾತ್ರ.

ಇಂಗ್ಲೆಂಡಿನ ಹುಡುಗಿ ಕೇಟ್ ರಾಜಕುಮಾರ ವಿಲಿಯಂವರ್ಸ್ನನ್ನು ಮದುವೆಯಾಗಿ ರಾಜಕುಮಾರಿ ಎನಿಸಿಕೊಂಡಿದ್ದಾಳೆ. ಅವಳೀಗ ಎಳೆಯ ಗರ್ಭಿಣಿ. ಈ ಜಗತ್ತಿನಲ್ಲಿ ಎಲ್ಲಾ ಗರ್ಭಿಣಿಯರಿಗೂ ಆಗುವಂತೆ ತಲೆಸುತ್ತು, ವಾಂತಿ, ಸುಸ್ತುಗಳೆಲ್ಲಾ ಕೇಟ್‌ಗೂ ಆಗಿತ್ತು. ಆದರೆ ಬೇರೆ ಹೆಣ್ಣುಮಕ್ಕಳು ಇಂತಹದರ ನಡುವೆಯೂ ತಮ್ಮ ಕೆಲಸ ತಾವು ಮಾಡಿಕೊಂಡಿರುತ್ತಾರೆ. ಆದರೆ ಅರಮನೆಯ ಜನರಿಗೆ ಮಾಡಲು ಬೇರೇನೂ ಕೆಲಸ ಇರುವುದಿಲ್ಲವಾದ್ದರಿಂದ ಸೀದಾ ಹೋಗಿ ಅರಮನೆಯವರ ತಂಗುದಾಣವಾಗಿರುವ ಕಿಂಗ್ ಜಾರ್ಜ್ ಆಸ್ಪತ್ರೆ ಸೇರಿಕೊಂಡಿದ್ದರು. ಕೇಟ್ ತರದವರು ಮಾಡಿಕೊಳ್ಳುವ ನಿಸರ್ಗ ಸಹಜವಾದ ಒಂದು ವಾಂತಿಯನ್ನೇ ಸುನಾಮಿ ರೇಂಜಿಗೆ ಬಿಂಬಿಸುವ ಮೀಡಿಯಾಗಳು ಇಂಗ್ಲೆಂಡ್- ಅಮೆರಿಕಾ- ಆಸ್ಟ್ರೇಲಿಯಾಗಳಲ್ಲಿವೆ. ಅಂತದ್ದನ್ನು ಹೆಕ್ಕಿ ತಿನ್ನುವ ಅಸಂಬದ್ಧ ಚಾಳಿಯನ್ನೂ ಇವು ಜನರಿಗೆ ಕಲಿಸಿವೆ. ಹಾಗಾಗಿಯೇ ಕೇಟ್ ಆಸ್ಪತ್ರೆಯಲ್ಲಿ ಹೇಗಿದ್ದಾಳೆ ಎಂದು ಪತ್ತೆ ಮಾಡಿ ತಿಳಿಯಲು ಆಸ್ಟ್ರೇಲಿಯಾದ ಎಫ್‌ಎಂ ರೇಡಿಯೋ ಒಂದರ ಜಾಕಿಗಳಿಬ್ಬರು ಫೋನ್ ಮಾಡಿ ಜೆಸಿಂತಾ ಮೂಲಕ ಕೇಟ್‌ಳ ವಾರ್ಡ್‌ನಲ್ಲಿದ್ದ ಇನ್ನೊಬ್ಬ ನರ್ಸ್ ಜೊತೆ ತಾವು ಇಂಗ್ಲೆಂಡಿನ ರಾಣಿ ಹಾಗೂ ಪ್ರಿನ್ಸ್ ಚಾರ್ಲ್ಸ್ ಎಂಬಂತೆ ಮಾತಾಡಿ, ಅಲ್ಲಿ ಸಿಕ್ಕ ಮಾಹಿತಿಯನ್ನೇ ಸುದ್ದಿ ಮಾಡಿ ಬಾಲಿಶ ಸಂಭ್ರಮ ಪಟ್ಟಿದ್ದರು.

ನಕ್ಕು ಸುಮ್ಮನಾಗಬಹುದಿದ್ದ ಈ ವಿಚಾರ ದೊಡ್ಡ ಅಪರಾಧ ಎಂಬಂತಾಗಿದ್ದು ಅರಮನೆಯವರ ದುರಹಂಕಾರದಿಂದ.

ಅರಮನೆಯ ಖಾಸಗಿ ವಿಚಾರ ಯಾರೋ ಆರ್ಡಿನರಿ ಪತ್ರಕರ್ತರ ಕೈಗೆಟುಕಿದ್ದು, ಕೇಟ್ ಗರ್ಭಿಣಿ ಎಂಬ ಸುದ್ದಿ ಅರಮನೆಯವರೇ ಹೇಳುವ ಮುನ್ನ ಬಹಿರಂಗವಾಗಿದ್ದೇ ದೊಡ್ಡ ಅಪರಾಧವೆಂಬಂತೆ ಪ್ರಿನ್ಸ್ ವಿಲಿಯಮ್ಸ್ ಕೆಂಡಾಮಂಡಲನಾದನಂತೆ.

ನರ್ಸ್ ಜೆಸಿಂತಾರನ್ನು ಇದಕ್ಕೆ ಹೊಣೆ ಮಾಡಿ ದೂಷಿಸಲಾಯಿತು.

ಇಷ್ಟಕ್ಕೂ ಕೇಟ್ ಜನ್ಮ ನೀಡಲಿರುವ ಮಗುವಿನ ತಲೆಯಲ್ಲಿ ಕೊಂಬಾಗಲಿ ಅಥವಾ ಕೆಳಗಡೆ ಬಾಲವಾಗಲಿ ಇರುತ್ತಿರಲಿಲ್ಲ. ಅದೂ ಕೂಡಾ ಈ ಜಗತ್ತಿನ ಕೋಟಿಗಟ್ಟಲೆ ಮಕ್ಕಳಂತೆ ಸಹಜ ರೂಪ ಆಕಾರದಲ್ಲೇ ಜನ್ಮ ತಾಳಬೇಕಲ್ಲವೆ? ಆದರೆ ಇಂಗ್ಲೆಂಡ್ ರಾಜ ಕುಟುಂಬ ಎದ್ದರೂ-ಬಿದ್ದರೂ, ಕೆಮ್ಮಿ ಕ್ಯಾಕರಿಸಿದ್ದನ್ನೆಲ್ಲಾ ಸುದ್ದಿ ಮಾಡುವ ಚಟದ ಮೀಡಿಯಾಗಳಿಗೆ ಮಾರಾಟ ಮಾಡಲು ಇಂತದ್ದೇ ಸರಕು ಬೇಕು. ಇಲ್ಲೊಂದು ವಿಪರ್ಯಾಸ ಗಮನಿಸಿ, ಕೇಟ್ ರೀತಿಯ ಗರ್ಭಿಣಿಯಾಗಿದ್ದ ಸವಿತಾ ಹಾಲಪ್ಪನವರ್‌ಗೆ ಗರ್ಭಸ್ರಾವವಾದಾಗ ಚಿಕಿತ್ಸೆ ನೀಡದೆ ಸಾಯಲು ಬಿಟ್ಟ ವ್ಯವಸ್ಥೆಯೂ ಅಲ್ಲಿತ್ತು. ಮತ್ತೊಂದೆಡೆ ಕೇಟ್‌ಳ ಜುಜುಬಿ ವಾಂತಿಯೂ ಜಗತ್ಪ್ರಳಯವೆಂಬಂತೆ ಗಾಬರಿ ನಟಿಸುವ ಜನರೂ ಅಲ್ಲಿದ್ದಾರೆ.




ಈ ದುರಂತಕ್ಕೆ ಸಂಬಂಧಿಸಿದಂತೆ ಆ ಪತ್ರಕರ್ತರಿಬ್ಬರೂ ಕ್ಷಮೆ ಕೇಳಿದ್ದಾರೆ. ಆದರೆ ಜೆಸಿಂತಾಳ ನರಬಲಿ ತೆಗೆದುಕೊಂಡ ಅಹಂಕಾರದ ಅರಮನೆಯ ಜನ ಕ್ಷಮೆ ಕೇಳದೆ ಬರಿದೇ ವಿಷಾದ ವ್ಯಕ್ತಪಡಿಸಿದ್ದಾರೆ.

ಜೆಸಿಂತಾ ಕೂಡ ಕ್ಷಮೆ ಕೋರಿ ಇರಬಹುದಿತ್ತು. ಆದರೆ ಆಕೆ ಪೆದ್ದು ಪೆದ್ದಾಗಿ ಆತ್ಮಹತ್ಯೆ ಮಾಡಿಕೊಂಡು ರಾಜಮನೆತನವೆಂದರೆ ಅವತಾರ ಪುರುಷರೆಂಬ ನಂಬಿಕೆಗೆ ಇನ್ನಷ್ಟು ಪುಷ್ಟಿ ನೀಡಿದ್ದಾರೆ ಅಷ್ಟೆ.

ಧೋನಿಯ ಗೋಳು

ಆಟದಲ್ಲಿ ಗೆದ್ದರೆ 'ಆಡಲು ಬಂದಿದ್ದೆ' ಅನ್ನುವುದು, ಆಕಸ್ಮಾತ್ ಸೋತರೆ 'ನೋಡಲು ಬಂದಿದ್ದೆ' ಅನ್ನುವ ಕ್ಯಾಟಗರಿಗೆ ಸೇರಿದವನಂತೆ ಕಾಣುವ ಇಂಡಿಯನ್ ಕ್ರಿಕೆಟ್ ಕ್ಯಾಪ್ಟನ್ ಮಹೇಂದ್ರ ಸಿಂಗ್ ಧೋನಿ ಮೇಲೆ ಈಗ ಬೈಯ್ಗುಳಗಳ ಬೌನ್ಸರ್ ಸುರಿಮಳೆಯಾಗುತ್ತಿದೆ.



ಇಂಗ್ಲೆಂಡ್ ಟೀಂನವರು ಧೋನಿ ಟೀಂ ಅನ್ನು ಚೆನ್ನಾಗಿ ಜಪ್ಪಿ ಹರಿದೆಸೆದಿದ್ದಾರೆ. ನಮ್ಮ ತಂಡ ಸೋಲಲು ಶುರು ಮಾಡಿದಾಗ ಈ ಧೋನಿ ಮೊದಲು 'ಪಿಚ್ ಚೆನ್ನಾಗಿರಲಿಲ್ಲ' ಅಂದ. ಮೀಡಿಯಾಗಳೆಲ್ಲ ಅದನ್ನೇ ನಂಬಿದಂತೆ 'ಪಿಚ್ ಅನಿರೀಕ್ಷಿತವಾಗಿ ವರ್ತಿಸುತ್ತಿದೆ' ಎಂದು ತಿಪ್ಪೆ ಸಾರಿಸಿದವು. ಇನ್ನೊಮ್ಮೆ ಧೋನಿ 'ನಮ್ಮ ಬ್ಯಾಟ್ಸ್‌ಮನ್‌ಗಳು ಸರಿಯಾಗಿ ಆಡಲಿಲ್ಲ' ಅಂದ. ಮಗದೊಮ್ಮೆ 'ನಮ್ಮ ಬೌಲರ್‌ಗಳು ಕಳಪೆ ಪ್ರದರ್ಶನ ನೀಡಿದರು' ಅಂದ. ನಮ್ಮ ಮೀಡಿಯಗಳೆಲ್ಲಾ ಯಥಾವತ್ ಅದನ್ನೇ ಬಿಂಬಿಸಿ ತಂಡದ ಸೋಲಿಗೆ ಇದೇ ತರದ ಅಮೂರ್ತ ಕಾರಣಗಳ ಮೇಲೆ ಆರೋಪ ಹೊರಿಸಿಬಿಟ್ಟವು.


ಆದರೆ ಇಂಗ್ಲೆಂಡ್ ಟೀಂನವರು ಆಡಿದ್ದು, ಗೆದ್ದಿದ್ದು ಅದೇ ಪಿಚ್‌ನಲ್ಲಿ ಅಲ್ಲವೆ? ಎಂಬ ಪ್ರಶ್ನೆಯನ್ನು ಮಾತ್ರ ಯಾರೂ ಧೋನಿಗೆ ಕೇಳಲಿಲ್ಲ. ಆ ತಂಡದ ಬೌಲರ್‌ಗಳಿಗೆ, ಬ್ಯಾಟ್ಸ್‌ಮನ್‌ಗಳಿಗೆ ಸಾಧ್ಯವಾಗಿದ್ದು ನಮ್ಮವರಿಗೇಕೆ ಅಸಾಧ್ಯವಾಯಿತೆಂಬ ಪ್ರಶ್ನೆಯನ್ನು ಯಾರು ಕೇಳುವುದೂ ಇಲ್ಲ ಬಿಡಿ.

ಪಿಚ್ ನಮಗೆ ಅನುಕೂಲವಾಗುವಂತೆ ಮಾಡಿಕೊಂಡು, ಬ್ಯಾಟ್ಸ್‌ಮನ್ ಬೌಲರ್‌ಗಳೆಲ್ಲಾ ಚೆನ್ನಾಗಿ ಆಡಿದರೆ ಗೆಲ್ಲುವುದೇನು ಮಹಾ! 'ಇಂಗು ತೆಂಗು ಇದ್ದರೆ ಮಂಗಾನೂ ಚೆನ್ನಾಗಿ ಅಡುಗೆ ಮಾಡುತ್ತೆ' ಎನ್ನುವ ಗಾದೆ ಮಾತಿನಂತಿದೆ ಇದು. ಸೊನ್ನೆ ಸುತ್ತಿದ್ದರೂ ಸೆಂಚುರಿ ಹೊಡೆದವರಂತೆ ಪೋಜು ಕೊಡುವ, ಸೆಲೆಬ್ರಿಟಿಗಳಂತೆ ಸದಾ ಭ್ರಮಾಲೋಕದಲ್ಲಿ ಕಾಲಕಳೆಯುವ ನಮ್ಮ ಕ್ರಿಕೆಟಿಗರಿಗೆ ನಿಜವಾದ ಸವಾಲು ಎದುರಾದಾಗ ಇನ್ನೊಬ್ಬರ ಮೇಲೆ ತಪ್ಪು ಹೊರಿಸಿ ಎಸ್ಕೇಪಾಗುವ ಗುಣ ಕರಗತವಾಗಿದೆ. ಕ್ರಿಕೆಟ್ ಕೌಶಲ್ಯಕ್ಕಿಂತಾ ಈ ವಿದ್ಯೆಯಲ್ಲೇ ಇವರ ಪರಿಣಿತಿ ಜಾಸ್ತಿ.

ಎಸ್.ಎಂ.ಕೃಷ್ಣ ಎಲ್ಲಿ?

ದಿಲ್ಲಿ ದರ್ಬಾರಿನಿಂದ ಹೊರದಬ್ಬಿಸಿಕೊಂಡು ಕರ್ನಾಟಕಕ್ಕೆ ವಾಪಸ್ ಬಂದಿರುವ ಎಸ್.ಎಂ.ಕೃಷ್ಣ ಮುಖ ಈಗೆಲ್ಲೂ ಕಾಣುತ್ತಿಲ್ಲ. ಕಾಂಗ್ರೆಸ್‌ನ ಸ್ಥಳೀಯ ನಾಯಕರು ಹೇಳುತ್ತಿರುವುದನ್ನು ನಂಬಬಹುದಾದರೆ ಕೃಷ್ಣ ಮುಂಬರಲಿರುವ ಅಸೆಂಬ್ಲಿ ಎಲೆಕ್ಷನ್ ವೇಳೆಗೆ ತನ್ನ ನಾಯಕತ್ವ ಅನಿವಾರ್ಯವಾಗುವಂತಹ ಸನ್ನಿವೇಶ ನಿರ್ಮಿಸಲು ಒಳಗೊಳಗೇ ಮಸಲತ್ತು ನಡೆಸುತ್ತಿದ್ದಾರಂತೆ.

ಇದರಿಂದ ಕಾಂಗ್ರೆಸ್‌ಗಂತೂ ಉಪಯೋಗವಿಲ್ಲ. ಅದರ ಬದಲಾಗಿ ಪಕ್ಷದೊಳಗೆ ಗುಂಪುಗಾರಿಕೆ ಇನ್ನಷ್ಟು ಜಾಸ್ತಿಯಾಗಲೂಬಹುದು. ದಿಲ್ಲಿಯಲ್ಲಿ ಮಂತ್ರಿ ಪದವಿ ಕಳೆದುಕೊಂಡು ಬೆಂಗಳೂರಿಗೆ ಹೊರಡುವಾಗ 'ವಿದೇಶಾಂಗ ಸಚಿವರಾಗಿ ಎಂಟು ಲಕ್ಷ ಕಿಲೋಮೀಟರ್ ಸುತ್ತಾಡಿದ್ದೀನಿ' ಎಂಬುದನ್ನು ಅದೊಂದು ದಾಖಲೆ ಹಾಗೂ ಅದೇ ಒಂದು ಸಾಧನೆಯೆಂಬಂತೆ ಬಿಂಬಿಸಿದ್ದರು. ಆದರೆ ಕೃಷ್ಣ ಬೆಂಗಳೂರು ಏರ್‌ಪೋರ್ಟ್‌ನಿಂದ ಸಿಟಿಯೊಳಗೆ ಮುವತ್ತು ಕಿಲೋಮೀಟರ್ ಮೆರವಣಿಗೆಯಲ್ಲಿ ಬರುವಾಗ ಅವರ ಕಾರಿನ ಎಡಬಲದಲ್ಲಿ ಇದ್ದವರು ಡಿ.ಕೆ.ಶಿವಕುಮಾರ್ ಹಾಗೂ ಆರ್.ವಿ.ದೇವರಾಜ್ ತರದ ಒರಟು ರಾಜಕಾರಣಿಗಳು. ಇದೊಂತರಾ ದೇಶವೆಲ್ಲಾ ಗೆಲ್ಲಲು ಹೊರಟವನು ಊರ ಬಾಗಿಲಲ್ಲೇ ಎಡವಿಬಿದ್ದಂತೆ ಕಾಣುತ್ತಿತ್ತು. ಕರ್ನಾಟಕದ ಜನ ಇವರ ಮುಖಗಳನ್ನು ನೋಡಿ ಕಾಂಗ್ರೆಸ್‌ಗೆ ಓಟು ಹಾಕುವುದಿಲ್ಲ ಎಂಬ ಸಿಂಪಲ್ ಸತ್ಯವೂ ಕೃಷ್ಣಗೆ ಗೊತ್ತಿದ್ದಂತಿಲ್ಲ. ಭಾರತದಂತಹ ದೊಡ್ಡ ದೇಶದ ವಿದೇಶಾಂಗ ಮಂತ್ರಿಯಾದವನು ಇನ್ನೊಂದು ದೇಶದವನ ಭಾಷಣ ಓದಬಾರದೆಂಬ ಕಾಮನ್‌ಸೆನ್ಸ್ ಇರದ, ಜನರೆದುರು ಲೋಕನಾಯಕ ನಂತೆ ಪೋಜು ಕೊಡುವಾಗ ಆರ್.ವಿ. ದೇವರಾಜ್ ತರದ ರೌಡಿ ರಾಜಕಾರಣಿಗಳನ್ನು ಪಕ್ಕದಲ್ಲಿರಿಸಿಕೊಳ್ಳಬಾರದೆಂಬ ಪರಿಜ್ಞಾನವೂ ಇರದ ಕೃಷ್ಣ ಇನ್ನೇನು ಸಾಧಿಸಿಯಾರು?



ಮೂಲತಃ ಕಾಂಗ್ರೆಸ್ ಮಹಾನ್ ಭ್ರಷ್ಟ ಪಕ್ಷ. ಅಲ್ಲಿ ದೇಶ ಕಟ್ಟುವ ಕನಸುಗಾರರಿಲ್ಲ. ಅದಕ್ಷತೆಯು ಅನರ್ಹತೆಗೆ ಒಂದು ಮಾನದಂಡವೂ ಆಗಿಲ್ಲ. ಅಂತಾ ನಾಲಾಯಕ್ ಪಕ್ಷದಲ್ಲೂ ಮಂತ್ರಿ ಪದವಿ ಕಳೆದುಕೊಳ್ಳುತ್ತಾರೆಂದರೆ ಕೃಷ್ಣ ಅದಿನ್ನೆಂತಾ ನಾಲಾಯಕ್ ಇರಬಹುದು ಯೋಚಿಸಿ?

ಅರಾಜಕ ವ್ಯವಸ್ಥೆಯಲ್ಲಿ ಮಹಿಳೆಯರ ಬಲಿ

ಮೊನ್ನೆ ದೆಹಲಿಯಲ್ಲಿ ಸಾಮೂಹಿಕ ...ಾರಕ್ಕೆ ಗುರಿಯಾಗಿ ಈಗ ಸಾವುಬದುಕಿನ ...ತೋಯ್ದಾಡುತ್ತಿರುವ ಯುವತಿಯ ಬಗ್ಗೆ ...ಸಿದಾಗಲೆಲ್ಲ ನನ್ನ ಬೆನ್ನೆಲುಬೇ ...ವಂತಾಗುತ್ತದೆ. ಆಕೆ ಬದುಕುಳಿಯಲಿ ಎಂದು ...ತ್ತಾ ಅವಳ ಪ್ರಸ್ತುತ ಸ್ಥಿತಿಗತಿಯನ್ನು ಚೆಕ್ ...ು ಇಂಟರ್‌ನೆಟ್‌ನಲ್ಲಿ 'ಗೂಗಲ್ ನ್ಯೂಸ್' ...ಕ್ಲಿಕ್ ಮಾಡಿದಾಗಲೆಲ್ಲ ನನ್ನ ಹೃದಯವನ್ನು ...ಹದ್ದೋ ಭಯ ಆವರಿಸುತ್ತದೆ. ಆಕೆ ...ವಿಸಿದ ಯಾತನೆಯ ಕುರಿತು ಮನಸ್ಸು ...ದಾಗಲೆಲ್ಲ ಕರುಳು ಹಿಂಡುತ್ತದೆ, ಕಣ್ಣಲ್ಲಿ ನೀರು ...ುತ್ತದೆ.

...ಬುಧವಾರ ರಾತ್ರಿ ಇದನ್ನು ಬರೆಯುತ್ತಿರುವಾಗ ಆ ...ತಿ ಕೋಮಾದಲ್ಲಿದ್ದಾಳೆ; ಆಕೆಯ ಪ್ರಾಣವನ್ನು ...ು ವೈದ್ಯರು ಈಗಾಗಲೇ ಜರ್ಜರಿತವಾಗಿರುವ ... ದೇಹದ ಮೇಲೆ ಐದನೆ ಬಾರಿ ಆಪರೇಷನ್ ...ದ್ದಾರೆ. ಆಕೆಯ ಯೋನಿಯಲ್ಲಿ ನಿಲ್ಲಿಸಲಾಗದಷ್ಟು ...ವವಾಗುತ್ತಿದೆ. ದಾಳಿಯಲ್ಲಿ ಆಕೆಯ ಕರುಳಿನ ...ಳು ನಾಶವಾಗಿದ್ದರಿಂದ ವೈದ್ಯರು ಅಂತಹ ...ಳನ್ನೆಲ್ಲ ಕಿತ್ತುಹಾಕಿ ಆಕೆಯನ್ನು ಉಳಿಸಿಕೊಳ್ಳಲು ...ುತ್ತಿದ್ದಾರೆ. ಆದರೂ ಆಕೆಯ ವಿವಿಧ ಅಂಗಗಳು ...ಂದಾಗಿ ಕೈಚೆಲ್ಲುತ್ತಿವೆ. ಆಕೆ ...ಳಿಯುವುದೇ ಕಷ್ಟ ಎನಿಸುತ್ತಿದೆ. ಆಕಸ್ಮಾತ್ ...ದುಕುಳಿದರೂ ಆಕೆ ಎದುರಿಸಬೇಕಿರುವ ...ದ ಬಗ್ಗೆ ಯೋಚಿಸಿದರೆ ಭಯವಾಗುತ್ತದೆ...

...ಮ್ಮ ಸಮಾಜ ಇವತ್ತು ಯಾವ ಹಂತ ...ದೆ ಎಂದರೆ ಇಂಥ ಭೀಭತ್ಸ ಲೈಂಗಿಕ ದಾಳಿಗೆ ...ಾದ ಆ ಯುವತಿ ನನ್ನ ಮಗಳೋ, ನಿಮ್ಮ ...ೋ, ಪಕ್ಕದ ಮನೆಯ ಹುಡುಗಿಯೋ ...ವ ಸಾಧ್ಯತೆ ಇದೆ. ಒಂದುಕ್ಷಣ ಯೋಚಿಸಿ. ... ಪ್ರಾಣವನ್ನೇ ತೆಗೆದುಕೊಳ್ಳುವಂತಹ ಲೈಂಗಿಕ ... ತುತ್ತಾದ ಆಕೆ ಮಾಡಿದ ತಪ್ಪಾದರೂ ಏನು? ...ದೆಹಲಿಯ ಯುವತಿಯ ಮೇಲೆ ಮಾರಣಾಂತಿಕ ... ಮಾಡಿದವರು ಯಾವ ರೀತಿಯಲ್ಲೂ ...ಷ್ಯರಲ್ಲ ಬದಲಾಗಿ ಮೃಗಗಳು ಎಂದು ಹಲವರು ...ಶ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಹಾಗೆ ಹೇಳುವ ...ಕ ಅಂಥವರೆಲ್ಲರೂ ಪ್ರಾಣಿ ಜಗತ್ತಿಗೇ ...ಮಾನ ಮಾಡುತ್ತಿದ್ದಾರೆ. ಯಾಕೆಂದರೆ ಕಾಡಿನಲ್ಲಿರುವ ... ಪ್ರಾಣಿಯೂ ಅತ್ಯಾಚಾರದಂತಹ ದಾಳಿ ಮಾಡುವುದಿಲ್ಲ, ಅದು ಮನುಷ್ಯನೆಂಬ ವಿಕೃತ ಜಾತಿಗೆ ಮಾತ್ರ ಸೀಮಿತವಾಗಿರುವ ರೋಗ. ಆತನಿಂದ ಮಾತ್ರ ಇಂತಹ ಕೃತ್ಯಗಳು ಸಾಧ್ಯ.

ಜಗತ್ತಿನಲ್ಲಿರುವ ಇತರೆ ಪ್ರಾಣಿಸಂಕುಲಕ್ಕಿಂತ ಶ್ರೇಷ್ಠ ಉತ್ತಮ, ಬುದ್ಧಿವಂತ ಎಂದು ಪರಿಗಣಿಸಲಾಗಿರುವ ಮನುಷ್ಯ ಯಾಕೆ ತನ್ನೆಲ್ಲ ಮಾನವೀಯತೆಯನ್ನು ಮರೆತು ಇಂತಹ ದಾಳಿಗಳನ್ನು ನಡೆಸುತ್ತಾನೆಂದರೆ ಅದಕ್ಕೆ ಕಾರಣ ವಿವಿಧ ಧರ್ಮಗಳಲ್ಲಿ ಮತ್ತು ಸಮಸ್ತ ಸಮಾಜದಲ್ಲಿ ಅಡಕವಾಗಿರುವ ಮಹಿಳಾ ವಿರೋಧಿ ಮೌಲ್ಯಗಳು.

ಭಾರತದಲ್ಲಿ ಮಹಿಳೆಯರ ಮೇಲಾಗುವ



ಅತ್ಯಾಚಾರಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. ಉದಾಹರಣೆಗೆ 1990ರಿಂದ 2008ರವರೆಗೆ ಇಂತಹ ಪ್ರಕರಣಗಳು ದ್ವಿಗುಣಗೊಂಡವು. 2009ರಲ್ಲಿ 21,397 ಅತ್ಯಾಚಾರ ಪ್ರಕರಣಗಳು ದಾಖಲಾದವು. ಥಾಮ್ಸನ್ ರಾಯಿಟರ್ಸ್ ಫೌಂಡೇಶನ್ ನಡೆಸಿದ ಸಮೀಕ್ಷೆಯ ಪ್ರಕಾರ ಭಾರತವು ಮಹಿಳೆಯರಿಗೆ ನಾಲ್ಕನೆ ಅತಿ ಅಪಾಯಕಾರಿ ದೇಶವಾಗಿದೆ. ಮಾನವ ಹಕ್ಕು ಸಂಘಟನೆಯೊಂದು ಹೇಳಿರುವಂತೆ ಭಾರತದಲ್ಲಿ ಪ್ರತಿ 34 ನಿಮಿಷಗಳಿಗೆ ಓರ್ವ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತದೆ.

ಮಹಿಳೆ ಒಂದು ನಿರ್ಜೀವ ವಸ್ತು, ಆಕೆ ಇರುವುದೇ ಪುರುಷನ ಕಾಮತೃಷೆಯನ್ನು ನೀಗಿಸಲು, ಆಕೆಗೆ ತನ್ನದೇ ಆದ ವ್ಯಕ್ತಿತ್ವ ಇಲ್ಲ ಎಂಬ ಧೋರಣೆ ನಮ್ಮ ಸಮಾಜದ ಹೆಚ್ಚಿನ ಜನರದ್ದಾಗಿದೆ. ಈ ದೃಷ್ಟಿಕೋನ ಇರುವವರೆಗೂ ಮಹಿಳೆಯರ ಮೇಲಾಗುವ ಲೈಂಗಿಕ ದಾಳಿಗಳು ನಿಲ್ಲುವುದಿಲ್ಲ.

ಅಂದಹಾಗೆ, ದೆಹಲಿಯಲ್ಲಿ ಆ ಯುವತಿಯ ಮೇಲಾದ ಲೈಂಗಿಕ ದಾಳಿಗೂ, ಎರಡೂವರೆ ತಿಂಗಳ ಹಿಂದೆ ಕರ್ನಾಟಕದ ಧರ್ಮಸ್ಥಳದ ಹತ್ತಿರ ಸೌಜನ್ಯ ಗೌಡ ಎಂಬ ಅಮಾಯಕ ಯುವತಿಯ ಮೇಲಾದ ಅತ್ಯಾಚಾರ ಮತ್ತು ಕೊಲೆಯ ಪ್ರಕರಣಕ್ಕೂ ಅಷ್ಟೇನೂ ವ್ಯತ್ಯಾಸವಿಲ್ಲ, ವ್ಯತ್ಯಾಸ ಎಂಬುದಿದ್ದರೆ ದೆಹಲಿಯ ಯುವತಿ ಇನ್ನೂ ಬದುಕಿದ್ದರೆ ಧರ್ಮಸ್ಥಳದ ಸೌಜನ್ಯ ಮಣ್ಣುಪಾಲಾಗಿದ್ದಾಳೆ ಎಂಬುದಷ್ಟೇ.

ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯಾಗಿದ್ದ ಸೌಜನ್ಯ ಕಳೆದ ಅಕ್ಟೋಬರ್ 9ರಂದು ಕಾಲೇಜಿನಿಂದ ತನ್ನ ಮನೆಗೆ ಹಿಂದಿರುಗುತ್ತಿದ್ದಳು. ಆಗ ಆಕೆಯ ಮೇಲೆಗರಿದ ಮೂರ್ನಾಲ್ಕು ಪುಂಡರು ಆಕೆಯನ್ನು ಬಲಾತ್ಕಾರವಾಗಿ ಹೊತ್ತೊಯ್ದರು. ಆಕೆಗಾಗಿ ಮಳೆ ಸುರಿಯುತ್ತಿದ್ದ ರಾತ್ರಿಯಿಡೀ ಊರಿನ ಜನರೆಲ್ಲ ಹುಡುಕಿದರೂ ಆಕೆ ಸಿಕ್ಕಿರಲಿಲ್ಲ, ಆದರೆ ಮಾರನೆ ದಿನ ಬೆಳಗ್ಗೆ ಹತ್ತು ಗಂಟೆಗೆ ಅವಳ ಹೆಣ ನೇತ್ರಾವತಿ ನದಿಯ ಹತ್ತಿರದ ಕಾಡಿನಲ್ಲಿ ಪತ್ತೆ ಆಯಿತು. ಅದೂ ಎಂತಹ ಸ್ಥಿತಿಯಲ್ಲಿ...

ಆಕೆಯ ದೇಹ ಅರೆ ಬೆತ್ತಲಾಗಿತ್ತು, ಆಕೆಯ ಒಳ ಉಡುಪು ಮಾಯವಾಗಿತ್ತು, ಅವಳ ಮರ್ಮಾಂಗಕ್ಕೆ ಮಣ್ಣು ತುಂಬಲಾಗಿತ್ತು, ಆಕೆಯ ಕೈಗಳನ್ನು ಆಕೆಯ ವೇಲ್‌ನಿಂದ ಹತ್ತಿರದ ಪೊದೆಯೊಂದಕ್ಕೆ ಕಟ್ಟಲಾಗಿತ್ತು... ಆಕೆಯ ಮೇಲೆ ಅತ್ಯಾಚಾರ ನಡೆದದ್ದು, ಆಕೆಯನ್ನು ಕೊಂದುಹಾಕಿದ್ದು ಎಲ್ಲವೂ ಆಕೆಯ ನಿರ್ಜೀವ ದೇಹವೇ ಸಾರಿಸಾರಿ ಹೇಳುತ್ತಿತ್ತು, ಪಾಪ, ದೆಹಲಿ ಯುವತಿಯಂತೆ ಸೌಜನ್ಯ ಕೂಡ ಅಮಾನವೀಯ ರೇಪಿಸ್ಟರ ದಾಳಿಗೆ ತತ್ತರಿಸಿ ತನ್ನ

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಮಾನ-ಪ್ರಾಣ ಎರಡನ್ನೂ ಕಳೆದುಕೊಂಡಿದ್ದಳು.

ವಿಪರ್ಯಾಸ ನೋಡಿ. ರಾಜಧಾನಿ ದೆಹಲಿಯಲ್ಲಾದ ಅತ್ಯಾಚಾರದ ವಿರುದ್ಧ ನಮ್ಮ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಮಾಧ್ಯಮಗಳು ಅರಚಾಡುತ್ತಿವೆ. ಆದರೆ 'ಪುಣ್ಯಕ್ಷೇತ್ರ' ಧರ್ಮಸ್ಥಳದಲ್ಲಾದ ಸೌಜನ್ಯಳ ರೇಪ್ ಮತ್ತು ಕೊಲೆ ಪ್ರಕರಣದತ್ತ ನಮ್ಮ ಮುಖ್ಯವಾಹಿನಿಯ ಮಾಧ್ಯಮಗಳು ತಿರುಗಿಯೂ ನೋಡಿಲ್ಲ. ಮೊನ್ನೆ ವಿಧಾನಪರಿಷತ್ತಿನಲ್ಲಿ ಮೋಟಮ್ಮ ಮತ್ತು ಇತರರು ಸೌಜನ್ಯಳ ಮೇಲಾದ ಅತ್ಯಾಚಾರ ಮತ್ತು ಕೊಲೆಯನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಒತ್ತಾಯಿಸಿದ್ದೂ ಒಂದೆರಡು ಪತ್ರಿಕೆಗಳ ಒಳಪುಟಗಳಲ್ಲಿ ವರದಿ ಆಯಿತಷ್ಟೇ.

ದೆಹಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೆ ಅಲ್ಲಿನ ಪೊಲೀಸರು ಹಲವು ಆರೋಪಿಗಳನ್ನು ಬಂಧಿಸಿ ಅವರನ್ನೆಲ್ಲ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದಾರೆ. ಆದರೆ ಸೌಜನ್ಯ ಪ್ರಕರಣದಲ್ಲಿ ಏನಾಗಿದೆ ಗೊತ್ತಾ? ಬೆಳ್ತಂಗಡಿ ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ಉಪ ನಿರೀಕ್ಷಕರು ಮಾಹಿತಿ ಹಕ್ಕು ಕಾಯ್ದೆಯಡಿ ಕೊಟ್ಟಿರುವ ದಾಖಲೆಗಳಲ್ಲಿ 'ಕು. ಸೌಜನ್ಯ'ಳ ದೇಹ 'ಧರ್ಮಸ್ಥಳ ಗ್ರಾಮದ ಸ್ನಾನಘಟ್ಟದ ಬಳಿ ಇರುವ ಕಾಡುಪ್ರದೇಶದಲ್ಲಿ' ಪತ್ತೆ ಆಗಿದೆ ಎಂದೂ, ಅದನ್ನು 'ಅ.ಕ್ರ. 250/2012 ಕಲಂ 376, 302 ಭಾ.ದಂ.ಸಂ' ಅಡಿ ದಾಖಲಿಸಿಕೊಳ್ಳಲಾಗಿದೆ ಎಂದೂ ಹೇಳಿದ್ದಾರೆ. ಜೊತೆಗೆ ಅಡಿ ಟಿಪ್ಪಣಿಯಲ್ಲಿ '2001ರಿಂದ 2012ನೇ ಅಕ್ಟೋಬರ್ ತಿಂಗಳ 13 ವರೆಗೆ ಧರ್ಮಸ್ಥಳ ಮತ್ತು ಉಜಿರೆ ಗ್ರಾಮದಲ್ಲಿ ಯಾವುದೇ ಅತ್ಯಾಚಾರ ಪ್ರಕರಣಗಳು ವರದಿಯಾಗಿರುವುದಿಲ್ಲ' ಎಂದು "ಸ್ಪಷ್ಟವಾಗಿ" ಹೇಳಿದ್ದಾರೆ.

ಇದು ಸೌಜನ್ಯಳ ನಿರ್ಜೀವ ದೇಹದ ಮೇಲಾದ ನೈತಿಕ ಅತ್ಯಾಚಾರವಲ್ಲದೆ ಇನ್ನೇನು. ಈಗಲಾದರೂ ಕರ್ನಾಟಕದ ಜನ ಮುಗ್ಧ ಯುವತಿ ಸೌಜನ್ಯಳಿಗೆ ನ್ಯಾಯ ಸಿಗುವಂತೆ ಎಚ್ಚರ ವಹಿಸುವಂತಾಗಲಿ...

	ಅ.ಕ್ರ 250/2012 ಕಲಂ: 376, 302 ಭಾ.ದಂ.ಸಂ	ಧರ್ಮಸ್ಥಳ ಗ್ರಾಮದ ಸ್ನಾನಘಟ್ಟದ ಬಳಿ ಇರುವ ಕಾಡು ಪ್ರದೇಶದಲ್ಲಿ	ಕು. ಸೌಜನ್ಯ


...) 2001 ರಿಂದ 2012 ನೇ ಅಕ್ಟೋಬರ್ ತಿಂಗಳ 13 ವರೆಗೆ ಧರ್ಮಸ್ಥಳ ಮತ್ತು ಉಜಿರೆ ಗ್ರಾಮದಲ್ಲಿ ಯಾವುದೇ ಅತ್ಯಾಚಾರ ಪ್ರಕರಣಗಳು ವರದಿಯಾಗಿರುವುದಿಲ್ಲ. (ಸೌಜನ್ಯಳದು ಬರೀ ಕೊಲೆ ಎಂದ ಪೊಲೀಸರು)

ನಾನೆಂಥ ದೇಶದಲ್ಲಿ ಬದುಕುತ್ತಿದ್ದೇನೆ?

ನಾನೆಂಥ ದೇಶದಲ್ಲಿ ಬದುಕುತ್ತಿದ್ದೇನೆ?
ಸಮಾನತೆ ಎಂಬುದೆಲ್ಲಿದೆ ಇಲ್ಲಿ?
ಗಂಡಹೆಂಡಿರ,
ಮಗ ಮಗಳ,
ಸಹೋದರ ಸಹೋದರಿಯ ನಡುವೆ
ಬದಲಾಗುವ ಬದುಕಿನ ಮೌಲ್ಯಗಳಿವೆ ಇಲ್ಲಿ,
...ಹೇ ಮಿಸ್ಟರ್, ನೀನೂ ಅವರಂತೆಯೇ ಇದ್ದೀಯೇ?
...ತಾಯಂದಿರನ್ನೇ ಬದಲಾಯಿಸುವ
...ೀವು ಈ ರಾಷ್ಟ್ರಕ್ಕೇ ಅವಮಾನ.
ಮಹಿಳೆಗೆ ಸಮಾಜದಲ್ಲಿ ಇಂತಹದ್ದೇ ಪಾತ್ರವಿದೆ
ಎಂದು ಸೀಮಿತಗೊಳಿಸುವ ಸಿದ್ಧಾಂತವನ್ನೊಪ್ಪುವ ನಿಮ್ಮನ್ನು ನೋಡಿದರೆ
ನನ್ನ ಹೃದಯದಲ್ಲಿ ಆತಂಕ ಮೂಡುತ್ತದೆ.
...ದೆಲ್ಲ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ?
ನಾವು ಇಂದು ಬಿತ್ತುವ ಬೀಜ ನಾಳೆ ವಿನಾಗಿ ತಲೆ ಎತ್ತಲಿದೆ?
ನನ್ನ ತಲೆ ಸುತ್ತುತ್ತಿದೆ
ಆದರೂ ನಾನು ಒಪ್ಪುವುದಿಲ್ಲ,
ಮತ್ತೆ ಮತ್ತೆ ಪ್ರಶ್ನಿಸುತ್ತೇನೆ

ನಾನೆಂಥ ದೇಶದಲ್ಲಿ ಬದುಕುತ್ತಿದ್ದೇನೆ?

ನಾನೆಂಥ ದೇಶದಲ್ಲಿ ಬದುಕುತ್ತಿದ್ದೇನೆ?
ಪ್ರೀತಿಸುವ ಆಕೆಯ ಹಕ್ಕನ್ನೇ ಕಸಿದುಕೊಳ್ಳುವ ದೇಶದಲ್ಲಿ
ಕಬ್ಬಿಣದ ಕೈಗವಸು ತೊಟ್ಟು ಆಕೆಯ ಮೇಲೆ
ಪೈಶಾಚಿಕತನ ತೋರುವಲ್ಲಿ
ಕಾನೂನಿನ ಆತಂಕವಿಲ್ಲದೆ ಆಕೆಯ ಮೇಲೆ ಅತ್ಯಾಚಾರವೆಸಗುವಲ್ಲಿ
ಆಕೆಯ ಕಣ್ಣೀರಿಗೆ ಬೆಲೆ ಇಲ್ಲವಿಲ್ಲಿ
ನಮ್ಮ ದೇವತೆಯರನ್ನೇ ತುಚ್ಛವಾಗಿಸಿದ್ದೇವೆ
ಅವರಿಗೆ ನಾವು ಕೊಟ್ಟಿದ್ದ ಮಾತುಗಳನ್ನು ಮುರಿದಿದ್ದೇವೆ
ಲಿಂಗ ತಾರತಮ್ಯದಿಂದ ವಿಕಾರವಾಗಿರುವ ದೇಶವಾಗಿಸಿದ್ದೇವೆ.
ನಮ್ಮ ಆತ್ಮಸಾಕ್ಷಿಗೆ ಶಾಶ್ವತ ರಜೆ ಘೋಷಿಸಿದ್ದೇವೆ
ನಾನು ನನ್ನ ಮಗಳಿಗೆ ಏನೆಂದು ಹೇಳಲಿ?
ನೀನೂ ಮುಂದೆ ಬಲಿ ಆಗಲಿರುವ ಕುರಿ ಎಂದೇ?
ನಾವು ಬದಲಾಗಬೇಕಿದೆ,
ಬದಲಾವಣೆ ತರಬೇಕಿದೆ, ಎಲ್ಲವನ್ನೂ ಬದಲಾಯಿಸಬೇಕಿದೆ.
ಎಷ್ಟೇ ಕಷ್ಟ ಬಂದರೂ ಕೈಚೆಲ್ಲದೆ,



ತಲೆ ಸುತ್ತುಬಂದರೂ ಹಿಂಜರಿಯದೆ
ಮತ್ತೆ ಮತ್ತೆ ಪ್ರಶ್ನಿಸಬೇಕಿದೆ
ನಾವೆಂಥ ದೇಶದಲ್ಲಿ ಬದುಕುತ್ತಿದ್ದೇವೆ?

- ಫರಾನ್ ಅಖ್ತರ್

(ಹಿಂದಿ ಸಿನಿಮಾ ನಿರ್ದೇಶಕ ಮತ್ತು ನಟ ಫರಾನ್ ಅಖ್ತರ್ ಅವರು ಮೊನ್ನೆ ದೆಹಲಿಯಲ್ಲಿ ಯುವತಿಯ ಮೇಲಾದ ದಾಳಿ ಕುರಿತು ಬರೆದ ಕವನದ ಭಾವಾನುವಾದ)


ಉತ್ತರ ಕನ್ನಡ: ಬಿಜೆಪಿಯಲ್ಲಿ ಅಭ್ಯರ್ಥಿಗಳಿಗೆ ಬರ!!


ಉತ್ತರ ಕನ್ನಡದಲ್ಲಿ ಬಿಜೆಪಿ ಬರ್ಬಾದ್ ಆಗಿ ಹೋಗಿದೆ! ಧರ್ಮ ವಿದ್ವೇಷ ಜಾತಿ ಕಿತಾಪತಿ ರಾಜಕಾರಣದ ಕುತಂತ್ರಗಳೇ ತಿರುಗುಬಾಣವಾಗಿ ಬಿಜೆಪಿಯನ್ನು ತತ್ತರಗೊಳಿಸಿಬಿಟ್ಟಿವೆ. ಹಿಂದೂತ್ವದ ಅಮಲಿನಲ್ಲಿ ಜಿಲ್ಲೆಯ ಉದ್ದಗಲಕ್ಕೆ ಏರಿಸಿದ್ದ ಕೇಸರಿ ಬಾವುಟವನ್ನು ಅದೇ ಶೂದ್ರರೀಗ ಒಂದೊಂದಾಗಿ ಇಳಿಸುತ್ತಿದ್ದಾರೆ. ಬ್ರಾಹ್ಮಣ ಬಾಸ್‌ಗಳ ಈ ಬಿಜೆಪಿಗೆ ಅದೆಂಥ ದುರ್ಗತಿ ಬಂದಿದೆಯೆಂದರೆ, ಗತ ಕಾಲದ ಜನ ಸಂಘಕ್ಕಿಂತ ದುರ್ಬಲವಾಗಿದೆ! ಬಿಜೆಪಿ ಭೂಪರ, ದೇಶಭಕ್ತಿ-ಹಿಂದೂತ್ವ -ಶಿಸ್ತುಗಳ ಅಸಲೀ ಬಂಡವಾಳ ಗೊತ್ತಾಗಿರುವ ಜನ ಅಸಹ್ಯದಿಂದ 'ಥೀ... ಥೂ...' ಅನ್ನುತ್ತಿದ್ದಾರೆ.


ಜಿಲ್ಲೆಯಲ್ಲಿರುವ ಒಟ್ಟು ಆರು ಅಸೆಂಬ್ಲಿ ಕ್ಷೇತ್ರದಲ್ಲಿ ಚಡ್ಡಿ ಗ್ಯಾಂಗಿನ ಗಿಂಡಿ ಮಾಣಿ ಕಾಗೇರಿಯ ಶಿರಸಿ ಒಂದನ್ನು ಬಿಟ್ಟರೆ, ಉಳಿದೈದು ಕಡೆ ಬಿಜೆಪಿಗೆ ಕ್ಯಾಂಡಿಡೇಟುಗಳೇ ಸಿಗುತ್ತಿಲ್ಲ. ವಿಪ್ರ ಸಾಮ್ರಾಜ್ಯಕ್ಕಾಗಿ ಹವ್ಯಕ ಕುಲತಿಲಕರಾದ ಮಂತ್ರಿ ಕಾಗೇರಿ ಮತ್ತು ಸಂಸದ ಅನಂತ್ಮಾಣಿ ಮಧ್ಯೆ ಒಳಜಗಳ ಜೋರಾಗಿ ನಡೆಯುತ್ತಿದೆ. ಹೀಗಾಗಿ ಅಳಿದುಳಿದಿರುವ ಬಿಜೆಪಿ ಯಜಮಾನ ಕಾಗೇರಿಯೂ ಶಿರಸಿ-ಸಿದ್ದಾಪುರದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ತಿಪ್ಪರಲಾಗ ಹಾಕಬೇಕಾಗಿ ಬಂದಿದೆ. ಸ್ವಪಕ್ಷದೊಳಗಿನ ಶೂದ್ರರ ಸದೆಬಡಿಯಲು ಒಂದಾಗಿದ್ದ ಈ ಕಾಗೇರಿ ಮತ್ತು ಅನಂತ್ಮಾಣಿಗಳಿಗೆ ಕಾದಲು ಶೂದ್ರರು ಸಿಗದೆ ತಾವು-ತಾವೇ ಬಡಿದಾಡಬೇಕಾಗಿ ಬಂದಿರುವುದು ತಮಾಷೆಯಾಗಿದೆ. ಕಾಗೇರಿಯನ್ನು ಮಾಜಿ ಮಂತ್ರಿ-ಮಾಜಿ ಶಾಸಕನನ್ನಾಗಿ ಮಾಡಲು ನಾಲಾಯಕ್ ಸಂಸದ ಅನಂತ್ಮಾಣಿಯೇ ಸ್ಕೆಚ್ ಹಾಕಿಕೊಂಡು ಎಲೆಕ್ಷನ್‌ಗಾಗಿ ಕಾದು ಕುಂತಿದ್ದಾನೆ!

ಬಿಜೆಪಿ ಬಿಡಾರದಲ್ಲಿ ಆರ್‌ಎಸ್‌ಎಸ್ ಪಂಡಿತರು ಹಾಕುತ್ತಿರುವ ಟಿಕೆಟ್ ಲೆಕ್ಕಾಚಾರ ಆ ಪಾರ್ಟಿಯ ಅಧೋಗತಿಯ ಸಂಕೇತದಂತಿದೆ! ಕೊಂಚ ಜನ ಬಳಕೆಯಿರುವ ಹಿರೇ ಹುದ್ದರಿಗಳು ಒಬ್ಬೊಬ್ಬರಾಗಿ ಬಿಜೆಪಿಗೆ ಬೈ ಹೇಳುತ್ತಿದ್ದಾರೆ. ಕಾರವಾರದ ಕರ್ಮಗೇಡಿ ಆನಂದ ಅಸ್ನೋಟಿಕರ್‌ಗೆ ಬಿಜೆಪಿ ಸಹವಾಸ ಸಾಕಾಗಿದೆ. ಆತ ಕಾಂಗ್ರೆಸ್ ಸೇರಲು ತರಹೇವಾರಿ ಕಸರತ್ತು ಶುರುಮಾಡಿ ಒಂದು ವರ್ಷ ಕಳೆದಿದೆ. ಆದರೆ ಆಪರೇಷನ್ ಮಾಡಿಸಿಕೊಂಡು ಕ-ಮಲ ಸೇರಿದವರಿಗೆ ಪುನಃ ಪ್ರವೇಶ ಕೊಡ ಕೂಡದೆಂಬ ದೊಡ್ಡ ಮಟ್ಟದ ವಿರೋಧದ ಧ್ವನಿ ಕಾಂಗ್ರೆಸ್‌ನಲ್ಲಿ ಮೊಳಗುತ್ತಿದೆ. ಹಾಗಾಗಿ ಅಧಿಕಪ್ರಸಂಗಿ ಅಸ್ನೋಟಿಕರ್‌ನ ಆಸೆ ಅಷ್ಟು ಸುಲಭಕ್ಕೆ ಈಡೇರುವ ಸಾಧ್ಯತೆಯಿಲ್ಲದಾಗಿದೆ. ಕಾಂಗ್ರೆಸ್ ಕೈಗೆಟುಕದಿದ್ದರೆ ಜೆಡಿಎಸ್‌ಗೆ ನೆಗೆಯುವ ಪ್ಲಾನ್ ಅಸ್ನೋಟಿಕರ್ ಹಾಕಿಕೊಂಡಿದ್ದಾನೆ. ಒಟ್ಟಿನಲ್ಲಿ ಅಸ್ನೋಟಿಕರ್ ಬಿಜೆಪಿಯಲ್ಲಂತೂ ಇರುವುದಿಲ್ಲ. ಕಾರವಾರ-ಅಂಕೋಲಾದಲ್ಲಿ ಮೊದಲಿನಿಂದಲೂ ಬಿಜೆಪಿಗೆ ಬೇಸ್ ಇಲ್ಲ. ಈಗ ಟಿಕೆಟ್ ಬೇಕೆನ್ನುವವರೂ ಇಲ್ಲ!


ಕುಮಟಾದಲ್ಲಿ ಇಷ್ಟು ದಿನ ಬಿಜೆಪಿ ಹುರಿಯಾಳು ತಾನೇ ಎಂದು ಎದೆಯುಬ್ಬಿ ಅಂಡಲೆಯುತ್ತಿದ್ದ ದೀವರ ಹೆದ್ದು ಪೋರ ಸೂರಜ್ ನಾಯ್ಕ ಸೋನಿಗೆ ಈಗೀಗ ಉಮೇದಿ ಕಮ್ಮಿಯಾಗಿದೆ. ಸೋಲುವ ಪಾರ್ಟಿ ಟಿಕೆಟ್ ಯಾರಿಗೆ ಬೇಕು? ಆರೆಸ್ಸೆಸ್ ರಿಂಗ್ ಮಾಸ್ಟರ್‌ಗಳಿಗೆ ಈತನ ಕಂಡರಾಗದು. ಚಡ್ಡಿ ಬಳಗದ ಪಟ್ಟಿಯಲ್ಲಿರುವ ಮೊದಲ ಹೆಸರು ಕುಮಟಾ ರೈಲು ಹೋಟೇಲ್ ಸ್ವಾಗತಕಾರ ವಿನೋದ್ ಪ್ರಭುನದು. ಸಂಸದ ಅನಂತ್ಮಾಣಿ ಮತ್ತು ಮಂತ್ರಿ ಕಾಗೇರಿ ನಡುವೆ ಸಮಾನಾಂತರ ಕಾಯ್ದುಕೊಂಡಿರುವ ಈ ಕೊಂಕಣಿ ಇಬ್ಬರನ್ನು ಬ್ಯಾಲೆನ್ಸ್ ಮಾಡಿ ಗೇರು ಅಭಿವೃದ್ಧಿ ನಿಗಮದ ಗೂಟದ ಕಾರು ಹೊಡೆದುಕೊಂಡಿದ್ದಾನೆ. ಈತನಿಗೆ ತನ್ನ ಸ್ವಂತ ಹಳ್ಳಿ ಹೆಗಡೆ ಎಂಬಲ್ಲಿಯೇ ಸರಿಯಾಗಿ ಮೂರು














ಮತ್ತೊಂದು ಮತ ಬೀಳದು. ಎಲೆಕ್ಷನ್‌ಗಾಗಿ ಪಾರ್ಟಿ ಕೊಡುವ ನಿಧಿ ಮೇಲಿನ ಆಸೆಯಿಂದ ಈ ವರ್ತಕ ಬುದ್ಧಿ ಭೂಪ ಬಿಜೆಪಿ ಅಭ್ಯರ್ಥಿಯಾಗುವ ಪ್ರಯತ್ನ ನಡೆಸಿದ್ದಾನೆ.

ಬಿಜೆಪಿ ಪರಿಶೀಲನೆಯಲ್ಲಿರುವ ಇತರ ಹೆಸರೆಂದರೆ, ರೈಲು ಹೊಟೇಲ್ ಮಾಲಿಕ ಎಂ.ಜಿ.ಭಟ್ಟ, ಡಾ. ಸುರೇಶ್ ಭಟ್ಟ, ಮಂಜುನಾಥ ಗೌಡ ಎಂಬ ಜಿ.ಪಂ.ಸದಸ್ಯ ಮತ್ತು ಮಾಜಿ ಶಾಸಕ 80 ಹರೆಯದ ಅಧಿಕಾರಲಾಲಸಿ ಡಾ. ಕರ್ಕಿ. ಇವರೆಲ್ಲ ಮುಖೇಡಿಗಳು. ಜನರಿಗೆ ಒಪ್ಪಿಗೆಯಾಗದ ಮುಖಗಳು. ಡಾ. ಕರ್ಕಿ ಕ್ಷೇತ್ರದ ಜನರಿಗೆ ಅದ್ಯಾವಾಗಲೋ ಮರೆತುಹೋಗಿದ್ದಾರೆ. ಕಳೆದ ಬಾರಿ ಕೇವಲ 500 ಮತದಿಂದ ಸೋತಿದ್ದ ಶಶಿಭೂಷಣ ಹೆಗಡೆ ಬಿಜೆಪಿಗೆ ರಾಜೀನಾಮೆ ಬಿಸಾಕಿ ಜೆಡಿಎಸ್ ಸೇರಲು ಗಂಟು-ಮೂಟೆ ಕಟ್ಟುತ್ತಿದ್ದಾರೆ. ಹಾಗೆ ನೋಡಿದರೆ ರಾಮಕೃಷ್ಣ ಹೆಗಡೆಜೀಯ ದಾಯಾದಿ ಸಹೋದರನ ಮೊಮ್ಮಗನಾದ ಶಶಿಯೇ ಬಿಜೆಪಿ ಪಾಲಿಗೆ ಗಟ್ಟಿ ಹುರಿಯಾಳಾಗುತ್ತಿದ್ದರು. ಎತ್ತಿಂದೆತ್ತ ನೋಡಿದರೂ ಈ ಸಲ ಬಿಜೆಪಿ ಕುಮಟೆಯಲ್ಲಿ ಆಟಕ್ಕಷ್ಟೇ.

ಶಶಿಭೂಷಣ ಹೆಗಡೆಯ ಬ್ರಾಹ್ಮಣ ಬಳಗಕ್ಕೆ ಮಂತ್ರಿ ಕಾಗೇರಿ ಮೇಲೆ ಅಸಾಧ್ಯ ಸಿಟ್ಟು! ಶಶಿಯನ್ನು ಬಿಜೆಪಿಯಲ್ಲಿ ಮುರಿದು ಹಾಕಿದ್ದೇ ಈ ಕಟ್ಟೆಕ್ಕೆಂಬ ಆಕ್ರೋಶ ಹೆಗಡೇಜೀ ಅಭಿಮಾನಿಗಳದು. ಈ ಹೆಗಡೇಜೀ ಪರಿವಾರವೀಗ ಶಶಿಯನ್ನು ಜೆಡಿಎಸ್‌ನಿಂದ ಶಿರಸಿಯಲ್ಲಿ ನಿಲ್ಲಿಸಿ ಕಾಗೇರಿಗೆ ಸೆಡ್ಡು ಹೊಡೆಯುವ ಪ್ರತೀಕಾರಕ್ಕೆ ಸಜ್ಜಾಗಿದೆ. ಇದು ಸಹಜವಾಗೇ ನರಿ ಬುದ್ಧಿಯ ಕಾಗೇರಿಯಲ್ಲಿ ನಡುಕ ಮೂಡಿಸಿದೆ. ಕಳೆದೈದು ವರ್ಷದಿಂದ ಮಂತ್ರಿಯಾಗಿ ಕಾಗೇರಿಯಿಂದ ಶಿರಸಿ-ಸಿದ್ದಾಪುರಕ್ಕೆ ನೆಮ್ಮದಿಯ ಬದುಕು ಕೊಡಲಾಗಲಿಲ್ಲ. ಬೇಡದ ಜಾತಿ ರಾಜಕಾರಣ, ಪರ್ಸೆಂಟೇಜ್ ಲೇವಾದೇವಿ, ಸಾಧನೆಗೆ ಬದಲು ಬರೀ ಸುದ್ದಿ ಮಾಡುವ ಚಟದಿಂದ ಈತ ಕ್ಷೇತ್ರವಾಸಿಗಳ ಅಸಮಾಧಾನಕ್ಕೆ ತುತ್ತಾಗಿದ್ದಾನೆ. ಶೂದ್ರರಂತೂ ಕಾಗೇರಿಯಿಂದ ಅನುಭವಿಸಿದ ಯಾತನೆ ಹೇಳತೀರದು. ಇದೆಲ್ಲಾ ಜೆಡಿಎಸ್‌ನ ಶಶಿಗೆ ವರವಾಗುವ ಸಾಧ್ಯತೆಯಿದೆ. ಇದರರ್ಥ ಇಷ್ಟೇ: ಶಿರಸಿ-ಸಿದ್ದಾಪುರದಲ್ಲೂ ಬಿಜೆಪಿ ಪಾಲಿಗೆ ಗೆಲ್ಲುವ ಕ್ಯಾಂಡಿಡೇಟಿಲ್ಲ!

ಪಕ್ಕದ ಮುಂಡಗೋಡ-ಯಲ್ಲಾಪುರ ಕ್ಷೇತ್ರವನ್ನು ಹಾಲಿ ಪ್ರತಿನಿಧಿಸುತ್ತಿರುವಾತ ಬಿಜೆಪಿಯ ವಿ.ಎಸ್.ಪಾಟೀಲ. ಈ ಪಾಟೀಲ ಮಾಮಾ ಮಾಜಿ ಸಿ.ಎಂ. ಯಡ್ಡಿಯ ನಿಷ್ಠಾವಂತ ಬಂಟ. ಆದರೆ ಈತ ಕೆಜೆಪಿ ಸೇರಿದರೆ ಈ ಕ್ಷೇತ್ರದಲ್ಲಿ ಗೆಲ್ಲುವುದು ಕಷ್ಟ. ಸ್ವ-ಜಾತಿ ಲಿಂಗಾಯತರ ಮತ ಸಣ್ಣ ಪ್ರಮಾಣದಲ್ಲಿದೆ. ಇತರ ಜಾತಿಯವರ ವಿಶ್ವಾಸಕ್ಕೆ ಈ ಪರ್ಸೆಂಟೇಜ್ ಪರಾಕ್ರಮಿ ಪಾತ್ರನಾಗಿಲ್ಲ. ಸಂಸದ ಅನಂತ್ಮಾಣಿ ಈತನಿಗೆ ಬಿಜೆಪಿ ಟಿಕೆಟ್ ಸಿಗದಂತೆ ಮಾಡೋದು ಗ್ಯಾರಂಟಿ. ಅಷ್ಟು ದ್ವೇಷ ಪಾಟೀಲ ಮಾಮನ ಮೇಲಿದೆ ಪುಂಡ ಅನಂತ್ಮಾಣಿಗೆ. ಯಡ್ಡಿಯಿಲ್ಲದೆ ಬಿಜೆಪಿಯಲ್ಲಿ ಪಾಟೀಲನಿಗೆ ಅಸ್ತಿತ್ವವೂ ಇಲ್ಲ. ಹೀಗಾಗಿ ಆತ ಬಿಜೆಪಿಯಿಂದ ಮಾನಸಿಕವಾಗಿ ಹೊರಗೆ ಹೋಗಿಯಾಗಿದೆ.

ಪಾಟೀಲ ಹೊರಹೋಗಲಿ; ಒಳಗೇ ಇರಲಿ. ಬಿಜೆಪಿ ಮಾತ್ರ ಇಲ್ಲಿ ಗೆಲ್ಲುವುದಿಲ್ಲ. ಸರಿಯಾದ ಹುರಿಯಾಳೂ ಇಲ್ಲ. ಪಾಟೀಲರಿಗೆ ಕಾಂಗ್ರೆಸ್ ಸೇರಿಸಲು ಸಾಕ್ಷಾತ್ ಯಡ್ಡಿಯೇ ಟಾಪ್ ಲೆವೆಲ್‌ನಲ್ಲಿ ತಂತ್ರಗಾರಿಕೆ ನಡೆಸಿದ್ದಾರೆ. ಹಾಗೊಮ್ಮೆ ಈ ಪಾಟೀಲ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಮತ್ತೆ ಗೆಲ್ಲುವ ಛಾನ್ಸ್ ಇದೆ. ಕಾಂಗ್ರೆಸ್ ಟಿಕೆಟ್‌ಗಾಗಿ ಹಿಂದಿನ ಅಭ್ಯರ್ಥಿ ಶಿವರಾಮ ಹೆಬ್ಬಾರ್ ಮತ್ತು ಮಾಜಿ ಜಿ.ಪಂ. ಉಪಾಧ್ಯಕ್ಷ ಎಲ್.ಟಿ. ಪಾಟೀಲ್ ನಡುವಿನ ಜಿದ್ದಾಜಿದ್ದಿಯಿಂದ ಬಚಾವಾಗಲು ಕಾಂಗ್ರೆಸ್ ಡಾನ್ ದೇಶಪಾಂಡೆ ಕೆಜೆಪಿಯ ವಿ.ಎಸ್.ಪಾಟೀಲನ ತಾರೀಫು ಮಾಡುತ್ತಿದ್ದಾರೆ. ಮುಂಡಗೋಡದ ಕೊಳಕು ರಾಜಕಾರಣದಲ್ಲಿ ಬಿಜೆಪಿ ಭೂಗತವಾಗೋದಂತೂ ಖರೆ.

ಹಾಗೇ ಮುಂಡಗೋಡಿಗೆ ಹೊಂದಿಕೊಂಡಿರುವ ಹಳಿಯಾಳ-ಜೋಯಿಡಾ ಕ್ಷೇತ್ರದಲ್ಲಿ ಒಂದು ಸುತ್ತು ಹಾಕಿದರೆ ಇಲ್ಲಿ ಬಿಜೆಪಿ ಎಂಬುದೇ ಇಲ್ಲವೆಂಬುದು ಕಣ್ಣಿಗೆ ಕಟ್ಟುತ್ತದೆ. ಇಲ್ಲಿ ಹಿಂದೆಯೂ ಬಿಜೆಪಿ ಇರಲಿಲ್ಲ. ಹಳಿಯಾಳದಲ್ಲಿ ಏನಿದ್ದರೂ ದೇಶಪಾಂಡೆ-ಜೆಡಿಎಸ್ ಶಾಸಕ ಸುನಿಲ್ ಹೆಗಡೆ ಜಂಗಿ ನಿಕಾಲಿ ಫೈಟಿಂಗ್. ಮಂಗೇಶ್ ದೇಶಪಾಂಡೆ ಎಂಬ ಚಡ್ಡಿ ಚಮತ್ಕಾರಿ, ಪೂಜಾರ್ ಎಂಬವರಿಗೆಲ್ಲ ಬಿಜೆಪಿ ಹುರಿಯಾಳಾಗುವ ಚಟನಿದ್ದರೂ ಜನ ಮಾತ್ರ ಮತ ಹಾಕುವುದಿಲ್ಲ.

ಒಂದು ಕಾಲದಲ್ಲಿ ಭಟ್ಕಳ ಎಂದರೆ ಬಿಜೆಪಿ; ಬಿಜೆಪಿ ಎಂದರೆ ಭಟ್ಕಳ ಎಂಬಂಥ ಭೀಭತ್ಸ ಪರಿಸ್ಥಿತಿ ಇತ್ತು. ಈಗ ಭಟ್ಕಳದಲ್ಲಿ ಬಿಜೆಪಿಗೆ ಬೇಸ್ ಇಲ್ಲ. 1990 ರ ದಶಕದಲ್ಲಿ ನಿರಂತರ ಒಂದು ವರ್ಷ ನಡೆದಿದ್ದ ಕೋಮು ಗಲಭೆಯನ್ನು ಸಂಘ ಪರಿವಾರ ಅಧಿಕಾರ ರಾಜಕಾರಣಕ್ಕೆ ಬಳಸಿಕೊಂಡಿತ್ತು. ಭಟ್ಕಳಕ್ಕೆ ಬೆಂಕಿ ಹಚ್ಚುತ್ತಿದ್ದ ದಿವಂಗತ ಚಿತ್ತರಂಜನ್, ಭುವಂಗತ ಅನಂತ್ಮಾಣಿ ಭಟ್ಕಳ ನಗರದಲ್ಲಿ ಹೆಚ್ಚಿರುವ ನವಾಯತ ಮುಸ್ಲಿಮರನ್ನೇ ಗುರಿಯಾಗಿಟ್ಟುಕೊಂಡು ಕೋಮು ರಾಜಕೀಯ ಮಾಡಿದ್ದರು. ಇದರಿಂದ ಚಿತ್ತರಂಜನ್ ಎಮ್ಮೆಲ್ಲೆಯಾದರೂ ಆತನನ್ನು ಕೋಮು ಹುಲಿಯೇ ನುಂಗಿಹಾಕಿತು. ಇವತ್ತಿಗೂ ಚಿತ್ತರಂಜನ್‌ರನ್ನು ಕೊಂದವರು ಆತನ ಆಪ್ತ ವಲಯದಲ್ಲಿದ್ದ 'ಮಾಣಿ'ಗಳು ಅಥವಾ ಸಾಬಿಗಳಾ ಎಂಬ ಅನುಮಾನ ಹಾಗೇ ಉಳಿದುಕೊಂಡಿದೆ. ಆ ಮಾತು ಬೇರೆ.

ಗ್ರಾಮ ಪಂಚಾಯ್ತಿ ಮೆಂಬರಿಕೆಗೂ ನಾಲಾಯಕ್ ಎನಿಸಿರುವ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿ ಈ ಕೋಮು ಕಾರ್ಯದಲ್ಲಿ ಎಂಪಿಯಾಗಿ ಹೋದ. ಆನಂತರ ಆತ ನಕಲಿ ಹಿಂದೂವಾದಿ ಎಂಬುದು ಜನರಿಗೆ ಅರ್ಥವಾಯ್ತು. ಈಗ ಈ ಹಿಂಸಾವಾದಿ ಪಕ್ಕಾ ವೈಶ್ಯ ರಾಜಕಾರಣಿ; ದುಡ್ಡು-ಅಧಿಕಾರ-ಮೋಜು-ಮಸ್ತಿಯೇ ಇಂದು ಅವನ ದೇಶಪ್ರೇಮ, ಹಿಂದೂತ್ವ, ಅಭಿವೃದ್ಧಿ ರಾಜಕಾರಣ ಎಂಬಂತಾಗಿದೆ!!

ಇಂಥ ಅನಂತ್ಮಾಣಿ ಗರಡಿಯಲ್ಲಿ ಪಳಗಿದವನು ಮಾಜಿ ಮಂತ್ರಿ, ಹಾಲಿ ಕೆಎಸ್‌ಡಿಸಿ ಅಧ್ಯಕ್ಷ ಶಿವಾನಂದ ನಾಯ್ಕ್! ಯಾವಾಗ ಈ ದೀವರ (ಈಡಿಗ) ಧೀರ ಕೋಜಾ ಸರ್ಕಾರದಲ್ಲಿ ಮಂತ್ರಿಯಾದನೋ ಆಗ ಶುರುವಾಯ್ತು


ಡ್ರೈವರ್ ಶಿವಣ್ಣ ಕಾಂಗ್ರೆಸ್ ಕ್ಯಾಂಡಿಡೇಟ್?!

ಅಸೆಂಬ್ಲಿ ಚುನಾವಣೆ ಯಾವಾಗಲೋ ಯಾರಿಗೂ ಗೊತ್ತಿಲ್ಲ. ಆದರೆ ಭಟ್ಕಳ ವಿಧಾನಸಭಾ ಕ್ಷೇತ್ರದ ಎಲೆಕ್ಷನ್ ತಂತ್ರಗಾರಿಕೆ ದಿನಕ್ಕೊಮ್ಮೆಯಂತೆ ಮಗ್ಗಲು ಬದಲಿಸುತ್ತ ಇಡೀ ಜಿಲ್ಲೆಯಲ್ಲಿ ತೀವ್ರ ಕುತೂಹಲ ಕೆರಳಿಸುತ್ತಿದೆ. ಈ ಟಿಕೆಟ್ ಹಣಾಹಣಿಯ ಕೇಂದ್ರ ಬಿಂದು- ಮಾಜಿ ಮಂತ್ರಿ- ಹಾಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ ಅಧ್ಯಕ್ಷ ಶಿವಾನಂದ ನಾಯ್ಕ! ಈ ಯಡ್ಡಿಯ ಪರಮಾಪ್ತ ಬಂಟ ಬಿಜೆಪಿಯಲ್ಲಿ ಇದ್ದೂ ಇಲ್ಲದಂತಿದ್ದಾರೆ. ಆದರೆ ಕೆಜೆಪಿಗೆ ಹೋಗಲಾಗದೆ ಒದ್ದಾಡುತ್ತಿದ್ದಾರೆ.


ಒಂದು ಕಾಲದಲ್ಲಿ ಹೊನ್ನಾವರದಲ್ಲಿ ಮೀನು ಸಾಗಿಸುವ ಲಾರಿಯ ಚಾಲಕನಾಗಿದ್ದ ಶಿವಣ್ಣ ಎಮ್ಮೆಲ್ಲೆ ಆದದ್ದು, ಮಂತ್ರಿಯಾದದ್ದು ಪ್ರಜಾಪ್ರಭುತ್ವದ ಪವಾಡ; ಈ ಕಡು ಕೋಮುವಾದಿ ಈಗ ಸೆಕ್ಯುಲರ್ ಆಗಿ ಚಹರೆ ಬದಲಿಸಿರುವುದು ಅಧಿಕಾರ ರಾಜಕಾರಣದ ಅನಾಹುತ. ಸ್ಥಳೀಯ ಬಿಜೆಪಿ ಬ್ರಾಹ್ಮಣರ ಕಿರಿಕಿರಿಯಿಂದ ಬೇಸತ್ತ ಶಿವಣ್ಣ ಒಂದು ವರ್ಷದ ಹಿಂದೆಯೇ ಆ ಪಾರ್ಟಿಯಿಂದ ಮಾನಸಿಕವಾಗಿ ಹೊರಹೋಗಿದ್ದರು. ಬಿಜೆಪಿಯಲ್ಲಿ ಉಳಿದರೆ ತನಗೆ ಉಳಿಗಾಲವಿಲ್ಲ ಎಂಬುದು ಖಾತ್ರಿಯಾಗುತ್ತಿದ್ದಂತೆಯೇ ಆತ ಜೆಡಿಎಸ್ ಕಡೆ ಕಣ್ಣು ಹಾಕಿದ್ದರು. ಬಿಜೆಪಿಯಲ್ಲಿದ್ದರೆ ಕಳೆದ ಬಾರಿ ಸೋಲಿಸಿದಂತೆ ಈ ಬಾರಿಯೂ ಕಾಗೇರಿ-ಅನಂತ್ಮಾಣಿ-ಕರ್ಕಿ- ಭಟ್ಟ-ಹೆಗಡೆಗಳ ಹವ್ಯಕ ಬಳಗ ಶಿವಣ್ಣನನ್ನು ಸೋಲಿಸಲು ಟೊಂಕಕಟ್ಟಿ ನಿಂತಿದೆ. ಇದು ಗೊತ್ತಿರುವ ಶಿವಣ್ಣ ಯಡ್ಡಿ ಕೃಪೆ ಇರುವಷ್ಟು ದಿನ ಕೆಎಸ್‌ಡಿಸಿಯಲ್ಲಿ ಮೇದು ದುಂಡಗಾಗಿ ಅನುಕೂಲಕರ ಪಾರ್ಟಿ ಸೇರಲು ಸ್ಕೆಚ್ ಹಾಕಿದ್ದರು.

ಯಾವಾಗ 'ಗುರುದೇವ' ಯಡ್ಡಿ ಕೆಜೆಪಿ ಕಟ್ಟಿದರೋ, ಆಗ ಶಿವಣ್ಣನ ಲೆಕ್ಕಾಚಾರವೆಲ್ಲ ಬುಡಮೇಲಾಯ್ತು! ಜೆಡಿಎಸ್‌ಗೆ ಸೇರಲು ರೆಡಿಯಾಗಿರುವ ಆತನ ಕತೆ ಕೇಳಿ ಯಡ್ಡಿ ಕೆಂಡಾಮಂಡಲವಾದರು. "ನಿನ್ನ ಬೆಳೆಸಿದ್ದು ನನ್ನ ವೈರಿ ಕುಮಾರಸ್ವಾಮಿಯ ಪಕ್ಷ ಸೇರಲಿಕ್ಕಾ...? ಬಾಯಿ ಮುಚ್ಚಕೊಂಡು ಕೆಜೆಪಿ ಸಮಾವೇಶಕ್ಕೆ ಜನರನ್ನು ಕರಕೊಂಡು ಹಾವೇರಿಗೆ ಬಾ... ಇಲ್ಲದಿದ್ದರೆ ಹುಷಾರ್....!!" ಎಂದಬ್ಬರಿಸಿದ್ದರು ಯಡ್ಡಿ. ಅನಿವಾರ್ಯವಾಗಿ ಕೆಜೆಪಿ ಸಮಾವೇಶಕ್ಕೆ ಹೋಗಿ ದಯಾಸ್ ಹಿಂದೆಯೇ ಕುಳಿತು ಕಂಗೊಳಿಸಿದ ಶಿವಣ್ಣನ ಒಳಗಿನ ಹೊಯ್ದಾಟ ಮಾತ್ರ ಹೇಳತೀರದಾಗಿತ್ತು!! "ಸರ್, ನನ್ನ ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ... ಕೆಜೆಪಿಯಿಂದ ನಾನು ಭಟ್ಕಳದಲ್ಲಿ ಗೆಲ್ಲಲಾರೆ... ಅದು ಹೊಸ ಪಕ್ಷ... ಜೆಡಿಎಸ್‌ನಿಂದ ನಿಂತರೆ ಮುಸ್ಲಿಮರ ಓಟು ಸಿಗ್ತದೆ... ಆಗ ಗೆಲ್ತೀನಿ... ಗೆದ್ದಾಗ ಎಲ್ಲೇ ಇರಲಿ ನಿಮ್ಮ ಮನುಷ್ಯನಾಗಿ ಇರ್ತೇನೆ.... ಪ್ಲೀಸ್... ನಂಗೆ ಜೆಡಿಎಸ್ ಸೇರೋಕೆ ಪರ್ಮಿಷನ್ ಕೊಡಿ.... ಸಾರ್...." ಎಂದು ಅಂಗಲಾಚುತ್ತಾರೆ ಶಿವಣ್ಣ.

ಇದಕ್ಕೆ ಯಡ್ಡಿ ಬಿಲ್‌ಕುಲ್ ಒಪ್ಪುವುದಿಲ್ಲ. "ಬೇಕಿದ್ದರೆ ಕಾಂಗ್ರೆಸ್‌ಗೆ ಹೋಗೋದಕ್ಕೆ ಪ್ರಯತ್ನ ಮಾಡು... ನಾನೂ ಹೆಲ್ಪ್ ಮಾಡ್ತೇನೆ..." ಎಂದು ಸಲಹೆ ಕೊಡ್ತಾರೆ. ಇಕ್ಕಟಿಗೆ ಬಿದ್ದ ಶಿವಣ್ಣ ಕಾಂಗ್ರೆಸ್‌ನ ಟಾಪ್ ಲೀಡರ್‌ಗಳ







ಜತೆ ನಿಕಟ ಸಂಬಂಧವಿರುವ ಸೌದಿ ಅರೇಬಿಯಾದಲ್ಲಿರುವ ಭಟ್ಕಳಿಗ- ಗಲ್ಫ್‌ನ ಪ್ರಭಾವಿ ಉದ್ಯಮಿ ಖಲೀಲ್ ಉಲ್ ರೆಹಮಾನ್ ಯಾನೆ ಸಿಎಂ ಖಲೀಲ್‌ರಂಥವರ ಹಿಡಿದುಕೊಂಡು ಕಾಂಗ್ರೆಸ್ ಸೇರ್ವಡೆಗೆ ಹವಣಿಸುತ್ತಾರೆ. ಭಟ್ಕಳ, ನವಾಯತರ ಪರಮೋಚ್ಛ ಧಾರ್ಮಿಕ ಸಂಸ್ಥೆ 'ಸಂಜೀಮ್' ಮೇಲೆ ಹಿಡಿತವಿರುವ ಶಕ್ತಿವಾನ್ ಈ ಖಲೀಲ್ ಸಾಹೇಬ್. ಸುಮಾರು ಎರಡು ವರ್ಷದ ಹಿಂದೆ ಮೈಸೂರು ಸ್ಯಾಂಡಲ್ ಸೋಪ್ ಮತ್ತು ಡಿಟರ್ಜಂಟ್-ಫರ್‌ಫ್ಯೂಮ್‌ನ ಪ್ರಚಾರಕ್ಕೆಂದು ದುಬೈಗೆ ಹೋಗಿದ್ದ ಶಿವಣ್ಣ ಖಲೀಲ್ ಸಾಹೇಬರ ಮಧ್ಯಸ್ಥಿಕೆಯಲ್ಲೇ ಜೆಡಿಎಸ್ ಸೇರುವ ನಿರ್ಧಾರ ಮಾಡಿದ್ದರು.

ಆ ನಂತರ ಭಟ್ಕಳ-ಹೊನ್ನಾವರದ ಮುಸ್ಲಿಮ್ ವಲಯದಲ್ಲಿ ಶಿವಣ್ಣನ ಬಗ್ಗೆ 'ನಂಬಿಕೆ' ಮೂಡಿತ್ತು. ಇದಕ್ಕೆ ಸರಿಯಾಗಿ ಭಟ್ಕಳದ ಕಾಂಗ್ರೆಸ್ ಶಾಸಕ ಜೆ.ಡಿ.ನಾಯ್ಕನ ಅಲ್ಪಸಂಖ್ಯಾತ ವಿರೋಧಿ ಧೋರಣೆ ತಾಳೆಯಾಯ್ತು. ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರನ್ನು ಸುಖಾಸುಮ್ಮನೆ ಎದುರುಹಾಕಿಕೊಂಡಿರುವ ಜೆ.ಡಿ.ನಾಯ್ಕ ಸಂಘಪರಿವಾರದ ಹಿತೈಷಿಯಂತೆ ನಡೆದುಕೊಳ್ಳುತ್ತಲೇ ಬಂದಿದ್ದರು. ಇದು ಸಹಜವಾಗೇ ಅಲ್ಪಸಂಖ್ಯಾತರಿಗೆ ಶಿವಣ್ಣನೇ ಬೆಟರ್ ಎಂದೆನಿಸಲು ಕಾರಣವಾಯ್ತು. ಯಡ್ಡಿ ಶಿವಣ್ಣನಿಗೆ ಜೆಡಿಎಸ್‌ಗೆ ಹೋಗಲು ಅಡ್ಡಿ ಪಡಿಸುವುದಕ್ಕೂ ಭಟ್ಕಳದ ನಿರ್ಣಾಯಕ ಸಾಬಿಗಳು ಜೆಡಿಗೆ ಕಾಂಗ್ರೆಸ್ ಟಿಕೆಟ್ ಕೊಡದಂತೆ ಕೂಗುವುದಕ್ಕೂ ಸರಿಯಾಗಿದೆ.

ಈಗ ಶಿವಣ್ಣನನ್ನೂ ಕಾಂಗ್ರೆಸ್‌ಗೆ ಸೇರಿಸಲು ಖಲೀಲ್ ಸಾಹೇಬರ ಪ್ರಭಾವಿ ಮುಸ್ಲಿಮ್ ಬಳಗ ಶತಾಯಗತಾಯ ಪ್ರಯತ್ನ ಮಾಡುತ್ತಿದೆ. ಮಾಜಿ ಸಿಎಂ ಎಸ್ಸೆಂ ಕೃಷ್ಣ, ಕೇಂದ್ರ ಮಂತ್ರಿ ರೆಹಮಾನ್ ಖಾನ್, ಬ್ಲುನಿ ಸುಲ್ತಾನ್, ಕೇಂದ್ರ ಮಂತ್ರಿ ಖುರ್ಷಿದ್ ಆಲಂ ಖಾನ್, ಗುಲಾಬ್ ನಬಿ ಅಜಾದ್ ಮತ್ತಿತರ ಘಟಾನುಘಟಿಗಳ ನೇರಸಂಪರ್ಕ-ಒಡನಾಟವಿರುವ ಖಲೀಲ್ ಒಂದು ಕಡೆಯಿಂದ ಶಿವಣ್ಣನ ಕಾಂಗ್ರೆಸ್ ಸೇರಿಸಲು ತಂತ್ರಗಾರಿಕೆ ಮಾಡುತ್ತಿದ್ದಾರೆ! ಅತ್ತ ಮತ್ತೊಂದು ಕಡೆಯಿಂದ ಯಡ್ಡಿ ಮಹಾತ್ಮನೇ ಭಟ್ಕಳದ ಶಿವಾನಂದ ನಾಯ್ಕ, ಮುಂಡಗೋಡದ ಬಿಜೆಪಿ ಶಾಸಕ ವಿ.ಎಸ್. ಪಾಟೀಲರನ್ನು ಕಾಂಗ್ರೆಸ್ ಕ್ಯಾಂಡಿಡೇಟಾಗಿಸಲು ಪ್ರಯತ್ನಿಸುತ್ತಿದ್ದಾರೆ.

ಕಾಂಗ್ರೆಸ್‌ನಲ್ಲೂ ದೇಶಪಾಂಡೆ ಬಿಟ್ಟರೆ ಇನ್ಯಾರಿಗೂ ಜೆಡಿ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ. ಎಐಸಿಸಿ ಸರ್ವೆಯಲ್ಲೂ ಈತ ಕ್ಯಾಂಡಿಡೇಟಾದರೆ ಸೋಲುತ್ತಾನೆಂಬ ಫಲಿತಾಂಶವೇ ಸಿಕ್ಕಿದೆ. ರಾಜಸ್ಥಾನದ ರಾಜ್ಯಪಾಲೆ- ಉತ್ತರ ಕನ್ನಡದ ಮಾಜಿ ಸಂಸದೆ ಮಾರ್ಗರೆಟ್ ಆಳ್ವಾಗೂ ಈ ಜೆಡಿ ಎಂದರೆ ಸಿಟ್ಟು ನೆತ್ತಿಗೇರುತ್ತದೆ. ಸಿಡುಕುತನ- ಬೈಗುಳದಿಂದ ಭಟ್ಕಳದ ಜನರನ್ನೂ ಜೆಡಿ ಎದುರು ಹಾಕಿಕೊಂಡಿದ್ದಾರೆ. ಈ ಒಂದಕ್ಕೊಂದು ಪೂರಕವಾಗಿರುವ ಅಂಶಗಳು- ಘಟನಾವಳಿಗಳು ಶಿವಾನಂದ ನಾಯ್ಕ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾರೆಂಬ ಸಂಕೇತಗಳನ್ನು ಬಿತ್ತರಿಸುತ್ತಿವೆ. ದೀವರ ಪ್ರಖ್ಯಾತ ನಾಯಕನಾಗಿ ಜಿಲ್ಲೆಯಲ್ಲಿ ಹೊರಹೊಮ್ಮಿರುವ ಶಿವಣ್ಣನಿಂದ ಕಾಂಗ್ರೆಸಿಗೂ ಲಾಭವಿದೆ. ಭಟ್ಕಳದ ಎಲೆಕ್ಷನ್ ಪರದೆಯಲ್ಲಿ ಉಲ್ಟಾ ಚಿತ್ರಗಳೇ ಮೇಳೈಸುತ್ತಿವೆ!

ಸ್ಮಣಿಕೆ ಬುದುಬುದುಕೆಯ ಅನಂತ್ಕುಮಾರ್-ಕಾಗೇರಿ ಗೆ-ಕರ್ಕಿಯಜ್ಜ ವಗೈರೆ ಹವ್ಯಕರಲ್ಲಿ ಹೊಟ್ಟೆಕಿಚ್ಚು! ಸ್ಮಣ ಬಳಗ ಒಂದಾಗಿ ಈ ಶೂದ್ರ ಶಿವಾನಂದನನ್ನು ಎಲೆಕ್ಷನ್‌ನಲ್ಲಿ ಭಟ್ಕಳದಲ್ಲಿ ಸೋಲಿಸಿದರು. ಬಿಜೆಪಿ ದ ಅನಂತ್ಕುಮಾರ್‌ಯಂತೂ ಕಾಂಗ್ರೆಸ್ ಕ್ಯಾಂಡಿಡೇಟಾಗಿದ್ದ ನಾಯ್ಕರ ಗೆಲ್ಲಿಸಲು ಹಗಲಿರುಳೂ ಊಟ-ನಿದ್ದೆ ಬಿಟ್ಟು ದಿದ್ದ. ಆದರೂ ಈ ಶಿವಾನಂದ ನಾಯ್ಕ ಯಡ್ಡಿ ಶೀರ್ವಾದದಿಂದ ಕರ್ನಾಟಕ ಸೋಪ್ಸ್ ಅಂಡ್ ರ್ಜೆಂಟ್ ಕಂಪನಿಯ ಅಧ್ಯಕ್ಷಗಿರಿ ಪಡೆದುಕೊಂಡಿದ್ದ. ಆದರೆ ಕಳೆದ ಅಸೆಂಬ್ಲಿ ಎಲೆಕ್ಷನ್ ಬಳಿಕ ಶಿವಾನಂದ ಯ್ಕಗೆ ಗರ್ಭಗುಡಿ ಸಂಸ್ಕೃತಿಯ ಬಿಜೆಪಿಯಲ್ಲಿ ದಾಣಿಕೆ ಆಗಲೇ ಇಲ್ಲ. ಆತನನ್ನು ಜಿಲ್ಲಾ ಬಿಜೆಪಿ ಯಕರು ಮುಟ್ಟಿಸಿಕೊಳ್ಳಲೂ ಹೇಸಲಾರಂಭಿಸಿದರು. ನಂದನಾಯ್ಕ್‌ಗೆ ತಡವಾಗಿ ಶೂದ್ರ ಪ್ರಜ್ಞೆ ಜಾಗೃತವಾಯ್ತು. ಳ-ಹೊನ್ನಾವರದ ಮುಸ್ಲಿಮ್‌ರ ದೋಸ್ತಿ ತತೊಡಗಿದ; ಸ್ವ-ಜಾತಿ ದೀವರನ್ನು 'ಗುರು ಪೀಠ' ಒಗ್ಗೂಡಿಸತೊಡಗಿದ. ಅಂತಿಮವಾಗಿ ಬಿಜೆಪಿಯಲ್ಲಿ ದ್ರ v/s ಬ್ರಾಹ್ಮಣ ಕದನ ತಾರಕಕ್ಕೇರಿಬಿಟ್ಟಿತು! ಯಡ್ಡಿ ಪಿಯಲ್ಲಿ ಏದುಸಿರು ಬಿಡುತ್ತಿರುವಾಗಲೇ ಶಿವಾನಂದ ಯ್ಕ ಒಂದು ಕಾಲು ಹೊಸಿಲಾಚೆ ಇಟ್ಟಿದ್ದರು. ಯಡ್ಡಿಯ ದಲ್ಲಿರುವ ನಾಯ್ಕ್‌ಗೆ 'ದೇವ ಪಿತೃ' ಬಿಜೆಪಿಯಲ್ಲಿದ್ದರೂ ಪಾರ್ಟಿಯಲ್ಲಿ ಇರುವ ಮನಸ್ಸಿರಲಿಲ್ಲ. ಆತ ಜೆಡಿಎಸ್ ವ ಸಕಲ ತಯಾರಿ ಕೆಜೆಪಿ ಜನ್ಮತಳೆಯುವ ಮೊದಲೇ ಡಿದ್ದರು. ಮಧುಬಂ, ಬಸನಗೌಡ ಪಾಟೀಲ್ ತ್ನಾಳ್‌ರಂಥವರ ಮಧ್ಯಸ್ಥಿಕೆಯಲ್ಲಿ ಜೆಡಿಎಸ್ ಸೇರುವ ರ್ಧಾರಕ್ಕೆ ಬಂದಿದ್ದರು.


ಈಗ ಭಟ್ಕಳ ಬಿಜೆಪಿಯಲ್ಲಿ ಸರಿಯಾದ ಕ್ಯಾಂಡಿಡೇಟೇ ದ ದರಿದ್ರ ಪರಿಸ್ಥಿತಿ ನಿರ್ಮಾಣ ಆಗಿದೆ. ಸ್ಥಳೀಯ ಪಿ ಯಜಮಾನರಾದ ಸಂಸದ ಅನಂತ್ಕುಮಾರ್ ಕೊಲ್ಲೆ ತ್ತು ಸುರೇಂದ್ರ ಶಾನುಭಾಗ್‌ಗಳಂಥ ಚೆಡ್ಡಿ ಚತುರರು ರಿಗೆ ಟಿಕೆಟ್ ಕೊಟ್ಟರೆ ಏನಾದೀತು? ಎಂಬ ಚಾರದಲ್ಲಿ ತೊಡಗಿದ್ದಾರೆ. ಈ ಮೇಲ್ವರ್ಗದ ಮಾಸ್ತರ್‌ಗಳಿಗೆ ತಾವೇ ಎಲೆಕ್ಷನ್ ಎದುರಿಸುವ ದಮ್ ಶೂದ್ರ (ದೀವರು) ಬಲಿಪಶುಗಾಗಿ ಈ ಕಮ್ಯುನಲ್ ಗಳು ತಲಾಶ್ ನಡೆಸಿದ್ದಾರೆ. ಇವರ ಯಾದಿಯಲ್ಲಿ ನ್ನಾವರ ಭಾಗದ ಮೂವರು ಹೆಂಡಿರ ಮುದ್ದಿನ ಗಂಡ ವ ನಾಯ್ಕ, ಏಟ ಪುರುಷ ಗೋವಿಂದ ನಾಯ್ಕ ಜಾವೇ), ಮಾಜಿ ತಾ.ಪಂ.ಸದಸ್ಯ ಗಣೇಶ್ ನಾಯ್ಕ, ಜಿ ಜಿ.ಪಂ. ಸದಸ್ಯ ಎಂ.ಎಂ.ನಾಯ್ಕ್, ಮಾಜಿ ಮಂತ್ರಿ .ಎನ್. ನಾಯ್ಕ್, ದಿನೇಶ್ ನಾಯ್ಕ, ಕಾಂಗ್ರೆಸ್ ಶಾಸಕ .ನಾಯ್ಕ ಹೆಸರುಗಳಿವೆ.

ಬಿಜೆಪಿಯಿಂದ ಸ್ಪರ್ಧಿಸಿದರೆ ಇವರೆಲ್ಲ ಠೇವಣಿ ಕೊಳ್ಳುವಂಥ ಗಿರಾಕಿಗಳು. ಸಂಸದ ಅನಂತ್ಕುಮಾರ್‌ಗೆ ಕಾಂಗ್ರೆಸ್‌ನ ಜಿ ಮಂತ್ರಿಯೊಬ್ಬರ ಬಗ್ಗೆ ವಿಶೇಷ ಮಮತೆಯಿದೆ. ಕಾರದಲ್ಲಿದ್ದಾಗ ಸೊಕ್ಕಿನಿಂದ ಜನರನ್ನು ಹೀಯಾಳಿಸುತ್ತಿದ್ದ ನಿಗೆ ನಾಲ್ಕೇ ನಾಲ್ಕು ಜನ ಹಿಂಬಾಲಕರಿಲ್ಲ. ಎಲ್ಲ ಪಕ್ಷಕ್ಕೆ ಗಿ ಹೊರಬಂದಿರುವ ಈ ಔಟ್‌ಡೇಟೆಡ್ ಪುಢಾರಿ ತ್ರಿಯಾಗಿದ್ದಾಗ ಕೋಮು ಕ್ರಿಮಿನಲ್ ಅನಿಸಿದ್ದ ತ್ಕುಮಾರ್‌ಯನ್ನು ತನ್ನ ಮನೆಯಲ್ಲೇ ಅಡಗಿಸಿಟ್ಟುಕೊಳ್ಳುತ್ತಿದ್ದನೆಂಬ ಇವತ್ತಿಗೂ ಇದೆ. ಆ ಋಣ ತೀರಿಸಲು ಸಂಸದ ಣಿ ಯೋಚಿಸುತ್ತಿದ್ದಾನೆ. ಬಿಜೆಪಿ ಪರಿಶೀಲನಾ ಪಟ್ಟಿಯಲ್ಲಿ ಕಾಂಗ್ರೆಸ್ ಎಮ್ಮೆಲ್ಲೆ ಜೆ.ಡಿ.ನಾಯ್ಕ ಹೆಸರು ಸೇರಿರುವುದು ತ್ರವಾದರೂ ಸತ್ಯ.

ಕೆಎಸ್‌ಡಿಎಸ್‌ನ ಗೂಟದ ಕಾರು ಹಡಚೆ ಳಕ್ಕಾಗಷ್ಟೇ ಬಿಜೆಪಿಯಲ್ಲಿರುವ ಶಿವಾನಂದ ನಾಯ್ಕ ಪಿ ಬಿಟ್ಟಂತೆಯೇ ವರ್ತಿಸುತ್ತಿದ್ದಾರೆ! ಈತ ಕಾಂಗ್ರೆಸ್ ಲು ಈಗ ಹೊಸ ಪ್ರಯತ್ನ ಶುರು ಹಚ್ಚಿಕೊಂಡಿದ್ದಾರೆ. ಪ್ರಾತ್ ಡ್ರೈವರ್ ಶಿವಣ್ಣ ಕಾಂಗ್ರೆಸ್ ಕ್ಯಾಂಡಿಡೇಟಾದರೆ ತಿ.ನಾಯ್ಕ್, ಎಂಬ ಸ್ಥಳೀಯ ಮುಸಲ್ಮಾನರ ವಿರೋಧ ಕೊಂಡಿರುವ ಎಡವಟ್ಟು ಪುಢಾರಿಗೆ ಬಿಜೆಪಿ ಟಿಕೆಟ್ ತೋದು ಖಂಡಿತ; ಅದನ್ನು ಜೇಡಿ ಹಪಾಹಪಿಯಿಂದ ಸೋದು ಗ್ಯಾರಂಟಿ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಡಿಗೆ ಹೆಲ್ಪ್ ಮಾಡಿದ್ದ ಸಂಸದ ಅನಂತ್ಕುಮಾರ್- ಕಾಗೇರಿ ಣಿಗಳಿಗೆ ಆತನೇ ತಮ್ಮ ಕ್ಯಾಂಡಿಡೇಟಾಗಲಿ ಎಂಬ ಆಸೆಯಿದೆ. ಕಾಂಗ್ರೆಸ್ ಶಾಸಕನಾದರೂ ಒಳಗೊಳಗೇ ದೂ ಜಾಗರಣಾ ವೇದಿಕೆ, ವಿಎಚ್‌ಪಿಗೆ ನೆರವಾಗುತ್ತ ದಿರುವ ಜೇಡಿ ಎಂದರೆ ಚೆಡ್ಡಿಗಳಿಗೆ ಇಷ್ಟ. ಇದಕ್ಕೆ ರುದ್ಧವಾಗಿ ಹುಟ್ಟಾ ಚೆಡ್ಡಿ ಶಿವಾನಂದ ನಾಯ್ಕರಲ್ಲಿ ಃ ಪರಿವರ್ತನೆಯಾಗಿ ಆತ ಸಾಬರ ಸ್ನೇಹಿತನಾಗುತ್ತಿದ್ದಾರೆ. ಭಟ್ಕಳದಲ್ಲಿ ಅದಲು-ಬದಲು ಆಗುವ ಸಾಧ್ಯತೆ ಈಗ ಗೋಚರಿಸುತ್ತಿದೆ. ಬಿಜೆಪಿ ಟಿಕೆಟ್ ಪ್ಯಾನಲ್‌ನಲ್ಲಿ ಇರುವ ರರು 'ಎಲೆಕ್ಷನ್ ಫಂಡ್ ಪಾಲು ಹಾಕಿಕೊಳ್ಳುವ (ದು)ರಾಲೋಚನೆಯ ಜೊಳ್ಳುಗಳು. ಜಿಲ್ಲೆಯ ಎಲ್ಲಾ ತ್ರಗಳಲ್ಲಿ ಬಿಜೆಪಿ ಬಡಿವಾರ ಯಾವ ಆ್ಯಂಗಲ್‌ನಿಂದ ನೋಡಿದರೂ ಆ ಪಕ್ಷ ಕ್ಯಾಂಡಿಡೇಟ್ ಸಿಗದೇ ಗೆಟ್ಟಿರುವುದು ಗೋಚರಿಸುತ್ತದೆ. ಒಂದಂತೂ ಖರೆ. ಸಲದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಉತ್ತರ ಕನ್ನಡದಲ್ಲಿ ಕೋಮು ರಕ್ಕಸ ರಾಜಕಾರಣಿಗಳ ಸಂಹಾರ ಆಗಲಿದೆ!!

■ ನಹುಷ

ಚಾಮರಾಜನಗರ: ಬಿಜೆಪಿಗೆ ಕೆಜೆಪಿ ಲಾತಾ



ಭ್ರಷ್ಟ ಮತ್ತು ಕೋಮುವಾದಿ ಬಿಜೆಪಿ ರಾಜ್ಯದಲ್ಲಿ ಅಧಿಕಾರ ಮುಗಿಸುವುದರೊಳಗೆ ಆ ಪಕ್ಷದೊಂದಿಗಿನ ನಂಟನ್ನು ತೊರೆದು ತನ್ನದೇ ಆದ ಕೆಜೆಪಿ ಪಕ್ಷವನ್ನು ಕಟ್ಟಿಕೊಂಡಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸದ್ಯದಲ್ಲೇ ಎದುರಾಗಲಿರುವ ವಿಧಾನಸಭಾ ಚುನಾವಣೆಗೆ ಹಿಂದುಳಿದ ಚಾಮರಾಜನಗರ ಜಿಲ್ಲೆಯಲ್ಲಿ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಆ ಮೂಲಕ ಈ ಜಿಲ್ಲೆಯಲ್ಲಿ ಇತರೆ ಪಕ್ಷಗಳಿಗೆ ಹೊಡೆತ ನೀಡುವ ಸೂಚನೆಯನ್ನು ಕೊಟ್ಟಿದ್ದಾರೆ.

ಬಹಳ ವರ್ಷಗಳ ಕಾಲ ಚಾಮರಾಜನಗರ ಜಿಲ್ಲೆಯಲ್ಲಿರುವ ಕೊಳ್ಳೇಗಾಲ, ಹನೂರು, ಚಾಮರಾಜನಗರ ಮತ್ತು ಗುಡ್ಲುಪೇಟೆ ಎಂಬ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲುತ್ತಿತ್ತು, ಆದರೆ ಕಳೆದ ಬಾರಿ ಹನೂರು, ಚಾಮರಾಜನಗರ ಮತ್ತು ಗುಡ್ಲುಪೇಟೆ ಕ್ಷೇತ್ರಗಳು ಕಾಂಗ್ರೆಸ್ ಪಾಲಾಗಿದ್ದರೆ ಕೊಳ್ಳೇಗಾಲದಿಂದ ಬಿಜೆಪಿ ಗೆದ್ದಿತ್ತು.

ಕೊಳ್ಳೇಗಾಲದಲ್ಲಿ ತೀವ್ರ ಸ್ಪರ್ಧೆ

ಮೀಸಲು ಕ್ಷೇತ್ರವಾದ ಕೊಳ್ಳೇಗಾಲದಲ್ಲಿ ಈಗ ಕಾಂಗ್ರೆಸ್ ಪ್ರಭಾವ ಸ್ಪಷ್ಟವಾಗಿ ಕುಗ್ಗಿದೆ. ಕಳೆದ ಬಾರಿ ಇಲ್ಲಿಂದ ಬಿಜೆಪಿಯ ಜಿ.ಎನ್.ನಂಜುಂಡಸ್ವಾಮಿ ಗೆದ್ದಿದ್ದರು. ಅವರಿಗೆ ಮತ್ತೊಮ್ಮೆ ಬಿಜೆಪಿಯ ಟಿಕೆಟ್ ಸಿಗುವುದು ಖಚಿತವಾಗಿದ್ದರೂ ಅವರಲ್ಲಿ ಯಡ್ಡಿಯ ಕೆಜೆಪಿ ಭಯ ಹುಟ್ಟಿಸಿದೆ. ಆದ್ದರಿಂದ ಬಿಜೆಪಿಯೂ ಬೇಡ, ಕೆಜೆಪಿಯೂ ಬೇಡ ಎಂದು ನಿರ್ಧರಿಸಿರುವ ನಂಜುಂಡಸ್ವಾಮಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಮತ್ತು ಕೇಂದ್ರ ಸಚಿವ ಮಲ್ಲಿಕಾರ್ಜುನ್ ಖರ್ಗೆ ಮೂಲಕ ಕಾಂಗ್ರೆಸ್ ಟಿಕೆಟ್ ಪಡೆಯಲು ಲಾಬಿ ನಡೆಸುತ್ತಿದ್ದರು. ಆದರೆ ಕಾಂಗ್ರೆಸ್ ಪಕ್ಷ ಸಂಸದ ಆರ್. ಧ್ರುವನಾರಾಯಣ್ ಅವರನ್ನು ವಿಧಾನಸಭಾ ಚುನಾವಣೆಗೆ ಇಳಿಸುವ ಸೂಚನೆಗಳಿವೆ.

ಈ ಮಧ್ಯೆ ಮಾಜಿ ಐಪಿಎಸ್ ಅಧಿಕಾರಿ ಸುಭಾಷ್ ಭರಣಿ ಅವರಿಗೆ ಜೆಡಿಎಸ್ ಜಿಲ್ಲಾ ಪಕ್ಷದ ನೇತೃತ್ವವನ್ನು ವಹಿಸಿ ಇಲ್ಲಿ ಒಂದು ಚಾನ್ಸ್ ನೋಡುವ ತವಕದಲ್ಲಿದೆ. ಕಳೆದ ಬಾರಿ ಬಿಎಸ್‌ಪಿ ಪಕ್ಷದ ವತಿಯಿಂದ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದ ಸುಭಾಷ್ ಭರಣಿ ಬರುವ ಚುನಾವಣೆಯಲ್ಲಿ ಇದೇ ಕ್ಷೇತ್ರದಿಂದ ಜೆಡಿಎಸ್ ಪರವಾಗಿ ಸ್ಪರ್ಧಿಸುವ ಆಕಾಂಕ್ಷೆ ಹೊತ್ತಿದ್ದಾರೆ. ಅದಕ್ಕೆ ಆ ಪಕ್ಷದ ನಾಯಕರ ಬೆಂಬಲವೂ ಇದೆ. ಇದರಿಂದಾಗಿ ಜೆಡಿಎಸ್ ಪಕ್ಷದ ಜಿಲ್ಲೆಯ ಮುಂಚೂಣಿ ನಾಯಕ ಮತ್ತು ಮಾಜಿ ಶಾಸಕ ಬಾಲರಾಜ್ ಅವರಿಗೆ ತುಂಬಾ ಇರುಸುಮುರುಸಾಗಿದೆ. ಇಂತಹ ಪರಿಸ್ಥಿತಿಯಲ್ಲಿರುವ ಬಾಲರಾಜರನ್ನು ಯಡ್ಡಿಯ ಕೆಜೆಪಿ ಸೆಳೆಯುವ ಸಾಧ್ಯತೆಗಳಿವೆ.

ಕೊಳ್ಳೇಗಾಲದಿಂದ ಬಿಜೆಪಿ ಅಭ್ಯರ್ಥಿಯಾಗಲು ಸರ್ವೇಶ್ ಬಸವಯ್ಯ ಮುಂದಾಗಿದ್ದಾರೆ. ಇದೇ ಕ್ಷೇತ್ರದಿಂದ ಸ್ಪರ್ಧಿಸಲು ಮುಂದಾಗಿದ್ದ ಡಾ. ಅಂಬೇಡ್ಕರ್ ನಿಗಮದ ಅಧ್ಯಕ್ಷ ಎ.ಆರ್.ಕೃಷ್ಣಮೂರ್ತಿ ಈಗ ಯಡ್ಡಿಯ ಕೆಜೆಪಿ ಸೇರಲು ಸಿದ್ಧರಾಗಿದ್ದಾರೆ. ಅವರು ನಂಜನಗೂಡು ಕ್ಷೇತ್ರದಿಂದ ಸ್ಪರ್ಧಿಸುವ ಸೂಚನೆಗಳಿವೆ.

ಉಳಿದಂತೆ ಬಿಎಸ್‌ಪಿ ಪಕ್ಷದ ರಾಜ್ಯ ಸಂಚಾಲಕ ಎನ್.ಮಹೇಶ್ ಅವರ ನೇತೃತ್ವದಲ್ಲಿ ಆ ಪಕ್ಷ ಇತರ ಪಾರ್ಟಿಗಳಿಗೆ ತೀವ್ರ ಸ್ಪರ್ಧೆ ನೀಡುವುದು ಗ್ಯಾರಂಟಿಯಾಗಿದೆ.

ಹನೂರಿನಲ್ಲಿ ಯಾರ್‍ಯಾರು?

ಹಾಲಿ ಕಾಂಗ್ರೆಸ್ ಶಾಸಕ ಆರ್.ನರೇಂದ್ರ ಅವರಿಗೆ ಟಿಕೆಟ್ ದೊರೆಯುವುದು ಖಚಿತವಾಗಿದೆ. ಆದರೂ ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾದ ಡಾ.ಎಸ್.ದತ್ತೇಶ್



ಕುಮಾರ್ ಟಿಕೆಟ್ ಪಡೆಯಲು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ.

ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಿ ಹನೂರು ವಿಧಾನಸಭಾ ಕ್ಷೇತ್ರದಿಂದ ತಮಿಳುನಾಡು ಮೂಲದ ಆರ್.ಪಿ.ವಿಷ್ಣುಕುಮಾರ್ ಅಥವಾ ಮಾಜಿ ಸಚಿವ ದಿವಂಗತ ನಾಗಪ್ಪ ಅವರ ನಿಕಟವರ್ತಿಯಾಗಿದ್ದ ಪೊನ್ನಾಚಿ ಮಹದೇವಸ್ವಾಮಿ ಅವರನ್ನು ಕಣಕ್ಕಿಳಿಸಲು ಆ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ; ಮಾಜಿ ಸಚಿವ ಬೆಂಕಿ ಮಹದೇವು ನಿರ್ಧರಿಸಿದ್ದಾರೆ.

ಹನೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ನಾಯಕಿ ಮಾಜಿ ಶಾಸಕಿ ಪರಿಮಳಾ ನಾಗಪ್ಪ ಈಗ ಯಡಿಯೂರಪ್ಪರ ಹಿಂದೆ ಹೊರಟಿದ್ದಾರೆ. ಅವರು ಇಲ್ಲಿಂದ ಕೆಜೆಪಿ ಅಭ್ಯರ್ಥಿಯಾಗುವುದು ದಟ್ಟವಾಗಿದೆ.

ಚಾಮರಾಜನಗರ ಮತ್ತು ಗುಂಡ್ಲುಪೇಟೆ


ಜೆಡಿಎಸ್ ನಾಯಕ ಬೆಂಕಿ ಮಹದೇವು ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸುವ ಆಸೆ ಹೊಂದಿದ್ದಾರೆ. ಅವರಿಗೆ ಕಾಂಗ್ರೆಸ್ ಪಕ್ಷದಿಂದ ಹಾಲಿ ಶಾಸಕ ಪುಟ್ಟರಂಗಶೆಟ್ಟಿ ಎದುರಾಳಿಯಾಗಲಿದ್ದಾರೆ. ಇನ್ನು ಬಿಜೆಪಿಯ ಜಿಲ್ಲಾಧ್ಯಕ್ಷ ಮತ್ತು ಎಂಎಲ್‌ಸಿ ಪ್ರೊ. ಮಲ್ಲಿಕಾರ್ಜುನಪ್ಪ ಅವರಿಗೆ ಟಿಕೆಟ್ ಕೊಡಲು ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ. ಇತ್ತೀಚಿಗೆ ಜಿಲ್ಲಾ ಉಸ್ತುವಾರಿಯನ್ನು ವಹಿಸಿಕೊಂಡಿರುವ ಸಚಿವ ವಿ.ಸೋಮಣ್ಣನ ಕಣ್ಣೂ ಈ ಕ್ಷೇತ್ರದ ಮೇಲಿದೆ. ಒಂದು ಮೂಲದ ಪ್ರಕಾರ ಸೋಮಣ್ಣ ಮುಂದಿನ ಬಾರಿ ಇಲ್ಲಿಂದ ಸ್ಪರ್ಧಿಸುವ ಆಲೋಚನೆಯಲ್ಲಿದ್ದಾರಂತೆ.

ಗುಂಡ್ಲುಪೇಟೆಯಿಂದ ಹಾಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಎಸ್.ಮಹದೇವಪ್ರಸಾದ್ ಸ್ಪರ್ಧೆ ಖಚಿತವಾಗಿದೆ. ನಿರಂಜನ್‌ಕುಮಾರ್ ಎಂಬಾತ ಕೆಜೆಪಿಯ ಅಭ್ಯರ್ಥಿ ಆಗುವ ಸೂಚನೆಗಳಿವೆ. ಈತನಿಗೆ ಯಡ್ಡಿಯ ಆಶೀರ್ವಾದ ಇದ್ದು ಕಾಂಗ್ರೆಸ್‌ಗೆ ತೀವ್ರ ಪೈಪೋಟಿ ಒಡ್ಡುವ ನಿರೀಕ್ಷೆಗಳಿವೆ. ಅಚ್ಚರಿಯ ವಿಷಯ ಯಾವುದೆಂದರೆ ಇಲ್ಲಿ ಲಿಂಗಾಯತರೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಸ್ವತಃ ಯಡಿಯೂರಪ್ಪನೇ ಇಲ್ಲಿಂದ ಸ್ಪರ್ಧಿಸುವ ಆಲೋಚನೆಯಲ್ಲಿದ್ದಾರೆ ಎಂಬ ಮಾತೂ ಕೆಜೆಪಿಯಿಂದ ಕೇಳಿಬರುತ್ತಿದೆ.

ಒಟ್ಟಾರೆಯಾಗಿ ಚಾಮರಾಜನಗರ ಜಿಲ್ಲೆಯಲ್ಲಿ ಬಿಜೆಪಿ ಸುಸ್ತುಹೊಡೆಯುತ್ತಿದೆ. ಆದರೂ ಮುಂದಿನ ಚುನಾವಣೆಯಲ್ಲಿ ಆಡಳಿತದ ಯಂತ್ರವನ್ನು ದುರುಪಯೋಗ ಮಾಡಿಕೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹುನ್ನಾರದಲ್ಲಿದೆ. ಹಾಗೆಯೇ ಇಲ್ಲಿ ಕಾಂಗ್ರೆಸ್ ತೀವ್ರ ಪೈಪೋಟಿ ಎದುರಿಸಲಿದೆ. ಇವೆರಡರ ಮಧ್ಯೆ ಯಡ್ಡಿಯ ಕೆಜೆಪಿ ಇಲ್ಲಿ ಖಾತೆ ತೆರೆದರೆ ಅಚ್ಚರಿ ಇಲ್ಲ.

■ ವರದಿಗಾರ

ತನ್ವೀರ್ ಹತ್ಯೆಗೆ ಬಚಖಾನನ ರಿವಾಲ್ವರ್?



ತನ್ವೀರ್

ಒಂದೇ ವಾರದಲ್ಲಿ ಮೂರು ಪಿಸ್ತೂಲುಗಳನ್ನು ಜಪ್ತಿ ಮಾಡಿದ ಬೆಂಗಳೂರು ಪೊಲೀಸರ 'ಆಪರೇಷನ್ ಗನ್ ಹಂಟ್'ಗೆ ಯಾವ್ಯಾವ ಹುತ್ತದಿಂದ ಎಂತೆಂಥ ಹಾವುಗಳು ಹೊರಬರುತ್ತವೋ!

ಮೊನ್ನೆಯಷ್ಟೇ ಶಿವಾಜಿನಗರ ಪೊಲೀಸರು ಹಿಡಿದು ಹಾಕಿದ ಇಬ್ಬರು ರವಿ ಪೂಜಾರಿ ಬಂಟರು ಮತ್ತು ಇಲ್ಲಿಗೆ ವಾರದ ಹಿಂದೆ ಬಾಣಸವಾಡಿ ಇನ್ಸ್‌ಪೆಕ್ಟರ್ ರಂಗಪ್ಪನವರ ಬಲೆಗೆ ಬಿದ್ದ ನಾಲ್ವರು ಛೋಟಾ ರಾಜನ್ ಶಿಷ್ಯರಿಂದ ಜಪ್ತಾದ ಪಿಸ್ತೂಲುಗಳ ಮೂಲ ಕೆದಕುತ್ತಾ ಹೋದಂತೆಲ್ಲ ಬೇರೆಯದೇ ಲೋಕವೊಂದು ಬಾಯಿಬಿಡುತ್ತದೆ.

ಒಂದಲ್ಲ, ಎರಡಲ್ಲ ಬೆಂಗಳೂರಿಗೆ ಬಂದದ್ದು ಒಟ್ಟು ಐದು ಪಿಸ್ತೂಲುಗಳು. ಅದೂ ಕರ್ನಾಟಕದ ಗುಲ್ಬರ್ಗದಿಂದಲೇ ಬಂದಿವೆ. ಈ ಐದೂ ಪಿಸ್ತೂಲುಗಳನ್ನು ತರಿಸಿದ್ದು ಶಿವಾಜಿನಗರದ ಹಳೇ ಡಾನ್ ತನ್ವೀರ್‌ನ ಸಹಚರರು. ಮತ್ತು ಇವರಿಗೆ ಪಿಸ್ತೂಲುಗಳನ್ನು ಒದಗಿಸಿಕೊಟ್ಟವನು ಸದ್ಯ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿರುವ ಮುಂಬಯಿ ಪಾತಕಿ ಯುಸೂಫ್ ಬಚಖಾನ. ಬಿಲ್ಡರ್ ಸುಬ್ಬರಾಜು ಕೊಲೆ ಕೇಸಲ್ಲಿ ಜೀವಾವಧಿ ಶಿಕ್ಷೆಗೀಡಾಗಿ ತನ್ನ ದುಷ್ಮನ್ ರೈ ವಿರುದ್ಧ ಕತ್ತಿಮಸೆಯುತ್ತಲೇ ಇರುವ ಬಚಖಾನನಿಗೆ ಶಿವಾಜಿನಗರದ ರೌಡಿ ತನ್ವೀರ್ ಬಂಟರಿಗೆ ಒಂದಲ್ಲ ಐದು ರಿವಾಲ್ವರ್‌ಗಳನ್ನು ಕೊಡಿಸಿ ಸಾಧಿಸಬೇಕಾದ ಹಿಕಮತ್ತಾದರೂ ಏನಿತ್ತು?

ಬಂದ ಪಿಸ್ತೂಲುಗಳ ಪೈಕಿ ಒಂದೆರಡು ಶಿವಾಜಿನಗರದ ರೌಡಿ ತನ್ವೀರ್‌ನ ಹತ್ಯೆಗೆಂದು ಆತನ ಬಂಟನೇ ತರಿಸಿಕೊಂಡಿದ್ದೇ? ಸದ್ಯ ಬೆಂಗಳೂರಿನಲ್ಲಿ ನೆಲೆಯೂರಿರುವ ಕೇರಳದ ಬಿಲ್ಡರ್ ಉಮರ್ ಫಾರೂಕ್‌ನನ್ನು ಮುಗಿಸಲು ಪಾತಕಿ ಯೂಸುಫ್ ಬಚಖಾನ ತನ್ವೀರ್ ಶಿಷ್ಯರಿಗೇಕೆ ಸುಪಾರಿ ಕೊಡುತ್ತಾನೆ? ಯಾವ ಲ್ಯಾಂಡಿನ ಡಿಸ್‌ಪ್ಯೂಟು ತನ್ವೀರ್ ಶಿಷ್ಯರಿಗೂ ಹಿಂಡಲಗಾ ಜೈಲಿನ ರಣಪಾತಕಿ ಬಚಖಾನನಿಗೂ ನೆಂಟಸ್ತಿಕೆ ಅಂಟು ಹಾಕಿದೆ?

ಹೀಗೆ ಶುರುವಾಗುವ ಮಸಲತ್ತು-ಹಿಕಮತ್ತುಗಳ ಲೇಟೆಸ್ಟ್ ಪರಿಣಾಮವೆ ಶಿವಾಜಿನಗರ ಪೊಲೀಸರಿಗೆ ಸೆರೆಸಿಕ್ಕ ರವಿ ಪೂಜಾರಿ ಶಿಷ್ಯರು. ಡಿಸೆಂಬರ್ 15 ರಂದು ಶಿವಾಜಿನಗರದ ಪೊಲೀಸರು ಸೆರೆಹಿಡಿದ ಇಬ್ಬರು ರವಿ ಪೂಜಾರಿ ಬಂಟರ ಪೈಕಿ ಒಬ್ಬನ ಹೆಸರು ಆನಂದಕುಮಾರ್ ಅಲಿಯಾಸ್ ಅಂಟು. ಈತ ನಾಗವಾರ ಮೇನ್ ರೋಡಿನವನು. ಈತನ ಜೊತೆ ಬೊಮ್ಮನಹಳ್ಳಿಯ ಮಧು ಎಂಬಾತನೂ ಸಿಕ್ಕಿಬಿದ್ದಿದ್ದ. ಆನಂದ್ ಈ ಹಿಂದೆ ಜಯನಗರದ ಶಬನಮ್ ಡೆವಲಪರ್ಸ್ ಅಡ್ಡೆಯ ಮೇಲೆ ನಡೆದ ಶೂಟೌಟಿನಲ್ಲಿದ್ದ. ಈತ ಮತ್ತು ಮಧು ಸೇರಿಕೊಂಡು ಬೊಮ್ಮನಹಳ್ಳಿ ಬಿಜೆಪಿ ಶಾಸಕ ಸತೀಶ್ ರೆಡ್ಡಿಯ ಪಟ್ಟ ಶಿಷ್ಯ ರೌಡಿ ಕವಳನನ್ನು ಮುಗಿಸಲು ಶಿವಾಜಿನಗರದ ಕರ್ನಲ್ ಹಿಲ್ ಸ್ಕೂಲಿನ ಎದುರು ಕೂತು ಸ್ಕೆಚ್ಚು ಹಾಕುತ್ತಿದ್ದರೆಂದೂ ಅದಕ್ಕೊಂದು ರಿವಾಲ್ವರನ್ನೂ ಹೊಂಚಿಟ್ಟು ಕೊಂಡಿದ್ದರೆಂದೂ ಹೇಳಿಕೆ ಕೊಟ್ಟವರು ಡಿಸಿಪಿ ಕೃಷ್ಣಭಟ್.

ಅಂಟು ಮತ್ತು ಪಿಸ್ತೂಲು!

ಬೆಂಗಳೂರಿನ ಅಧೋಲೋಕದ ಆಗುಹೋಗುಗಳನ್ನು ಬಲ್ಲವರಿಗಿದು ಕೊಂಚ ವಿಚಿತ್ರವಾಗಿ ಕಂಡಿರಲೇಬೇಕು. ಏಕೆಂದರೆ ರೌಡಿ ಕವಳನ ಅಡ್ಡೆ ಏನಿದ್ದರೂ ಹೊಸೂರು ರಸ್ತೆಯ ಮಡಿವಾಳದಿಂದಾಚೆಗೆಯೆ. ಅಷ್ಟಕ್ಕೂ ಆನಂದ್ ಅಲಿಯಾಸ್ ಅಂಟು ಎಂಬ ರವಿ ಪೂಜಾರಿ ಬಂಟನಿಗೆ ರೌಡಿ ಕವಳನನ್ನು ಕೊಂದು ಸಾಧಿಸಬೇಕಾದದ್ದು ಏನೇನೂ ಇಲ್ಲ, ದುಷ್ಮನಿಯಂತೂ ಇಲ್ಲವೇ ಇಲ್ಲ, ಹಾಗಿರುವಾಗ ರೌಡಿ ಅಂಟು ಮತ್ತು ಮಧು ಸೇರಿ ಕವಳನಿಗೆ ಸ್ಕೆಚ್ ಹಾಕಿಕೊಂಡು ಶಿವಾಜಿನಗರದ ಶಾಲೆಯೊಂದರ ಮುಂದೆ ಹೊಂಚಿ ಕೂತಿದ್ದರೆಂಬುದೇ ವಿಚಿತ್ರವಾಗಿತ್ತು.

ಇದರ ಅಸಲೀಯತ್ತು ಅಡಗಿದ್ದದ್ದು ಅವರಿಂದ ಪೊಲೀಸ್ ಜಪ್ತಿ ಮಾಡಿಕೊಂಡಿದ್ದ ಪಿಸ್ತೂಲಿನಲ್ಲಿ. ಹಿಂಡಲಗಾ ಜೈಲಿನ ಪಾತಕಿ ಯೂಸುಫ್ ಬಚಖಾನನ ಮೂಲಕ ರೌಡಿ ತನ್ವೀರ್ ಸಹಚರರ ಕೈಗೆ ಬಂದಿದ್ದ ಪಿಸ್ತೂಲುಗಳ ಪೈಕಿ ಒಂದನ್ನು ರವಿ ಪೂಜಾರಿ ಗ್ಯಾಂಗಿನ ಅಂಟು ಎಂಬಾತನ ತಲೆಗೆ ಕಟ್ಟಿ ಪೊಲೀಸರು ಕೈಚಳಕ ಮೆರೆದರೆ?

ಏಕೆಂದರೆ ಯೂಸುಫ್ ಬಚಖಾನನ ತಮ್ಮನಿಂದ ಬಾಣಸವಾಡಿ ಪೊಲೀಸರು ವಶಪಡಿಸಿಕೊಂಡ ಮೂರು ಪಿಸ್ತೂಲುಗಳ ಪೈಕಿ ಲೆಕ್ಕಕ್ಕೆ ತೋರಿಸಿದ್ದು ಕೇವಲ ಎರಡು ಮಾತ್ರ. ಇನ್ನೊಂದು ಪಿಸ್ತೂಲು ಏನಾಯ್ತು? ತನ್ವೀರ್ ಶಿಷ್ಯ ಶಾಕೀರ್ ಗುಲಬರ್ಗಾದಿಂದ ತರಿಸಿಕೊಂಡಿದ್ದ ಮೂರು ಪಿಸ್ತೂಲುಗಳ ಪೈಕಿ ಒಂದನ್ನು ಪೊಲೀಸರು ಕವಳನ ಕೊಲೆ ಸ್ಕೆಚ್ಚಿನ ಲೆಕ್ಕಕ್ಕೆ ಸೇರಿಸಿರಬಹುದೆ?

ಇದು ಬೇರೆ ಯಾರದೋ ಅನುಮಾನವಲ್ಲ; ಖುದ್ದು ಹಿಂಡಲಗಾ ಜೈಲಿನಿಂದ ಈ ವರದಿಗಾರನಿಗೆ ಸಂದರ್ಶನ ಕೊಟ್ಟ ಮುಂಬಯಿ ಪಾತಕಿ ಯೂಸುಫ್ ಬಚಖಾನನ ಪ್ರಶ್ನೆ.

ಸದ್ಯ ಬಚಖಾನನ ತಮ್ಮ ಮರ್ದಾನ್‌ನನ್ನು ಬಾಣಸವಾಡಿ ಇನ್ಸ್‌ಪೆಕ್ಟರ್ ರಂಗಪ್ಪ ಹಿಡಿದು ಜೈಲಿಗೆ ಹಾಕಿದ್ದಾರೆ. ಹೆಚ್‌ಎಸ್‌ಆರ್ ಲೇಔಟಿನ ಮರ್ದಾನ್ ಸುಲೇಮಾನ್ ಖಾನ್‌ನ ಜೊತೆ ಆರ್.ಟಿ.ನಗರದ ಸೈಯದ್ ಫಾರೂಕ್, ಕೆ.ಜಿ.ಹಳ್ಳಿಯ ಮುಜೀಬುದ್ ರೆಹಮಾನ್ ಮತ್ತು ಜಮೀ ಅಹ್ಮದ್‌ರಿಂದ ಬಾಣಸವಾಡಿ ಇನ್ಸ್‌ಪೆಕ್ಟರ್ ರಂಗಪ್ಪ ಮತ್ತು ಕೆ.ಜಿ.ಹಳ್ಳಿ ಇನ್ಸ್‌ಪೆಕ್ಟರ್ ಶ್ರೀನಿವಾಸ್ ವಶಪಡಿಸಿಕೊಂಡಿದ್ದು ಎರಡು ಪಿಸ್ತೂಲು ಮತ್ತು 11 ಗುಂಡುಗಳು!

ಶಿವಾಜಿನಗರದ ಶಾಕೀರ್!

ಇಲ್ಲೂ ಅಷ್ಟೆ-ಬಚಖಾನನ ತಮ್ಮ ಮರ್ದಾನ್ ತನ್ನ ಸಹಚರರ ಜೊತೆ ದರೋಡೆಗೆ ಹೊಂಚು ಹಾಕುತ್ತಿದ್ದರಿಂದಲೇ ಆತನನ್ನು ಬಂಧಿಸಲಾಯ್ತು ಎಂದು ಪೊಲೀಸರು ಪರಿಸಮಾಪ್ತಿ ಮಾಡಿಬಿಟ್ಟರು. ಹಾಗಂತ ಇಷ್ಟಕ್ಕೇ ಇದು ಮುಗಿಯುವ ಹಕೀಕತ್ತಲ್ಲ. ಮೊದಲು ಸೆರೆಸಿಕ್ಕ ಸೋಕಾಲ್ಡ್ ಛೋಟಾ ರಾಜನ್ ಬಂಟರಿಗೂ ಆನಂತರ ಜೈಲುಪಾಲಾದ ರವಿ ಪೂಜಾರಿ ಶಿಷ್ಯರಿಗೂ ರಿವಾಲ್ವರ್ ಸಿಕ್ಕಿದ್ದೇ ಬೆಳಗಾವಿ ಜೈಲಿನ ಯೂಸುಫ್ ಬಚಖಾನನಿಂದ ಎಂಬುದಾದರೆ ಅದರ ಹಿಂದೊಂದು ಬೇರೆಯದೇ ಕತೆಯಿರಬೇಕಲ್ಲವೆ?



ಮರ್ದಾನ್

ಅದನ್ನು ತನ್ನದೇ ಧಾಟಿಯಲ್ಲಿ ಹೇಳಿದವನು ಬಚಖಾನ, "ದೇಖೋ ಸಾಬ್ ನಾನು ಕೊಡಿಸಿದ್ದು ಎರಡಲ್ಲ, ಮೂರಲ್ಲ ಒಟ್ಟು ಐದು ಪಿಸ್ತೂಲುಗಳು. ನಾನು ಕೊಡಿಸಿದ್ದು ತನ್ವೀರ್ ಶಿಷ್ಯ ಶಾಕೀರ್‌ಗೇ ಹೊರತು ಇದಕ್ಕೂ ನನ್ನ ತಮ್ಮ ಮರ್ದಾನ್‌ಗೂ ಏನೇನೂ ಸಂಬಂಧವಿಲ್ಲ, ಅನ್ಯಾಯವಾಗಿ ನನ್ನ ತಮ್ಮ ಮರ್ದಾನ್‌ನನ್ನು ಕೇಸಿಗೆ ಸಿಲುಕಿಸಿದ್ದಾರೆ. ನನಗೆ ಬಂದಿರೋ ಮಾಹಿತಿ ಪ್ರಕಾರ ತನ್ವೀರ್ ಶಿಷ್ಯ ಶಾಕೀರ್ ನನ್ನಿಂದ ಪಿಸ್ತೂಲ್ ಗಿಟ್ಟಿಸಿದ್ದೇ ತನ್ನ ಗುರು ತನ್ವೀರ್‌ನನ್ನು ಮುಗಿಸುವುದಕ್ಕೆ...!"

ಹೀಗೆ ಶುರುವಾಗುವ ಮುಂಬಯಿ ಪಾತಕಿ ಬಚಖಾನನ ಮಾತುಗಳಲ್ಲಿ ಎಷ್ಟು ಸತ್ಯವಿದೆಯೋ ಗೊತ್ತಿಲ್ಲ, ಆದರೆ ಬೆಂಗಳೂರು ಭೂಗತ ಲೋಕದ ಬಗ್ಗೆ ಬಚಖಾನ ಹೊಸ ಸಂಗತಿಗಳನ್ನಂತೂ ಹೊರಗೆಡಹುತ್ತಾನೆ. "ದೇಖೋ ಸಾಬ್ ನಿಮಗೆ ಶಿವಾಜಿನಗರದ ಶಾಕೀರ್ ಮತ್ತು ಫಾರೂಕ್ ಗೊತ್ತಿರಬೇಕು. ಇಬ್ಬರೂ ತನ್ವೀರ್ ಶಿಷ್ಯರು. ಅದೇನು ಕತೆಯೋ ಗೊತ್ತಿಲ್ಲ ಕಳೆದ ಎರಡು ತಿಂಗಳಿಂದ ಇವರಿಬ್ಬರೂ ಪಿಸ್ತೂಲಿಗಾಗಿ ನನ್ನ ಹಿಂದೆ ಬಿದ್ದಿದ್ದರು. ಮೊದಲು ಬೆಳಗಾವಿಯ ಹಿಂಡಲಗಾ ಜೈಲಿಗೆ ಬಂದರು. ನಮಗೆ 'ಸಾಮಾನ್' ಬೇಕು ಅಂದರು. ಸಾಮಾನ್ ಅಂದ್ರೆ ಗೊತ್ತಲ್ಲ-ಗನ್ನು... ಮತಲಬ್ ಪಿಸ್ತೂಲ್!

ಅರೆ ಬಾಯ್; ನೀವು ಏನೇನೋ ಉಲ್ಟಾಪಲ್ಟಾ ಮಾಡಿ ಕೊನೆಗೆ ನಾನು ಪಿಸ್ತೂಲು ಕೊಟ್ಟೆ ಅಂತ ನನ್ನನ್ನು ಸಿಕ್ಕಿ ಹಾಕಿಸ್ತೀರಾ. ದಯವಿಟ್ಟು ನನ್ನ ಹತ್ತಿರ 'ಸಾಮಾನ್' ಬಗ್ಗೆ ಮಾತಾಡಲೇಬೇಡಿ ಎಂದಿದ್ದೆ. ಅದಕ್ಕೆ ಶಾಕೀರ್ 'ಇಲ್ಲ ಭಾಯಿ ನಮ್ಮದು ಏನೋ ದುಷ್ಮನಿ ಇದೆ. ಇದರಿಂದ ನಿನಗೂ ಫಾಯಿದೆ ಇದೆ. ನೀನು ನಮಗೆ ಸಾಮಾನ್ ಕೊಟ್ರೆ ನಮ್ಮ ಕೆಲಸ ಮುಗಿಸಿಕೊಂಡು ಆನಂತ್ರ ನಿನ್ನ ಕೆಲಸಾನೂ ಮುಗಿಸಿಕೊಡ್ತೀವಿ' ಎಂದಿದ್ದ.

ನನ್ನ ಕೆಲಸ ಏನು ಅಂತೀರಾ? ಶಿವಾಜಿನಗರದಲ್ಲಿ ಉಮರ್ ಫಾರೂಕ್ ಅನ್ನೋ ಬಿಲ್ಡರ್ ಇದ್ದಾನೆ. ಆತ ಮೂಲತಃ ಮಲಬಾರಿ, ಕೇರಳದವನು. ಹೋಟೇಲ್ ಕೂಡ ನಡೆಸುತ್ತಾನೆ. ನನಗೆ ಬೇಕಾದವರೊಬ್ಬರ ಆಸ್ತಿಗೆ ವಕ್ಕರಿಸಿ ತುಂಬಾ ತೊಂದರೆ ಕೊಡುತ್ತಿದ್ದಾನೆ. ಆ ಆಸ್ತಿಯ ಸದ್ಯದ ಮಾರುಕಟ್ಟೆ ರೇಟು ಕಮ್ಮಿಯೆಂದರೂ ಎಂಟು ಕೋಟಿ. ಉಮರ್ ಫಾರೂಕ್ ಅದಕ್ಕೆ 25 ಲಕ್ಷ ಅಡ್ವಾನ್ಸ್ ಮಾತ್ರವೇ ಕೊಟ್ಟು ಉಳಿಕೆ ಹಣ ಕೊಡುತ್ತಿಲ್ಲ, ಇತ್ತ ಜಮೀನನ್ನು ಬಿಡುತ್ತಿಲ್ಲ, ಅದು ನನಗೆ ತುಂಬಾ ಬೇಕಾದವರ ಆಸ್ತಿ, ನನ್ನತ್ರ ಬಂದು ಕಣ್ಣೀರಿಟ್ಟರು. ನಾನು ಉಮರ್ ಫಾರೂಕ್‌ಗೆ ಫೋನ್ ಮಾಡಿ 'ದೇಖೋ ಭಾಯ್, ನಾನು ನಾಲ್ಕು ಕೋಟಿ ಕೊಡ್ತೀನಿ. ಅದನ್ನು ನನಗೆ ಕೊಟ್ಟು ಬಿಡು. ಮಿಕ್ಕಿದ್ದೆಲ್ಲಾ ನಾನು ನೋಡ್ಕೋತೀನಿ. ಇಲ್ಲಾ ಅಂದ್ರೆ ನೀನು ಕೊಟ್ಟ 25 ಲಕ್ಷಕ್ಕೆ ಬಡ್ಡಿ ಸೇರಿಸಿ ತಗೊಂಡು ಜಾಗ ಖಾಲಿ ಮಾಡು' ಎಂದೆ.

ಗುಲಬರ್ಗಾದ ವಹಾಬ್

ಅಷ್ಟಕ್ಕೇ ಉಮರ್ 'ನಾನು ಹೋಮ್ ಮಿನಿಸ್ಟರ್ ಆಫೀಸಿನಿಂದ ಮಾತಾಡ್ತಾ ಇದ್ದೀನಿ, ನಿನ್ನಂಥ ತುಂಬಾ ಜನರನ್ನು ನೋಡಿದ್ದೀನಿ' ಎಂದೆಲ್ಲಾ ರುಬಾಬು ಮಾಡಿಬಿಟ್ಟ. ಅಶೋಕನಗರ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದೂರನ್ನೂ ಕೊಟ್ಟ. ಇದಾಗಿದ್ದು 2010 ರಲ್ಲಿ, ಇಲ್ಲಿಗೆ ತಿಂಗಳ ಹಿಂದೆ ಆತನ ದೂರಿಗೆ ಪೊಲೀಸರು 'ಬಿ' ರಿಪೋರ್ಟು ಹಾಕಿದ್ದಾರೆ. ಆದರೆ ಉಮರ್ ಫಾರೂಕ್ ಮಾತ್ರ ನನ್ನ ವಿರುದ್ಧ ಕತ್ತಿ ಮಸೆಯುತ್ತಲೇ ಇದ್ದಾನೆ. ಇದು ತನ್ವೀರ್ ಶಿಷ್ಯ ಶಾಕೀರ್ ಮತ್ತು ಫಾರೂಕ್‌ಗೆ ಚೆನ್ನಾಗೇ ಗೊತ್ತಿತ್ತು.

'ದೇಖೋ ಭಾಯ್, ನೀವು ಪಿಸ್ತೂಲು ಕೊಡಿಸಿದ್ರೆ ಮೊದಲು ನಮ್ಮ ಕೆಲಸ ಮುಗಿಸಿಕೊಂಡು ಆನಂತರ ದೇವನಹಳ್ಳಿ ಆಸ್ತಿ ವಿಷಯದಲ್ಲಿ ಉಮರ್‌ನನ್ನು ನಿಕಾಲಿ ಮಾಡಿಕೊಡ್ತೀವಿ' ಅಂದ್ರು. ನನಗೆ ಉಮರ್ ಮಾಡಿದ ಮೋಸದ ವಿರುದ್ಧ ಸ್ನೇಹಿತರ ಆಸ್ತಿಯನ್ನು ಕಾಪಾಡಲೇಬೇಕಿತ್ತು, ಅದಕ್ಕೆ ಶಾಕೀರ್‌ಗೆ ಗುಲ್ಬರ್ಗಾದ ವಹಾಬ್‌ನನ್ನು ಕಾಂಟ್ಯಾಕ್ಟ್ ಮಾಡು ಆತ ಸಾಮಾನ್ ಕೊಡಿಸ್ತಾನೆ ಎಂದೆ. ದೋಖಾ ಮಾಡಲ್ಲ ಎಂದೇ ಶಾಕೀರ್ ಮಾತುಕೊಟ್ಟಿದ್ದರಿಂದ ನಂಬಿದ ನಾನು ಗುಲಬರ್ಗಾದ ವಹಾಬ್‌ಗೆ ಸಾಮಾನು ಕೊಡಿಸಿಕೊಡು ಎಂದೇ ಹೇಳಿದ್ದೆ.

ಅದು 2012 ರ ಅಕ್ಟೋಬರ್ ಮೊದಲನೇ ವಾರ. ಶಿವಾಜಿನಗರದ ಶಾಕೀರ್, ಫಾರೂಕ್, ನದೀಮ್ ಮತ್ತು ಟ್ಯಾನಿರೋಡ್ ಗೋವಿಂದಪುರದ ಪುರ್ಖಾನ್- ನಾಲ್ವರೂ ಗುಲಬರ್ಗಾಕ್ಕೆ ಹೋಗಿದ್ದಾರೆ. ಆದರೆ ವಹಾಬ್ ನನ್ನ ದಂಧೆ ನಿಂತುಹೋಗಿದೆ. ಪಿಸ್ತೂಲು ಕೊಡುತ್ತಿದ್ದ ಆಸಾಮಿ ಅರೆಸ್ಟ್ ಆಗಿದ್ದಾನೆ ಎಂದು ಹಿಂದೇಟು ಹಾಕಿಬಿಟ್ಟ. ಆದರೆ ತನಗೆ ಗುಲ್ಬರ್ಗಾ ಪಕ್ಕದ ಹೀರಾಪುರ್‌ನ ಇರ್ಫಾನ್ ಮತ್ತು ಇರ್ಷಾದ್ ಎಂಬ ಪಿಸ್ತೂಲು ಸ್ಮಗ್ಲರ್ ಬ್ರದರ್ಸ್ ಗೊತ್ತು ಬೇಕಾದ್ರೆ ಅವರಿಗೆ ಒಂದು ಮಾತು ಹೇಳ್ತೀನಿ ಎಂದ.



ಬಚಖಾನ್

ಭರೋಸೆಕೆ ಆದ್ಮೀಯಾ (ನಂಬಿಕೆಯ ಜನರಾ) ಎಂದು ಮತ್ತೆ ಮತ್ತೆ ನನ್ನಿಂದ ಗ್ಯಾರಂಟಿ ಮಾಡಿಕೊಂಡೇ ವಹಾಬ್ ಹೀರಾಪುರದ ಇರ್ಫಾನ್ ಮತ್ತು ಇರ್ಷಾದ್‌ರನ್ನು ಕಾಂಟ್ಯಾಕ್ಟ್ ಮಾಡಿಸ್ತಿದ್ದೀನಿ ಎಂದಿದ್ದ. ಅದಕ್ಕೆ ನಾನು 'ನೀನು ಇದರಲ್ಲಿ involve ಆಗಬೇಡ. ಇರ್ಷಾದ್ ಮತ್ತು ಇರ್ಫಾನ್ ನನಗೇ ಗೊತ್ತು ಎಂದು ನಾನೇ ಪರಿಚಯಿಸಿಕೊಟ್ಟಿದ್ದೆ. ಗುಲಬರ್ಗಾದ ಬಂದೇನವಾಜ್ ದರ್ಗಾದಲ್ಲಿ ಎರಡೂ ಪಾರ್ಟಿಗಳು ಭೇಟಿಯಾಗಿ ಇರ್ಫಾನ್ ಮತ್ತು ಇರ್ಷಾದ್‌ಗೆ 1.60 ಲಕ್ಷವನ್ನು ಶಾಕೀರ್ ಕೊಟ್ಟಿದ್ದ. ಮರುದಿನ ಸಿಲ್ವರ್ ಬಣ್ಣದ ಎರಡು ಪಿಸ್ತೂಲುಗಳನ್ನು ಹೀರಾಪುರ್ ಬ್ರದರ್ಸ್ ಕೊಟ್ಟರು. ಜೊತೆಗೆ 16 ಕಾಟ್ರಿಡ್ಜ್ ಕೂಡ ಇತ್ತು, ಅಂದರೆ ತಲಾ ಎಂಟು ಗುಂಡುಗಳ ಎರಡು ಮ್ಯಾಗಝಿನ್ನುಗಳು!

ಇನ್ನೂ 3 ಪಿಸ್ತೂಲು!

ಇದನ್ನು ಶಾಕೀರ್ ಗ್ಯಾಂಗ್ ಅಲ್ಲೇ ಯಾವುದೋ ನಿರ್ಜನ ಪ್ರದೇಶದಲ್ಲಿ ಫೈರ್ ಮಾಡಿ ಪರೀಕ್ಷಿಸಿಕೊಂಡಿದ್ದಾರೆ. ಓಕೆ ಆಗಿದೆ. ಎಕ್ಸ್‌ಟ್ರಾಬುಲೆಟ್ ಒಂದಕ್ಕೆ ಐನೂರು ರೂಪಾಯಿ ಅಂತಲೂ ಇರ್ಫಾನ್ ಮತ್ತು ಇರ್ಷಾದ್ ಹೇಳಿದ್ದಾರೆ. ಅದನ್ನು ಒಪ್ಪಿಕೊಂಡೇ ಶಾಕೀರ್ ಗ್ಯಾಂಗ್ ಬೆಂಗಳೂರಿಗೆ ಬಂದಿದೆ. ಕೆಲದಿನಗಳ ನಂತರ ಶಾಕೀರ್ ಬೆಳಗಾವಿ ಜೈಲಿಗೆ ಬಂದು ನನಗೆ 25 ಸಾವಿರ ರೂಪಾಯಿ ಕೊಟ್ಟು ಹೋದ. ಹೋಗುವಾಗ ಬಿಲ್ಡರ್ ಉಮರ್ ಫಾರೂಕ್ ಮೇಲೆ ರೌಂಡಿಂಗ್ ಮಾಡ್ತೀವಿ. ಜಬ್‌ಮಿಲೇಗ ಉಸ್‌ಕೊ ರೋಕ್ ದೇಂಗೇ....' ಅಂತಲೇ ಶಾಕೀರ್ ಮಾತು ಕೊಟ್ಟಿದ್ದ.

ಕೆಲದಿನಗಳ ಕಾಲ ಶಾಕೀರ್, ಫಾರೂಕ್, ಪುರ್ಖಾನ್ ಸೇರಿಕೊಂಡು ಬಿಲ್ಡರ್ ಉಮರ್ ಫಾರೂಕ್‌ನನ್ನು ಮುಗಿಸಲು ಓಡಾಡಿದರಾದರೂ ಆ ಹೊತ್ತಿಗೆ ಆತ ಬೆಂಗಳೂರಿನಲ್ಲಿರಲಿಲ್ಲ. ಬಚಾವಾಗಿ ಬಿಟ್ಟ. ಇದೇ ಹೊತ್ತಿಗೆ ನಾನು ಮೆಡಿಕಲ್ ಗ್ರೌಂಡ್ಸ್ ಮೇಲೆ ಧಾರವಾಡದ ಸೆಂಟ್ರಲ್ ಜೈಲಿಗೆ ಬಂದಿದ್ದೆ. ಅದು 2012 ರ ನವೆಂಬರ್ 6ನೇ ತಾರೀಖು ಫಾರೂಕ್, ಶಾಕೀರ್ ಮತ್ತು ಪುರ್ಖಾನ್ ಮೂವರೂ ಧಾರವಾಡ ಜೈಲಿಗೆ ಎಂಟ್ರಿ ಹಾಕಿದರು. 'ಉಮರ್ ಫಾರೂಕ್‌ನನ್ನು ಹೊಡೆಯೋದು ಕೊಂಚ ಕಷ್ಟ. ಏಕೆಂದರೆ ಆತನ ಜೊತೆ ಸದಾ ಮೂರ್ನಾಲ್ಕು ಮಂದಿ ಇದ್ದೇ ಇರ್ತಾರೆ. ನಮಗೆ ಇನ್ನೂ ಮೂರು ಪಿಸ್ತೂಲುಗಳಾದರೂ ಬೇಕೇಬೇಕು. ಇರ್ಫಾನ್ ಮತ್ತು ಇರ್ಷಾದ್‌ರ ಫೋನುಗಳು ಬೇರೆ ಸ್ವಿಚ್ ಆಫ್ ಆಗಿವೆ. ಏನಾದರೂ ಮಾಡು....' ಎಂದು ಶಾಕೀರ್ ಗೋಗರೆದ.

ಇಷ್ತಿಯಾಕ್ ಮತ್ತು ತನ್ವೀರ್ ಇಬ್ಬರೂ ದೋಸ್ತಿಗಳೇ ಆದಮೇಲೆ ನಾನೇಕೆ ಅವರನ್ನು ಮುಗಿಸಲಿ?

ದೇಖೋ ಭಾಯ್. ನಾನು ಮುಸ್ಲಿಂ ಎಂದ ಮಾತ್ರಕ್ಕೆ ನಾನೇನು ಸುಪಾರಿ ಕಿಲ್ಲರ್ ಅಲ್ಲ. ಇದೇ ಹಿಂಡಲಗಾ ಜೈಲಿನಲ್ಲಿ ನಾನೇ ನಿಂತು ಗಣೇಶೋತ್ಸವ ಮಾಡಿಸಿದ್ದೇನೆ. ನನ್ನ ಪತ್ನಿ ಇವತ್ತಿಗೂ ಹಿಂದೂ ಧರ್ಮದ ಪ್ರಕಾರವೇ ನಡಕೋತಾಳೆ. ಮುಂಬಯಿಯ ಋಣ ಯಾವುದೋ ಕಾಲಕ್ಕೆ ಮುಗಿದು ಹೋಯಿತು. ನಾನಿನ್ನು ಕರ್ನಾಟಕ್ ಕಾ ಬೇಟಾ. ಇದೇ ಹಿಂಡಲಗಾ ಜೈಲಿನಲ್ಲಿ ನಾನೇ ನಿಂತು ಅದ್ದೂರಿಯ ಕನ್ನಡ ರಾಜ್ಯೋತ್ಸವವನ್ನು ಮಾಡಿದ್ದೇನೆ. ನನ್ನ ಮಗನಿಗೆ ಕನ್ನಡ ಕಲಿಸುತ್ತಿದ್ದೇನೆ. ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ನನಗೆ ರೈ ಬಿಟ್ಟರೆ ಬೇರೆ ದುಷ್ಮನ್‌ಗಳೇ ಇಲ್ಲ.

ಒಂದಾನೊಂದು ಕಾಲಕ್ಕೆ ಮುಂಬಯಿಯ ಕಾಫಿ ಬೋರ್ಡ್ ಕಾಲೋನಿಯಲ್ಲಿ ನಾನು ಆಡಿಯೋ-ವೀಡಿಯೋ ಬಿಜಿನೆಸ್ ಮಾಡಿಕೊಂಡಿದ್ದೆ. ಅಲ್ಲಿಗೆ ಬೆಂಗಳೂರಿನ ರೌಡಿಗಳಾದ ತನ್ವೀರ್ ಮತ್ತು ಇಷ್ತಿಯಾಕ್ ಫೈಲ್ವಾನ್ ಕೂಡ ಬರುತ್ತಿದ್ದರು. ಬೆಂಗಳೂರು ಪೊಲೀಸರಿಗೆ ವಾಂಟೆಡ್ ಆದಾಗಲೆಲ್ಲ ಅವರನ್ನು ಮುಂಬಯಿಯಲ್ಲಿ ದೇಖ್‌ಬಾಲ್ ಮಾಡುತ್ತಿದ್ದದ್ದೇ ನಾನು. ಅದೇನಾಯಿತೋ ಕ್ರಮೇಣ ತನ್ವೀರ್ ಮತ್ತು ಇಷ್ತಿಯಾಕ್ ಕಿತ್ತಾಡಿಕೊಂಡರು. ಅದೇ ಹೊತ್ತಿಗೆ ತನ್ವೀರ್ ಎಸ್ಕೇಪಾಗಿ ದುಬೈ ಸೇರಿಕೊಂಡ. ಆಗ ತನ್ವೀರ್‌ಗೆ ಬಲಗೈ ಬಂಟನಂತಿದ್ದವನು ತರಕಾರಿ ಖಲೀಲ್. ಬೆಂಗಳೂರು ಜೈಲಿನಲ್ಲಿ ನನ್ನ ಜೊತೆಗೇ ಇದ್ದ ತರಕಾರಿ ಖಲೀಲ್ ಅದೊಮ್ಮೆ ದುಬೈನಲ್ಲಿದ್ದ ತನ್ವೀರ್‌ಗೆ ಫೋನಾಯಿಸಿ ನನ್ನ ಜೊತೆ ಮಾತಾಡಿಸಿದ್ದ. ಆಗ ತನ್ವೀರ್ 'ದೇಖೋ ಭಾಯ್ ಆ ಇಷ್ತಿಯಾಕ್ ನನಗೇ ಗದ್ದಾರಿ (ದ್ರೋಹ) ಮಾಡಿದ್ದಾನೆ. ಏನಾದ್ರೂ ಮಾಡಿ ಆತನನ್ನು ನಿಕಾಲಿ ಮಾಡಿಕೊಡು' ಎಂದು ತನ್ವೀರ್ ಕೇಳಿಕೊಂಡಿದ್ದ.

ಅದಕ್ಕೆ ನಾನು ಬಿಲ್‌ಕುಲ್ ಆಗೋಲ್ಲ ಎಂದು ಬಿಟ್ಟೆ. ಏಕೆಂದರೆ ತನ್ವೀರ್ ಮತ್ತು ಇಷ್ತಿಯಾಕ್ ಇಬ್ಬರೂ ನನಗೆ ದೋಸ್ತಿಗಳೆ. ನನ್ನ ಮನೆಯಲ್ಲಿ ಇಬ್ಬರೂ ಒಟ್ಟೊಟ್ಟಿಗೆ ಊಟ ಮಾಡಿದ ಮೇಲೆ ಯಾರನ್ನಂತ ನಾನು ಮುಗಿಸಲಿ. ಅದಕ್ಕೇ ದೇಖೋ ಭಾಯ್ ಈ ವಿಷಯದಿಂದ ನನ್ನನ್ನು ಹೊರಗೆ ಇಟ್ಟುಬಿಡಿ. ಬೆಂಗಳೂರಿನ ವಿಷಯಕ್ಕೆ ನಾನು ಎಂಟ್ರೀನೇ ಆಗಲ್ಲ, ಇದನ್ನು ಬಿಟ್ಟು ಬೇರೆ ವಿಷಯ ಇದ್ದರೆ ಹೇಳಿ ಎಂದಿದ್ದೆ.

ಇವತ್ತಿಗೂ ಅಷ್ಟೇ. ಇಷ್ತಿಯಾಕ್ ಮತ್ತು ತನ್ವೀರ್ ಇಬ್ಬರೂ ನನಗೆ ದೋಸ್ತಿಗಳೆ. ಈ ಮಧ್ಯೆ ಯಾರೋ ಪುಡಿ ರೌಡಿಗಳು ತನ್ವೀರ್‌ಗೆ ಫೋನ್ ಮಾಡಿ ಬಚಖಾನ ನಿನ್ನನ್ನು ಮುಗಿಸುತ್ತಾನೆ ಎಂದು ಧಮಕಿ ಹಾಕಿದ ಮಾಹಿತಿ ಬಂತು. ಹಾಗೇ ಇಷ್ತಿಯಾಕ್‌ಗೂ ನನ್ನ ವಿರುದ್ಧ ಇದೇ ರೀತಿ ಥ್ರೆಟ್ ಕೊಟ್ಟಿದ್ದಾರೆ. ಇದು ಚಿಲ್ಲರೆ ಹುಡುಗರ ಕೆಲಸ. ತನ್ವೀರ್ ಮತ್ತು ಇಷ್ತಿಯಾಕ್ ಇಬ್ಬರ ಜೊತೆಗೂ ನಾನು ಮಾತಾಡಿ ಡೌಟ್ ಕ್ಲಿಯರ್ ಮಾಡಿದ್ದೇನೆ. ದೇಖೋ ಭಾಯ್ ನೀವಿಬ್ಬರೂ ನನಗೆ ದೋಸ್ತ್‌ಗಳೇ, ಮಧ್ಯೆ ಯಾರೇನೆ ಮಾಡಿದರೂ ನಂಬಬೇಡಿ ಎಂದಿದ್ದೇನೆ. ಈಗ ಗೊತ್ತಾಗುತ್ತಿರುವುದು ಏನೆಂದರೆ ಇದೆಲ್ಲವನ್ನು ತನ್ವೀರ್ ಶಿಷ್ಯ ಶಾಕೀರನೇ ಮಾಡುತ್ತಿರಬೇಕು. ಶಕೀರ್ ನನಗೆ ಮೊದಲೇ ಹೇಳಿದ್ದರೆ ತನ್ವೀರ್‌ನನ್ನು ಮುಗಿಸೋದಕ್ಕೇ ಪಿಸ್ತೂಲು ಬೇಕು ಅಂದಿದ್ದರೆ ಆತನಿಗೆ ಪಿಸ್ತೂಲು ಕೊಡುತ್ತಲೇ ಇರಲಿಲ್ಲ, ಯಾವುದಕ್ಕೂ ತನ್ವೀರ್ ಭಾಯಿಗೆ ಹುಷಾರಾಗಿರೋದಕ್ಕೆ ಹೇಳಿ ಸಾಬ್....! ಎನ್ನುತ್ತಾನೆ ಯೂಸುಫ್ ಬಚಖಾನ.

ನನಗೆ ಏನಾದರೂ ಮಾಡಿ ಬಿಲ್ಡರ್ ಉಮರ್‌ನನ್ನು ಸಲೇಬೇಕಿತ್ತು ನೋಡಿ. ಇರ್ಫಾನ್ ಮತ್ತು ಇರ್ಷಾದ್ ನಾಪತ್ತೆಯಾಗಿದ್ದರಿಂದಾಗಿ ಗುಲಬರ್ಗಾದ ರ್‌ನನ್ನೇ ಅವಲಂಬಿಸಬೇಕಾಗಿತ್ತು. ಈ ಬಾರಿ ಮತ್ತೆ ರ್‌ನನ್ನು ಕಾಂಟ್ಯಾಕ್ಟ್ ಮಾಡಿದೆ. ಪ್ರತಿ ಪಿಸ್ತೂಲು ಕ್ಕೆ 80 ಸಾವಿರ ಮತ್ತು ಎಕ್ಸ್‌ಟ್ರಾ ಬುಲೆಟ್ ಒಂದಕ್ಕೆ ರು ರೂಪಾಯಿಯಂತೆ ಒಪ್ಪಿಕೊಂಡ. ಈ ಬಾರಿ ಪುರದಲ್ಲಿ ಡೆಲಿವರಿ ಕೊಡ್ತೀನಿ ಎಂದ. ಅದರಂತೆ ರ್ಾನ್, ಮುಜೀಬ್ ಮತ್ತು ಜಾಕೀರ್ ಉರ್ಫ್ ಪಪ್ಪು ಗಿ ಒಂದೂವರೆ ಲಕ್ಷ ಕೊಟ್ಟು ಬಂದರು. ಇದಾಗಿ ಕ್ಕೆ ಮುಜೀಬ್, ಫುರ್ಖಾನ್, ಪಪ್ಪು ಮತ್ತು ನದೀಮ್ ಪುರಕ್ಕೆ ಹೋಗಿ ಬಾಕಿ ದುಡ್ಡುಕೊಟ್ಟು ಮೂರು ಲುಗಳನ್ನು ಬೆಂಗಳೂರಿಗೆ ತಂದರು.

ಅಲ್ಲಿಗೆ ಐದು ಸಾಮಾನ್ ಬೆಂಗಳೂರಿಗೆ ಬಂದಂತಾಯ್ತು ? ಇದರಲ್ಲಿ ಎರಡು ಶಾಕೀರ್ ಬಳಿ ಇದ್ದರೆ ಉಳಿಕೆ ಮು ಮುಜೀಬ್‌ನ ಬಳಿಯಿತ್ತು. ಡಿಸೆಂಬರ್ 4 ಕ್ಕೆ ದ್ದಂತೆ ಶಾಕೀರ್ ಫೋನ್ ಮಾಡಿ ನಾನು ಹೆಗಡೆನಗರದ ದ್ ಫಾರೂಕ್ ಆಫೀಸಿನಲ್ಲಿ ಕೂತಿದ್ದೇನೆ. ಜೊತೆಗೆ ತಮ್ಮ ಮರ್ದಾನ್ ಕೂಡ ಇದ್ದಾನೆ ಎಂದು ಹೇಳಿದ್ದ. ರ್ಾನ್ ಬಳಿ ಮುಜೀಬ್‌ನ ಮೂರು ಪಿಸ್ತೂಲುಗಳ ಒಂದು ಮೊದಲೇ ಇತ್ತಾದ್ದರಿಂದ ಇನ್ನೆರಡು ಲುಗಳನ್ನು ಫಾರೂಕ್ ಆಫೀಸಿಗೆ ಮುಜೀಬ್ ಕಾಗಿತ್ತು. ಇನ್ನೇನು ಮುಜೀಬ್ ಹೆಗಡೆ ನಗರ ಸಿಗೆ ಬರಬೇಕೆನ್ನುವಷ್ಟರಲ್ಲಿ ಕೆ.ಜಿ.ಹಳ್ಳಿ ಇನ್ಸ್‌ಪೆಕ್ಟರ್ ದಾಸ್ ಮತ್ತು ಬಾಣಸವಾಡಿ ಇನ್ಸ್‌ಪೆಕ್ಟರ್ ರಂಗಪ್ಪರ ಹೆಗಡೆನಗರದ ಫಾರೂಕ್ ಅಡ್ಡೆಗೆ ನುಗ್ಗಿಬಿಟ್ಟಿತು.

ಪೊಲೀಸ್ ರೇಡ್

ಬಹುಶಃ ಪೊಲೀಸರ ಕೈಗೆ ಸಿಗದೆ ತಲೆ ಮರೆಸಿಕೊಂಡಿದ್ದ ರ್‌ನ ಮೊಬೈಲು ಟ್ಯಾಪ್ ಆಗಿತ್ತೇನೊ!

ಶಾಕೀರ್, ಫಾರೂಕ್ ಮತ್ತು ನನ್ನ ತಮ್ಮ ಮರ್ದಾನ್ ವರನ್ನೂ ಪೊಲೀಸರು ಬಂಧಿಸಿದ್ದರು. ನಮ್ಮ ಪ್ಲಾನ್ ಪೊಲೀಸರಿಗೆ ಗೊತ್ತಾಗಿ ಹೋಗಿತ್ತು. ಮರ್ದಾನ್‌ನ ಬೈಲಿನಿಂದಲೇ ನನ್ನ ನಂಬರಿಗೆ ಡಯಲ್ ಮಾಡಿದ ಪೆಕ್ಟರ್ ರಂಗಪ್ಪ, 'ಬಚಖಾನ್, ನಿನ್ನ ಸೆಟ್ಟಿಂಗ್ ಎಲ್ಲಾ ಗೊತ್ತಾಗಿದೆ. ಉಳಿದ ಎಲ್ಲಾ ಪಿಸ್ತೂಲುಗಳ ಸಮೇತ ಅರ್ಧ ಗಂಟೆಯೊಳಗೆ ಮುಜೀಬ್‌ನನ್ನು ಸರೆಂಡರ್ ಸದೆ ಹೋದರೆ ಈ ಮೂವರನ್ನೂ ಎನ್‌ಕೌಂಟರ್ ಬಿಡ್ತೀನಿ...!' ಎಂದು ಆವಾಜು ಹಾಕಿಬಿಟ್ಟರು. ಇವರ ಉಳಿಸಬೇಕು ಅಂದ್ರೆ ಮುಜೀಬ್‌ನನ್ನು ಸರೆಂಡರ್ ಸಲೇಬೇಕಿತ್ತು. ತಕ್ಷಣವೇ ಮುಜೀಬ್‌ಗೆ ಫೋನ್ ಉಳಿದ ಎರಡೂ ಪಿಸ್ತೂಲುಗಳನ್ನು ತಗೊಂಡು ರಸ್ತೆಯ ಬಿಲಾಲ್ ಮಸೀದಿ ಬಳಿ ಹೋಗಿ ಲೀಸರಿಗೆ ಸರೆಂಡರ್ ಆಗು ಎಂದುಬಿಟ್ಟೆ.

ಆದರೆ ಪೊಲೀಸರು ಮರ್ದಾನ್, ಫಾರೂಕ್, ಜೀಬ್ ಮತ್ತು ಜಾಕೀರ್‌ನನ್ನು ಮಾತ್ರ ಅರೆಸ್ಟ್ ಮಾಡಿ ರ್‌ನನ್ನು ಬಿಟ್ಟುಬಿಟ್ಟರು. ಶಾಕೀರ್ ಬಳಿಯಿರುವ ಎರಡು ಪಿಸ್ತೂಲುಗಳು ಏನಾದವು? ಜೊತೆಗೆ ರ್ಾನ್ ಶಿಷ್ಯ ಮೊಹಸೀನ್ ಮತ್ತು ನಕಲಿ ಪ್ರೆಸ್ ರ್ಟರ್ ರಫೀಕ್‌ನನ್ನೂ ಬಂಧಿಸದೇ ಬಿಟ್ಟುಬಿಟ್ಟರು. ಮರ್ಮವೇ ನನಗೆ ಅರ್ಥವಾಗುತ್ತಿಲ್ಲ. ಅಥವಾ ರ್‌ನೇ ಪೊಲೀಸರ ಜೊತೆ ಶಾಮೀಲಾಗಿ ನನ್ನ ತಮ್ಮನನ್ನು ಕೊಟ್ಟನೆ?

ನಾವೆಲ್ಲ ಸೇರಿಯೇ ಬಿಲ್ಡರ್ ಉಮರ್ ಫಾರೂಕ್‌ನನ್ನು ಸಬೇಕಿತ್ತು. ಅದೇ ರೀತಿ ಪ್ಲಾನ್ ಮಾಡಿದ್ದೆವು. ಬಿಲ್ಡರ್ ರ್‌ನನ್ನು ಮುಗಿಸಿ ನಂತರ ಬಂಧೀಖಾನೆ ಇಲಾಖೆಯ ಜಿ ವೀರಭದ್ರಸ್ವಾಮಿಯ ಕಾರಿನ ಮೇಲೆ ಫೈರ್ ತುವ ಸೆಟ್ಟಿಂಗೂ ಇತ್ತು. ಏಕೆಂದರೆ ಜೈಲು ಅಧಿಕಾರಿ ಭದ್ರಸ್ವಾಮಿ ನನಗೆ ತುಂಬಾ ತೊಂದರೆ ಕೊಡುತ್ತಿದ್ದಾನೆ. ನನ್ನು ಹೆದರಿಸಲು ಸುಮ್ಮನೆ ಆತನ ಕಾರಿನ ಮೇಲೆ ತ್ರ ಫೈರ್ ಮಾಡಬೇಕೇ ಹೊರತು ಸಾಯಿಸಬಾರದು ರೇ ಸೂಚಿಸಿದ್ದೆ. ನಮ್ಮ ಹುಡುಗರಿಂದ ಪೊಲೀಸರು ಪಡಿಸಿಕೊಂಡಿದ್ದು ಮೂರು ಪಿಸ್ತೂಲು. ಆದರೆ ಎರಡನ್ನು ತ್ರ ತೋರಿಸಿದ್ದಾರೆ. ಮಿಕ್ಕಿದ್ದು ಏನಾಯ್ತು? ಶಾಕೀರ್ ಯಿದ್ದ ಎರಡು ಪಿಸ್ತೂಲುಗಳ ಕತೆ ಏನಾಯ್ತು? ಏಕೆ ಲೀಸರು ಶಾಕೀರ್‌ನನ್ನು ಅರೆಸ್ಟ್ ಮಾಡಿಲ್ಲ. ಆತನ ಯಿದ್ದ ಪಿಸ್ತೂಲುಗಳನ್ನೂ ಜಪ್ತಿ ಮಾಡಿಲ್ಲ ಗೊತ್ತೆ? ಏಕೆಂದರೆ ಶಾಕಿರ್ ಪಿಸ್ತೂಲುಗಳನ್ನು ತಂದಿದ್ದೇ ತನ್ನ ತನ್ವೀರ್‌ನನ್ನು ಮುಗಿಸೋದಕ್ಕೆ!

ಶಾಕೀರ್ ಜೊತೆಗಿದ್ದ ಹುಡುಗರೇ ನನಗೆ ಮಾಹಿತಿ ಟ್ಟಿದ್ದೇನೆಂದರೆ ಇಷ್ಟರಲ್ಲೇ ಶಾಕೀರ್ ತನ್ವೀರ್‌ನನ್ನು ಗಿಸಲಿದ್ದಾನೆ!'


ಇದು ಹಿಂಡಲಗಾ ಜೈಲಿನ ಸಜಾ ಬಂಧಿ ಯೂಸುಫ್ ಖಾನ ಮಾತಿನ ವರಸೆ. ಸತ್ಯ ನಡುನಡುವೆ ಕುಮಂತಿದೆ. ಬಚಖಾನನ ತಮ್ಮನ ತಂಡದಿಂದ ಜಪ್ತಾದ ರಡು ಪಿಸ್ತೂಲುಗಳ ಪೈಕಿ ಒಂದನ್ನು ರವಿ ಪೂಜಾರಿ ಗಿನ ಅಂಟು ತಲೆಗೆ ಕಟ್ಟಿರಬಹುದೆ? ಅಥವಾ ತಲೆ ಕೊಂಡ ಪಿಸ್ತೂಲು ಸಪ್ಲೈಯರ್ ಸಿಗುವ ತನಕ ಪೊಲೀಸರ ಮಡಿಲಲ್ಲೇ ಮಲಗಬಹುದೆ?

■ ರಾ. ಸೋಮನಾಥ್


ಕಾಶ್ಮೀರದ ಹರಿ ಸಿಂಗ್


ತ್ರಿಪುರಾದ ರಾಜ


ಕೂಚ್ ಬಿಹಾರದ ಇಂದಿರಾ ದೇವಿ


ಪಟಿಯಾಲಾದ ಭುಪಿಂದರ್ ಸಿಂಗ್


ಬಿಕಾನೇರಿನ ಗಂಗಾ ಸಿಂಗ್

ಭಾರತದ ರಾಜರುಗಳ ಭೋಜನ ವೈಭವ

ಈ ಹಿಂದೆ ನಮ್ಮ ದೇಶದ ವಿವಿಧ ಭಾಗಗಳನ್ನು ಆಳಿದ್ದ ಮಹಾರಾಜರ ಮತ್ತು ತುಂಡರಸರ ಐಷಾರಾಮಿ ಜೀವನ ಶೈಲಿಯನ್ನು ಕುರಿತು ಹಲವಾರು ಕತೆಗಳನ್ನು ಕೇಳಿದ್ದೇವೆ, ಲೇಖನಗಳನ್ನು ಓದಿದ್ದೇವೆ. ಆದರೆ ರಾಜಮಹಾರಾಜರು ತಮ್ಮ ಅರಮನೆಗಳ ಪಾಕಶಾಲೆಯಲ್ಲಿ ನಡೆಸುತ್ತಿದ್ದ ಊಟದ ಅತಿರೇಕಗಳನ್ನು ಕುರಿತು ಯಾರೂ ಹೆಚ್ಚಾಗಿ ಬರೆದಂತೆ ಕಾಣುತ್ತಿಲ್ಲ. ಈಗ ಮಾಜಿ ಪತ್ರಕರ್ತೆ ಮತ್ತು ಸದ್ಯ ಕೇಂದ್ರ ಸಂಪುಟದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ರಾಜ್ಯ ಸಚಿವರಾಗಿರುವ ಜಿತೇನ್ ಪ್ರಸಾದ್ ಅವರ ಪತ್ನಿಯೂ ಆದ ನೇಹಾ ಪ್ರಸಾದ್ ಎಂಬುವವರು ಈ ಕೊರತೆಯನ್ನು ನೀಗಿಸುವತ್ತ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಅವರು ಬರೆದಿರುವ 'ಡೈನಿಂಗ್ ವಿತ್ ದ ಮಹಾರಾಜಾಸ್' ಎಂಬ ಇಂಗ್ಲಿಷ್ ಪುಸ್ತಕ


ಹೈದ್ರಾಬಾದಿನ ನಿಜಾಮ

ಇತ್ತೀಚೆಗೆ ಬಿಡುಗಡೆಯಾಗಿದೆ. ಅದರಲ್ಲಿ ಹಲವಾರು ತಮಾಷೆಯ, ಕುತೂಹಲಕಾರಿಯಾದ ವಿಷಯಗಳಿವೆ.

ಉದಾಹರಣೆಗೆ ಪಟಿಯಾಲಾದ ಮಹಾರಾಜನಾಗಿದ್ದ ಭುಪಿಂದರ್ ಸಿಂಗ್ ಎಂಬಾತ ಎಂತಹ ತಿಂಡಿಪೋತನಾಗಿದ್ದನೆಂದರೆ ಬೆಳಗ್ಗಿನ ತಿಂಡಿಯ ಭಾಗವಾಗಿ ಆತ 24 ಮೊಟ್ಟೆಗಳಿಂದ ತಯಾರಿಸಿದ್ದ ಆಮ್ಲೆಟ್ ತಿನ್ನುತ್ತಿದ್ದ. ರಾತ್ರಿಯ ಊಟಕ್ಕೆ ಮುನ್ನ ಆತ 24 ಉಲ್ಲಂಗಿ ಹಕ್ಕಿಗಳ ಮಾಂಸದಿಂದ ತಯಾರಿಸಿದ್ದ ಸೂಪ್ ಕುಡಿಯುತ್ತಿದ್ದನಲ್ಲದೆ 40ರಿಂದ 50 ಲಾವಕ್ಕಿ ಹಕ್ಕಿಗಳ ಮಾಂಸವನ್ನೂ ತಿನ್ನುತ್ತಿದ್ದ. ಇನ್ನು ಊಟಕ್ಕೆಂದು ಆತ ಅದಿನ್ನೇನನ್ನು ತಿನ್ನುತ್ತಿದ್ದ ಎಂದು ಊಹಿಸಿಕೊಳ್ಳುವುದೇ ಕಷ್ಟಸಾಧ್ಯ.


ಮೈಸೂರಿನ ರಾಜ

ಪಟಿಯಾಲಾದ ಈ ಮಹಾರಾಜನ ಬಾಣಸಿಗರ ತಂಡದಲ್ಲಿ ಒಬ್ಬ 140 ವಿವಿಧ ತರಹದ ಪಲಾವ್ ತಯಾರಿಸುವುದರಲ್ಲಿ ಪರಿಣಿತಿ ಹೊಂದಿದ್ದರೆ ಮತ್ತೊಬ್ಬ 30 ಬಗೆಯ ಕೋಳಿ ಸಾರನ್ನು ಮಾಡುತ್ತಿದ್ದ. ಹಾಗೆಯೇ ಮಗದೊಬ್ಬ ಆಲೂಗಡ್ಡೆಯನ್ನು ಉಪಯೋಗಿಸಿ 40 ತರಹದ ಅಡುಗೆಗಳನ್ನು ಮಾಡುತ್ತಿದ್ದ.

ಈ ಭುಪಿಂದರ್ ಸಿಂಗ್ ತನ್ನ ಹಲವಾರು ರಾಣಿಯರು ಮತ್ತು ಇತರೆ ಸಿಬ್ಬಂದಿಯೊಂದಿಗೆ ಇಂಗ್ಲೆಂಡಿಗೆ ಹೋದಾಗಲೆಲ್ಲ ಲಂಡನ್‌ನಲ್ಲಿರುವ ಪ್ರತಿಷ್ಠಿತ ಸವಾಯ್ ಹೋಟೇಲ್‌ನಲ್ಲಿನ ಒಂದು ಇಡೀ ಮಹಡಿಯನ್ನೇ ಬಾಡಿಗೆಗೆ ಪಡೆಯುತ್ತಿದ್ದ. ಆತ ಅಲ್ಲಿ ಅದೆಷ್ಟು ಹಣ ಪೋಲು ಮಾಡುತ್ತಿದ್ದನೆಂದರೆ ಸವಾಯ್ ಹೋಟೇಲಿನ ಮಾಲೀಕರು ಅವನನ್ನು ಸಂತುಷ್ಟಗೊಳಿಸಲು ಅವನಿಗೆ ಇಷ್ಟವಾಗಿದ್ದ ಪಿಂಕ್ ಬಣ್ಣವನ್ನೇ ಒಂದು ಇಡೀ ಮಹಡಿಗೆ ಬಳಿಸಿದ್ದರು.

ಅಂದಹಾಗೆ, ಇಂತಹ ಅತಿರೇಕದ ಜೀವನ ನಡೆಸಿದ್ದ ಭುಪಿಂದರ್ ಸಿಂಗ್ ತನ್ನ 46 ವಯಸ್ಸಿನಲ್ಲೇ ಗೊಟಕ್ ಎಂದ.

ಇವತ್ತಿನ ಕಾಶ್ಮೀರ ಸಮಸ್ಯೆಗೆ ಅಸಲಿ ಕಾರಣ ಪುರುಷನಾದ ಹರಿಸಿಂಗ್ ಎಂಬ ಮತ್ತೋರ್ವ 'ಪ್ಲೇ ಬಾಯ್' ರಾಜನಿಗೆ ನಾಲಿಗೆ ತುರಿಕೆಯಾದಾಗಲೆಲ್ಲ ಆತ ಪ್ಯಾರಿಸ್ ನಗರಕ್ಕೆ ಹಾರಿ ಹೋಗುತ್ತಿದ್ದ. ಅಲ್ಲಿದ್ದ ಫ್ಯೂನಿಯೇರ್ ಎಂಬ ಹೋಟೇಲಿನಲ್ಲಿ ಸಿಂಪಿಯನ್ನೋ ಅಥವಾ ಟೂರ್ ದೆ ಅರ್ಜಾ ಎಂಬ ಮತ್ತೊಂದು ಹೋಟೇಲಿನಲ್ಲಿ ಬಾತುಕೋಳಿ ಮಾಂಸವನ್ನೋ ತಿಂದು ತೃಪ್ತಿಯಾದ ನಂತರ ತನ್ನ ದೇಶಕ್ಕೆ ವಾಪಸಾಗುತ್ತಿದ್ದ. ಅವನಿಗೆ ಇಷ್ಟವಾಗಿದ್ದ ಮತ್ತೊಂದು ತಿನಿಸೆಂದರೆ ಕಪ್ಪೆಯ ಕಾಲುಗಳು!

ಕೂಚ್ ಬಿಹಾರ್ ಎಂಬ ಪುಟ್ಟ ಸಾಮ್ರಾಜ್ಯದ ರಾಣಿ ಇಂದಿರಾ ದೇವಿ ಭೋಜನ ವಿಷಯದಲ್ಲಿ ಇತರೆ ರಾಜರಿಗಿಂತ ಹಿಂದೆ ಬಿದ್ದಿರಲಿಲ್ಲ. ಆಕೆಗೆ ರೋಮ್ ನಗರದಲ್ಲಿದ್ದ ಆಲ್ಫೆಡೋರ್ ಎಂಬ ಇಟಾಲಿಯನ್ ಹೋಟೇಲ್‌ನಲ್ಲಿ ತಯಾರಿಸುತ್ತಿದ್ದ ಪಾಸ್ತ ತುಂಬಾ ಪ್ರಿಯವಾಗಿತ್ತು. ತನಗೆ ಬೇಕಾದಾಗಲೆಲ್ಲ ಅದನ್ನು ತಿನ್ನಬೇಕು ಎಂಬ ಆಸೆಯಿಂದ ಒಮ್ಮೆ ಆಕೆ ತನ್ನ ಅರಮನೆಯಲ್ಲಿದ್ದ ಮುಖ್ಯ ಬಾಣಸಿಗನನ್ನು ಆ ಹೋಟೇಲ್ಲಿಗೆ ಕರೆದುಕೊಂಡು ಹೋಗಿ ಪಾಸ್ತ ತಯಾರಿಸುವುದು ಹೇಗೆ ಎಂದು ತರಬೇತಿ ಕೊಡಿಸಿದ್ದಳು.

ಬಿಕಾನೇರಿನ ಮಹಾರಾಜ ಗಂಗಾ ಸಿಂಗ್ ಎಂಥವನೆಂದರೆ ತಾನು ಸೂಪ್ ಕುಡಿಯುವಾಗ ತನ್ನ ಗಿರಿಜಾ ಮೀಸೆಗೆ ಅದು ತಗುಲದಂತೆ ಎಚ್ಚರ ವಹಿಸಲು 'ಬಾರ್ಟನ್ ಸಿಲ್ವರ್' ಎಂಬ ಲೋಹದಿಂದ ತಯಾರಿಸಿದ್ದ ವಿಶೇಷ 'ಮೀಸೆ ಸ್ಪೂನ್'ಗಳನ್ನು ಖರೀದಿಸಿದ್ದ!!

ಹೈದರಾಬಾದಿನ ನಿಜಾಮನಿಗೆ ಜಿಲೇಬಿಗಳೆಂದರೆ ಅಚ್ಚುಮೆಚ್ಚು. ಆತ ದಿನಕ್ಕೆ ಸಹಸ್ರಾರು ಜಿಲೇಬಿಗಳನ್ನು ತಿನ್ನುತ್ತಿದ್ದ. ಆದರೆ ಆತನ ದೇಹದಲ್ಲಿ ಸಕ್ಕರೆ ಕಾಯಿಲೆ ಕಾಣಿಸಿಕೊಂಡಾಗ ವೈದ್ಯರು ಇನ್ನು ಮುಂದೆ ದಿನಕ್ಕೆ ಮೂರು ಜಿಲೇಬಿಗಳನ್ನು ಮಾತ್ರ ತಿನ್ನತಕ್ಕದ್ದು ಎಂದು ನಿಜಾಮನಿಗೆ ಕಟ್ಟುನಿಟ್ಟಾಗಿ ಹೇಳಿದರು. ಅದನ್ನು ನಿಜಾಮ ನಿಯತ್ತಿನಿಂದ ಪಾಲಿಸಿದ. ಹೇಗೆ ಗೊತ್ತಾ? ತನ್ನ ಅರಮನೆಯ ಪಾಕಶಾಲೆಯಲ್ಲಿ ತಯಾರಿಸುತ್ತಿದ್ದ ಜಿಲೇಬಿಗಳ ಗಾತ್ರವನ್ನು ಮೂರು ಪಟ್ಟು ಹೆಚ್ಚಿಸುವ ಮೂಲಕ!


ಇಟಲಿ ದೇಶದಿಂದ ತರಿಸಲಾಗಿದ್ದ ಅಮೃತಶಿಲೆಗಳಿಂದ ಹೈದರಾಬಾದಿನಲ್ಲಿ ಕಟ್ಟಲಾಗಿರುವ ಫಲಕ್ನುಮಾ ಅರಮನೆಯಲ್ಲಿ ಈ ನಿಜಾಮನ ಭೋಜನಕೂಟಗಳು ಎಷ್ಟು ಅದ್ದೂರಿಯಾಗಿ ನಡೆಯುತ್ತಿದ್ದವೆಂದರೆ ಪ್ರತಿದಿನ 101 ಜನ ಕೂರಬಲ್ಲಂತಹ 108 ಅಡಿ ಉದ್ದದ ಸಾಗವಾನಿ ಮರದಿಂದ ಮಾಡಲಾಗಿದ್ದ ಡೈನಿಂಗ್ ಟೇಬಲ್ ಮೇಲೆ ಊಟದ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿತ್ತು. ಅಂದಹಾಗೆ, 1030ರ ದಶಕದಲ್ಲೇ ಈ ನಿಜಾಮನ ಪಾಕಶಾಲೆಯಲ್ಲಿ ತಯಾರಿಸಲಾಗುತ್ತಿದ್ದ ಮೊಟ್ಟೆಗಳಿಗೆಂದು ಪ್ರತಿವರ್ಷ ಮೀಸಲಿಡಲಾಗುತ್ತಿದ್ದ ಮೊತ್ತವೇ ಬರೋಬ್ಬರಿ 20 ಲಕ್ಷ ರೂಪಾಯಿಗಳು!!!

ಈಶಾನ್ಯ ಭಾಗದ ತ್ರಿಪುರಾ ರಾಜ್ಯದ ಒಂದು ರಾಜಮನೆತನ ಕೂಡ ಎಂತಹ ಅದ್ದೂರಿ ಜೀವನಶೈಲಿಯನ್ನು ಹೊಂದಿತ್ತೆಂದರೆ ಪ್ರತಿ ರಾತ್ರಿಯ ಊಟಕ್ಕೆಂದು ಅರಮನೆಯ ಬಾಣಸಿಗರು ನಾಲ್ಕು ವಿವಿಧ ತರಹದ - ಅಂದರೆ ಬೆಂಗಾಲಿ, ನಾರ್ಥ್ ಇಂಡಿಯನ್, ಯೂರೋಪಿಯನ್ ಮತ್ತು ಸ್ಥಳೀಯ ತ್ರಿಪುರಿ - ಅಡುಗೆಯನ್ನು ಕಡ್ಡಾಯವಾಗಿ ಮಾಡಿರಬೇಕಿತ್ತು. ಅವರ ಪಾಕಶಾಲೆಯಲ್ಲಿದ್ದ ಒಬ್ಬ ಬಾಣಸಿಗ ಮಿಠಾಯಿಗಳನ್ನು ಮಾಡುವುದರಲ್ಲಿ ಎತ್ತಿದ ಕೈ ಆಗಿದ್ದ. ಆದರೆ ಆತನಿಗೆ ಸ್ಫೂರ್ತಿ ನೀಡುತ್ತಿದ್ದದ್ದು ಹೆಂಡ. ಆ ಕಾರಣಕ್ಕೆ ರಾಜಮನೆತನದವರಿಗೆ ಮಿಠಾಯಿಗಳನ್ನು ತಿನ್ನಬೇಕೆನಿಸಿದಾಗ ಆತನಿಗೆ ಹೇಳಿಕಳುಹಿಸುತ್ತಿದ್ದರಲ್ಲದೆ ತಮ್ಮ ಆದೇಶದೊಂದಿಗೆ ಆತನಿಗೆಂದು ಒಂದು ಹೆಂಡದ ಬಾಟಲಿಯನ್ನೂ ರವಾನಿಸುತ್ತಿದ್ದರು.

ಪಾಕಕಲೆಯಲ್ಲಿ ನಮ್ಮ ಒಡೆಯರ್ ವಂಶಸ್ಥರು ಹಿಂದುಳಿದಿರಲಿಲ್ಲ. ಮೈಸೂರಿನ ಅರಮನೆಯ ಪಾಕಶಾಲೆಯಲ್ಲಿ ಪ್ರಾಚೀನ ಪಾಕ ಶಾಸ್ತ್ರವನ್ನು ಅವಲಂಬಿಸಲಾಗುತ್ತಿತ್ತು. ಅದರಂತೆಯೇ ರಾಜಮನೆತನದವರಿಗೆ ತಾಮ್ರ ಅಥವಾ ಹಿತ್ತಾಳೆ ಪಾತ್ರೆಗಳಲ್ಲೇ ಅಡುಗೆಯನ್ನು ತಯಾರಿಸಲಾಗುತ್ತಿತ್ತು. ಇದಕ್ಕೆ ಒಂದು ಕಾರಣ ಇಂತಹ ಲೋಹದ ಪಾತ್ರೆಗಳಲ್ಲಿ ಊಟ ತಯಾರಿಸಿದರೆ ಅದು ಆರೋಗ್ಯಕ್ಕೆ ಒಳ್ಳೆಯದು ಎಂಬುದಾಗಿದ್ದರೆ ಮತ್ತೊಂದು ಕಾರಣ ರಾಜಮನೆತನದವರಿಗೆಂದು ತಯಾರಿಸಲಾಗುತ್ತಿದ್ದ ಅಡುಗೆಯಲ್ಲಿ ಯಾರಾದರೂ ವಿಷ ಬೆರೆಸಿದರೆ ತಾಮ್ರದ ಪಾತ್ರೆಗಳು ಹಸಿರು ಬಣ್ಣಕ್ಕೆ ತಿರುಗುತ್ತವೆ ಎಂಬುದು.

ಕೇವಲ ಏಳು ದಶಕಗಳ ಹಿಂದೆ ಮೈಸೂರು ಅರಮನೆಯಲ್ಲಿ ವಾಸಿಸುತ್ತಿದ್ದ ಮಹಿಳೆಯರಿಗೆಂದು ಪ್ರತ್ಯೇಕ ಪಾಕಶಾಲೆ ಇದ್ದರೆ ಪುರುಷರಿಗೆಂದೇ ಮತ್ತೊಂದು ಪಾಕಶಾಲೆ ಇತ್ತು. ಮಹಿಳೆಯರಿಗೆ ಊಟ ಸಿದ್ಧ ಮಾಡುತ್ತಿದ್ದ ಪಾಕಶಾಲೆಯಲ್ಲಿ ಏಲಕ್ಕಿಗೆ ಒತ್ತು ನೀಡುತ್ತಿದ್ದರೆ (ಮಹಿಳೆಯರಲ್ಲಿ ಫಲವತ್ತತೆ ಹೆಚ್ಚಾಗಲಿ ಎಂಬ ಕಾರಣಕ್ಕೆ) ಪುರುಷರಿಗೆ ಭೋಜನ ಸಿದ್ಧಪಡಿಸುತ್ತಿದ್ದ ಪಾಕಶಾಲೆಯಲ್ಲಿ ಜಾಯಿಕಾಯಿಗೆ ಪ್ರಾಮುಖ್ಯತೆ ಇತ್ತು (ಗಂಡಸರ ಸಂತಾನೋತ್ಪಾದಕ ಶಕ್ತಿ ಹೆಚ್ಚಾಗಲೆಂದು).

ಒಂದು ಕಾಲದಲ್ಲಿ ಮೈಸೂರಿನ ಅರಮನೆಯಲ್ಲಿ ಸಸ್ಯಾಹಾರಿ ಅಡುಗೆಗಳನ್ನು ತಯಾರಿಸಲು ಬರೋಬ್ಬರಿ 150 ಬಾಣಸಿಗರು ಇದ್ದರೆ ಮಾಂಸಾಹಾರಿ ತಿನಿಸುಗಳನ್ನು ಸಿದ್ಧಮಾಡಲು 25 ಬಾಣಸಿಗರು ಇರುತ್ತಿದ್ದರು. ಇವರಲ್ಲದೆ, ಮೂರನೆ ಪ್ರತ್ಯೇಕ ಪಾಕಶಾಲೆಯಲ್ಲಿ 20 ಬ್ರಾಹ್ಮಣ ಬಾಣಸಿಗರೂ ಇದ್ದರು. ಅವರ ಅಡುಗೆಮನೆಯಲ್ಲಿ ಮಟನ್, ಕೋಳಿ ಮತ್ತು ಮೀನು ಮಾಂಸಕ್ಕೆ ಮಾತ್ರವಲ್ಲ 'ತಾಮಸ' ಗುಣಗಳನ್ನು ಹೊಂದಿವೆ ಎನ್ನಲಾದ ಈರುಳ್ಳಿ ಮತ್ತು ಬೆಳ್ಳುಳ್ಳಿಗಳಿಗೂ ಪ್ರವೇಶವಿರಲಿಲ್ಲ. ಈ ಬ್ರಾಹ್ಮಣ ಬಾಣಸಿಗರ ಜವಾಬ್ದಾರಿ 'ಪವಿತ್ರ ಪೂಜೆ' ಮತ್ತು ಹಬ್ಬದ ಸಂದರ್ಭಗಳಲ್ಲಿ ಅಪ್ಪಟ ಸಸ್ಯಾಹಾರಿ ಭೋಜನವನ್ನು ಸಿದ್ಧಪಡಿಸುವುದಾಗಿತ್ತು. ಆಗಿನ ಕಾಲದಲ್ಲಿ ಮೈಸೂರಿನ ಅರಮನೆಯಲ್ಲಿ ಸುಮಾರು


ತನ್ನ ಹಲವು ಹೆಂಡತಿಯರೊಂದಿಗೆ ಭುಪಿಂದರ್ ಸಿಂಗ್


50 ಜನ ವಾಸವಿದ್ದು ಪ್ರತಿ ದಿನ ಅವರೆಲ್ಲರಿಗೆಂದು ಕನಿಷ್ಠ 25 ಬಗೆಯ ಭಕ್ಷ್ಯಗಳನ್ನು ತಯಾರಿಸಲಾಗುತ್ತಿತ್ತು.

ಇಂತಹ ವೈಭವ ಕಂಡಿದ್ದ ಮೈಸೂರು ರಾಜವಂಶದ ಕುಡಿಯಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಈಗ ಹೆಚ್ಚಿನ ದಿನಗಳಲ್ಲಿ ಸಾಮಾನ್ಯವಾಗಿ ತಿನ್ನುವುದು ಏನನ್ನು ಗೊತ್ತಾ? ಸಾಮಾನ್ಯ ಜನರ ದಿನನಿತ್ಯದ ಆಹಾರವಾಗಿರುವ ರಾಗಿ ಮುದ್ದೆಯನ್ನು. ಇದಕ್ಕೆ ಮುಖ್ಯ ಕಾರಣ ಅವರು ತಮ್ಮ ಆರೋಗ್ಯ ಮತ್ತು ದೇಹ ತೂಕದ ಬಗ್ಗೆ ಎಚ್ಚರ ವಹಿಸುತ್ತಿರುವುದು. ಆದರೂ ಆಗೀಗ ಅವರು ತಮಗೆ ಇಷ್ಟವಾದ ಹಲವು ತಿನಿಸುಗಳನ್ನು ಸವಿಯುತ್ತಾರೆ. ಅದರಲ್ಲಿ ಮುಖ್ಯವಾದದ್ದು .... ಬಿಸಿ ಬೇಳೆ ಬಾತ್!

■ ಸಾವಂತ್ರಿ

ರಾಮದಾಸನ ನಕಲಿ ಸ್ಕೀಂ

"ಸ್ವಂತ ಸೂರಿನ ಊರು ಮೈಸೂರು"



ಇದೇನಪ್ಪಾ, ಮೈಸೂರಿಗೆ ಹೊಸ ಹೆಸರು ಅಂಟಿಕೊಂಡಿದೆ ಅಂತಾ ಆಶ್ಚರ್ಯ ಪಡಬೇಡಿ. ಅಂಥಾದ್ದೇನಿಲ್ಲ, ಇದೊಂದು ಐನಾತಿ ರಾಜಕೀಯ ಗಿಮಿಕ್ಕು ಅಷ್ಟೆ. ತನ್ನ ಭ್ರಷ್ಟಾಚಾರ, ಅನೀತಿಗಳಿಂದ ರೋಸಿಹೋಗಿರುವ ಕೃಷ್ಣರಾಜ ಕ್ಷೇತ್ರದ ಮತದಾರರು ಈ ಬಾರಿ ತನಗೆ ಟಾಂಗ್ ನೀಡಲು ಸಜ್ಜಾಗುತ್ತಿದ್ದಾರೆ ಎಂಬುದನ್ನು ಅರಿತ ಸಚಿವ ರಾಮದಾಸ್ ನಾನಾ ಪಂಚರಂಗಿ ಆಟಗಳನ್ನು ಶುರುವಿಟ್ಟುಕೊಂಡಿದ್ದಾನೆ.

ಮುಂದಿನ ಚುನಾವಣೆಯಲ್ಲಿ ತನ್ನ ಸೋಲು ಕಟ್ಟಿಟ್ಟ ಬುತ್ತಿ ಎಂಬುದನ್ನು ಮನಗಂಡಿರುವ ಈ ಆಸಾಮಿ ಮತದಾರರನ್ನು ಸೆಳೆದುಕೊಳ್ಳಲು ಒಂದು ಹೊಸ ನಮೂನೆಯ ಸ್ಕೆಚ್ ಹಾಕಿದ್ದಾನೆ. ತನ್ನ ಕ್ಷೇತ್ರದ ಎಲ್ಲಾ ದೇವಸ್ಥಾನದ ಪೂಜಾರಿಗಳಿಗೆ, ಜಾತಿ ಸಂಘಟನೆಗಳ ಮುಖಂಡರಿಗೆ, ವಿವಿಧ ಉದ್ಯಮ ಸಂಸ್ಥೆಗಳು, ಯುವಕ ಸಂಘಗಳು ಮುಂತಾದವರೆಲ್ಲರಿಗೂ ಒಂದು ಪತ್ರ ಬರೆದಿದ್ದಾನೆ. ಆ ಪತ್ರದ ಪ್ರಕಾರ 'ಸ್ವಂತ ಸೂರಿನ ಊರು ಮೈಸೂರು' ಎಂಬ ಯೋಜನೆಯೊಂದು ತ್ವರಿತಗತಿಯಲ್ಲಿ ಚಾಲನೆ ಪಡೆದುಕೊಂಡಿದೆಯಂತೆ. ಹೀಗಾಗಿ ಅರ್ಜೆಂಟಾಗಿ ಫಲಾನುಭವಿಗಳನ್ನು ಗುರುತಿಸಿ ಅವರ ಹೆಸರಿಗೆ ಸ್ವಂತ ಮನೆ ನೀಡಬೇಕೆಂಬುದು ಸಚಿವನಾಗಿ ರಾಮದಾಸ್‌ರ ಕಾಳಜಿಯಂತೆ. ಈ ಪತ್ರದ ಭಿನ್ನಹವನ್ನು ನೀವೇ ಓದಿ.

"..... ಈ ಮೇಲ್ಕಂಡ ವಿಷಯದ ಬಗ್ಗೆ ತಮ್ಮಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ, ತಮ್ಮ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರು ಅಥವಾ ತಮ್ಮ ಭಕ್ತಾದಿಗಳಲ್ಲಿ ಯಾರಾದರೂ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು ಅವರಿಗೆ ಸ್ವಂತಸೂರಿನ ಅವಶ್ಯಕತೆ ಇರುವ ಬಗ್ಗೆ ಮಾಹಿತಿ ಲಭ್ಯವಿದ್ದಲ್ಲಿ, ಅಂತಹವರ ಪಟ್ಟಿಯನ್ನು ಕಳುಹಿಸಿಕೊಟ್ಟಲ್ಲಿ ಅವರ ಅಪೇಕ್ಷೆಯಂತೆ ಸ್ವಂತ ಮನೆಯನ್ನು ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಮಗೆ ತಿಳಿಸಲು ಬಯಸುತ್ತೇನೆ.

ಗೌರವಪೂರ್ವಕ ಪ್ರಣಾಮದೊಂದಿಗೆ

ತಮ್ಮ ವಿಶ್ವಾಸಿ" ಎಸ್‌ಎ ರಾಮದಾಸ್

ಎಂದು ಸಹಿ ಮಾಡಿದ ಪತ್ರ ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಸಚಿವನ ಅಫಿಷಿಯಲ್ ಲೆಟರ್‌ಹೆಡ್‌ನಲ್ಲಿ ಕೃಷ್ಣರಾಜ ಕ್ಷೇತ್ರದಾದ್ಯಂತ ರವಾನೆಯಾಗಿದೆ.

ಈ ಸುದ್ದಿಯ ಮಸಲತ್ತನ್ನು ಅರಿಯದ ಸೂರು ಸಿಗಬಹುದೆಂಬ ಆಸೆಯಿಂದ ಅರ್ಜಿ ಕೈಯಲ್ಲಿ ಹಿಡಿದು ಕೊಂಡು ರಾಮದಾಸನ ಚೇಲಾಗಳ ಹಿಂದೆ ನೂರಾರು ಜನ ಸುತ್ತಲೂ ಶುರುವಿಟ್ಟುಕೊಂಡಿದ್ದಾರೆ.

ಈ ವಿನೂತನ ಯೋಜನೆಯ ಬಗ್ಗೆ ಖಚಿತ ಮಾಹಿತಿ ಪಡೆಯಲೆಂದು ಸಚಿವರಿಗೆ ಫೋನಾಯಿಸಿದರೆ ಸ್ವಿಚ್ ಆಫ್ ಎಂಬುದಷ್ಟೆ ಉತ್ತರ. ನಂತರ ಅವರ ಆಪ್ತ ಕಾರ್ಯದರ್ಶಿಯ ನಂಬರ್ ಪಡೆದುಕೊಂಡು 9379732233ಗೆ ಫೋನಾಯಿಸಿ ಈ ಯೋಜನೆಯ ಬಗ್ಗೆ ಮಾಹಿತಿ ಕೇಳಿದರೆ 'ಸಾರ್ ಇದು ಕಾರ್ಪೊರೇಷನ್ ಸ್ಕೀಮು, ನೀವು ಕಾರ್ಪೊರೇಷನ್ ಕಮಿಷನರ್‌ನ ಕೇಳಿ' ಅಂತಾರೆ. ನಿಮ್ಮ ಸಚಿವರೇ ಎಲ್ಲಾ ಕಡೆ ಲೆಟರ್ ಕಳಿಸಿದ್ದಾರಲ್ಲಾ ಅಂತಾ ಕೇಳಿದರೆ 'ಬನ್ನಿ ಸಾರ್, ಪರ್ಸನಲ್ ಆಗಿ ಭೇಟಿಯಾಗೋಣ, ಮಾತಾಡೋಣ' ಅಂತಾರೆ.

ಸರಿ, ಕಾರ್ಪೊರೇಷನ್ ಕಮಿಷನರ್ ಕಚೇರಿಗೆ ಫೋನ್ ಮಾಡಿದರೆ ನೀವು ಸೂಪರಿಂಟೆಂಡೆಂಟ್ ಇಂಜಿನಿಯರ್ ಕೃಷ್ಣ ಅವರನ್ನು ಕಾಂಟ್ಯಾಕ್ಟ್ ಮಾಡಿ ಅಂತಾರೆ. ಎಸ್.ಇ ಕೃಷ್ಣ ಅವರನ್ನು ಕಾಂಟ್ಯಾಕ್ಟ್ ಮಾಡಿದರೆ 'ನಮ್ಮಲ್ಲಿ ಅಂಥಾ ಯಾವ ಯೋಜನೆಯೂ ಇಲ್ಲ, ನೀವು ನರ್ಮ್ ಯೋಜನೆಯವರನ್ನು ವಿಚಾರಿಸಿ' ಅಂತಾರೆ. ನರ್ಮ್ ವಿಭಾಗದ ಇಂಜಿನಿಯರ್ ಚಾಮರಾಜೇಗೌಡರನ್ನು ಕೇಳಿದರೆ ಈ ಯೋಜನೆಯ ಹೆಸರನ್ನೇ ಕೇಳಿಲ್ಲ ಅಂತಾರೆ. ಇಷ್ಟೆಲ್ಲಾ ಆದಮೇಲೆ ನಮಗೆ ಮನವರಿಕೆಯಾಗಿದ್ದಿಷ್ಟು. ತನ್ನ ಕ್ಷೇತ್ರದ

ಎಸ್.ಎ. ರಾಮದಾಸ್
ವೈದ್ಯಕೀಯ ಶಿಕ್ಷಣ ಸಚಿವರು
ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ: 406-40
ವಿಧಾನ ಸೌಧ, ಬೆಂಗಳೂರು
ದೂರವಾಣಿ ಸಂ (ಫ್ಯಾಕ್ಸ್) : 080-2225247
2203417
ಇ-ಮೇಲ್: medicaleducationminister@gmail.co

ಪತ್ರ ಸಂಖ್ಯೆ: ವೈಶಿಸ: 3550: 2012-13

ದಿನಾಂಕ: 21-11-2012

ರವರಿಗೆ,

ಪೂಜ್ಯ ಶ್ರೀ ಶ್ರೀ ಶ್ರೀ ಸ್ವಾಮೀಜಿಯವರ ಸನ್ನಿಧಾನಕ್ಕೆ,

ಮೈಸೂರು ನಗರದಲ್ಲಿ ಕಳೆದ ಅನೇಕ ವರ್ಷಗಳಿಂದಲೂ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ಸ್ವಂತ ಸೂರನ್ನು ಒದಗಿಸಲು ವಿವಿಧ ವರ್ಗಗಳ[ಕೆಟಗರಿ] ಮನೆಗಳನ್ನು ನಿರ್ಮಿಸುವ ಯೋಜನೆ ಯೋಜಿಸಲಾಗಿದೆ. ಈಗಾಗಲೇ ಮೈಸೂರು ನಗರದಲ್ಲಿ ಸೂರಿಲ್ಲದವರ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ಪ್ರಥಮ ಹಂತದಲ್ಲಿಯೇ ಸುಮಾರು 34ಸಾವಿರಕ್ಕೂ ಹೆಚ್ಚು ಕುಟುಂಬದವರನ್ನು ಈ ಯೋಜನೆಯಲ್ಲಿ ಗುರುತಿಸಲಾಗಿರುತ್ತದೆ.

ಈಗಾಗಲೇ ಮೈಸೂರಿನಲ್ಲಿ ನಡೆದ 'ಸರಕಾರಿ ಸವಲತ್ತುಗಳ ಸಂತೆ' ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಂದ 'ಸ್ವಂತ ಸೂರಿನ ಊರು ಮೈಸೂರು' ಎಂದು ಘೋಷಿಸಿದ್ದು, ಈ ಯೋಜನೆಗೆ ಸರ್ಕಾರದ ಹಂತದಲ್ಲಿ ಶೀಘ್ರದಲ್ಲಿ ಇದಕ್ಕೆ ತ್ವರಿತಗತಿಯಲ್ಲಿ ಚಾಲನೆ ದೊರಕಿರುವುದಕ್ಕೆ ತುಂಬು ಹೃದಯದಿಂದ ಹರ್ಷಿಸುತ್ತೇನೆ.

ಈ ಮೇಲ್ಕಂಡ ವಿಷಯದ ಬಗ್ಗೆ ತಮ್ಮಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ, ತಮ್ಮ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರು ಅಥವಾ ತಮ್ಮ ಭಕ್ತಾದಿಗಳಲ್ಲಿ ಯಾರಾದರೂ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು ಅವರಿಗೆ ಸ್ವಂತ ಸೂರಿನ ಅವಶ್ಯಕತೆ ಇರುವ ಬಗ್ಗೆ ಮಾಹಿತಿ ಲಭ್ಯವಿದ್ದಲ್ಲಿ, ಅಂತಹವರ ಪಟ್ಟಿಯನ್ನು ಕಳುಹಿಸಿಕೊಟ್ಟಲ್ಲಿ ಅವರ ಅಪೇಕ್ಷೆಯಂತೆ ಸ್ವಂತ ಮನೆಯನ್ನು ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಮಗೆ ತಿಳಿಸಲು ಬಯಸುತ್ತೇನೆ.

ತಮ್ಮ ವಿಶ್ವಾಸಿ,

ಗೌರವಪೂರ್ವಕ ಪ್ರಣಾಮದೊಂದಿಗೆ,

(ಎಸ್. ಎ. ರಾಮದಾಸ್)

ಮತದಾರರಿಗೆ ಮಕಮಲ್ ಟೋಪಿಯಿಟ್ಟು ಓಟು ಕೀಳಲು ಸರ್ಕಾರಿ ಲೆಟರ್‌ಹೆಡ್‌ಅನ್ನು ದುರುಪಯೋಗಪಡಿಸಿಕೊಂಡು ಈ ಯೋಜನೆಯ ಬಗ್ಗೆ ಅಗ್ಗದ ಪ್ರಚಾರಕ್ಕೆ ಸಚಿವ ರಾಮದಾಸ್ ಇಳಿದಿದ್ದಾನೆ.

ಇಂಥಾ ನಯವಂಚಕರಿಗೆ ಪಾಠ ಕಲಿಸಲು ಮೈಸೂರಿನ ಮತದಾರರು ಜಾಗೃತರಾಗಲು ಇನ್ನೂ ಕಾಲಮಿಂಚಿಲ್ಲ.


ರಾಮದಾಸ್ ಎಲೆಕ್ಷನ್ ಗೂಂಡಾಗಿರಿ ಶುರು


ಚುನಾವಣೆಯೆಂದರೆ ರಾಜಕೀಯ ಪಕ್ಷಗಳ ಗದ್ದಲ ಗಲಾಟೆ ಹೊಡೆದಾಟ ಹಿಂಸಾಚಾರ ಎಲ್ಲಾ ಮಾಮೂಲಿ ವಿಷಯ. ಆದರೆ ಮೈಸೂರಿನಲ್ಲಿ ಚುನಾವಣಾ ಹಿಂಸಾಚಾರದ ತಾಲೀಮು ಈಗಾಗಲೇ ಪ್ರಾರಂಭವಾಗಿಬಿಟ್ಟಿದೆ. ಈ ಹಿಂಸಾತ್ಮಕ ತಾಲೀಮಿಗೆ ಸಚಿವ ರಾಮದಾಸ್‌ನ ಕೆಲವು ಹಿಂಬಾಲಕರು ಶ್ರೀಕಾರ ಹಾಡಿದ್ದಾರೆ.


ಡಿ. 18 ರಂದು ಮಧ್ಯಾಹ್ನ 1.30 ರ ಸುಮಾರಿಗೆ ರಾಮದಾಸ್‌ನ ಶಿಷ್ಯ ಜೋಗಿ ಮಂಜನ ಪಡೆ ರಾಮದಾಸ್‌ನ ರಾಜಕೀಯ ಎದುರಾಳಿಗಳ ಮನೆ ಮೇಲೆ ದಾಳಿ ನಡೆಸಿ ಭಯಭೀತ ವಾತಾವರಣ ಸೃಷ್ಟಿಸಿದ್ದಾರೆ. ಹೀಗೆ ಜೋಗಿ ಮಂಜ ಎಂಬ ಪುಂಡರ ಗುಂಪಿಗೆ ಟಾರ್ಗೆಟ್ ಆಗಿದ್ದು ಬೇರೆ ಯಾರೋ ಅಲ್ಲ.

ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಕ್ಯಾಂಡಿಡೇಟ್ ಹಾಗೂ ಮಾಜಿ ಎಂಎಲ್‌ಎ ಎಂ.ಕೆ. ಸೋಮಶೇಖರ್.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಸೋಮಶೇಖರ್ ಅವರ ಮನೆಗೆ ಅಂದು ಮಧ್ಯಾಹ್ನ ಏಕಾಏಕಿ ಜೋಗಿ ಮಂಜನ ಗುಂಪು ದಾಂಗುಡಿಯಿಟ್ಟಾಗ ಸೋಮಶೇಖರ್ ಮನೆಯಲ್ಲಿರಲಿಲ್ಲ. ಗಾಜಿನ ಬಾಟಲುಗಳನ್ನು ಒಡೆದುಹಾಕಿ ಭಯಭೀತ ವಾತಾವರಣ ಸೃಷ್ಟಿಸುತ್ತಿದ್ದವರಿಗೆ ಕೈಗೆ ಸಿಕ್ಕವನೇ ನವೀನ್ ಎಂಬ ಬಡಪಾಯಿ ಕಾರ್ಯಕರ್ತ. ನವೀನ್‌ನ ಮೇಲೆ ಈ ಜೋಗಿಯ ಗುಂಪು ಹಲ್ಲೆ ಮಾಡಿದೆ. ಈ ಗುಂಪಿನಲ್ಲಿದ್ದ ಯದುನಂದನ್ ಎಂಬುವವನು ನವೀನ್‌ನ ಮುಖಕ್ಕೆ ಬ್ಲೇಡ್ ಹಾಕಲು ಬೀಸಿದಾಗ ನವೀನ್ ತನ್ನ ಕೈಯನ್ನು ಅಡ್ಡಕೊಟ್ಟಿದ್ದಾನೆ. ಆಗ ಆತನ ಬೆರಳುಗಳಿಗೆ ತೀವ್ರ ರಕ್ತಗಾಯವಾಗಿದೆ. ಅಷ್ಟರಲ್ಲಿ ಈ ಗಲಾಟೆ ಕೇಳಿ ಸೋಮಶೇಖರ್ ಅವರ ಸೋದರ ಎಂ.ಕೆ.ಗುರುರಾಜ್ ಹಾಗೂ ಇತರರು ಆ ಜಾಗಕ್ಕೆ ಧಾವಿಸಿ ನವೀನ್‌ನನ್ನು ರಕ್ಷಿಸಿದ್ದಾರೆ. ಬಂದಿದ್ದ ಆಗಂತುಕರು ಜನರ ಗುಂಪು ಹೆಚ್ಚುತ್ತಿದ್ದಂತೆ ಅಲ್ಲಿಂದ ಕಾಲ್ಕಿತ್ತಿದ್ದಾರೆ.



ಜೋಗಿ ಮಂಜ


ಶರತ್‌ಕುಮಾರ್


ಯಧುನಂದನ



ಶಿವಕುಮಾರ್


ವಿಶ್ವ


ಎಂ.ಕೆ.ಸೋಮಶೇಖರ್

ಸೋಮಶೇಖರ್‌ಗೆ ಈ ವಿಷಯ ತಿಳಿದಕೂಡಲೇ ಪೊಲೀಸರಿಗೆ ಫೋನ್ ಮಾಡಿ ವಿಷಯ ಮುಟ್ಟಿಸಿ ಗಸ್ತು ವಾಹನ ಕಳಿಸಿಕೊಡುವಂತೆ ಕೋರಿದ್ದಾರೆ. ಅದರಂತೆ ಸ್ವಲ್ಪ ಸಮಯದ ನಂತರ ಬಂದ ಗರುಡವಾಹನ ಗಾಯಾಳು ನವೀನ್‌ನನ್ನು ಕರೆದುಕೊಂಡು ಪೊಲೀಸ್ ಠಾಣೆಗೆ ಹೋಗಿದ್ದಾರೆ. ಆದರೆ ಪೊಲೀಸ್ ಠಾಣೆಯಲ್ಲಿ ಬೇರೆಯದೇ ಒಂದು ಸೀನ್ ಇತ್ತು, ಏನೆಂದರೆ ರಾಮದಾಸ್‌ನ ಶಿಷ್ಯ ಸ್ವತಃ ಜೋಗಿ ಮಂಜನೇ ತನ್ನ ಮೇಲೆ ಹಲ್ಲೆ ಮಾಡಿರುವುದಾಗಿ ಕಂಪ್ಲೈಂಟ್ ಬರೆಯುತ್ತಾ ಕೂತಿದ್ದ. ಅಷ್ಟರಲ್ಲಿ ನಿಜವಾದ ಗಾಯಾಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಜನರು ಗುಂಪುಗೂಡಿದ್ದರಿಂದ ಪೊಲೀಸರು ನವೀನ್‌ನ ಕಂಪ್ಲೈಂಟ್ ತೆಗೆದುಕೊಂಡು ಜೋಗಿ ಮಂಜ ಮತ್ತು ಪಟಾಲಂಅನ್ನು ಬಂಧಿಸಲೇಬೇಕಾಯ್ತು.

ಮಾಜಿ ಶಾಸಕರ ಹಾಗೂ ಜನರ ಒತ್ತಡಕ್ಕೆ ಮಣಿದು ಪೊಲೀಸರು ಜೋಗಿ ಮಂಜ ಮತ್ತಿತರ ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿದರೂ ಕೇಸು ರಿಜಿಸ್ಟರ್ ಮಾಡಿ ಎಫ್‌ಐಆರ್ ಹಾಕಲು ನಿರಾಕರಿಸಿ ಇಲ್ಲದ ಸಬೂಬು ಹೇಳತೊಡಗಿದರು. ಅಷ್ಟರಲ್ಲಿ ಯಾವಯಾವ ಫೋನ್‌ಗಳಿಂದ ಯಾರ್‍ಯಾರಿಗೆ ಶಿಫಾರಸ್ಸು ಕರೆಗಳು ಬಂದಿದ್ದವೋ ಏನೋ ದೇವರೇ ಬಲ್ಲ. ಪೊಲೀಸರು ಆರೋಪಿತರ ವಿರುದ್ಧ ಎಫ್‌ಐಆರ್ ದಾಖಲಿಸಿ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಸ್ಟೇಷನ್‌ನ ಮುಂದೆ ಮಾಜಿ ಶಾಸಕ ಸೋಮಶೇಖರ್ ನೇತೃತ್ವದಲ್ಲಿ ಸುಮಾರು 500ಕ್ಕೂ ಹೆಚ್ಚು ಜನರು ಧರಣಿ ನಡೆಸಲು ಪ್ರಾರಂಭಿಸಿದರು. ವಿಷಯ ಮಾಧ್ಯಮಗಳಲ್ಲಿ ಪ್ರಚಾರ ಪಡೆಯುತ್ತಿದ್ದಂತೆ ಮೇಲಧಿಕಾರಿಗಳೇ ನೇರವಾಗಿ ರಂಗಕ್ಕಿಳಿಯಬೇಕಾಯಿತು.


ಹಲ್ಲೆಗೊಳಗಾದ ನವೀನ್

ಎಫ್‌ಐಆರ್ ದಾಖಲಿಸಿಕೊಂಡು ಐಪಿಸಿ ಸೆಕ್ಷನ್ 143, 147, 448, 323, 324, 504, 307ನ್ನು ನಮೂದಿಸಿ ಆರೋಪಿತರಾದ ಜೋಗಿ ಮಂಜ, ಯದುನಂದನ್, ರಾಜ, ಶಿವಕುಮಾರ್ ಎಂಬ ನಾಲ್ಕು ಜನರನ್ನು ನ್ಯಾಯಾಂಗ ಬಂಧನಕ್ಕೆ ಕಳಿಸಲಾಯ್ತು. ಈ ಕೇಸಿಗೆ ಸಂಬಂಧಿಸಿದ ಇತರ ಐದಾರು ಮಂದಿ ಪೋಕರಿಗಳು ತಪ್ಪಿಸಿಕೊಂಡಿದ್ದಾರೆ.

ರಾಜಕೀಯ ವೈಷಮ್ಯದ ಹಿಂಸಾಚಾರ ಯಾರೇ ನಡೆಸಲಿ, ಅದನ್ನು ತಹಬಂದಿಗೆ ತರುವುದು ಪೊಲೀಸರ ಆದ್ಯ ಕರ್ತವ್ಯ. ಅದರಲ್ಲೂ ಚುನಾವಣೆಗಳು ಹತ್ತಿರವಾಗುತ್ತಿರುವುದರಿಂದ ಈ ಬಗ್ಗೆ ಮತ್ತಷ್ಟು ಕಟ್ಟುನಿಟ್ಟಿನ ಕ್ರಮ ಜರುಗಿಸದೇ ಹೋದರೆ ಪರಿಸ್ಥಿತಿ ಮುಂದೆ ಕೈಮೀರಿ ಹೋಗುವ ಅಪಾಯವಿದ್ದೇ ಇದೆ. ಆದರೆ ಮೈಸೂರು ಪೊಲೀಸರ ನಡವಳಿಕೆ ರಾಜಕೀಯ ಹಿಂಸಾಚಾರಿಗಳಿಗೆ ಕುಮ್ಮಕ್ಕು ನೀಡುವಂತಿದೆ. ಹೇಗೆಂದರೆ ಮರುದಿನ ಈ ಆರೋಪಿತರಿಗೆ ನ್ಯಾಯಾಲಯದಲ್ಲಿ ಜಾಮೀನು ಸಿಗುವಂತಾಗಲು ಪೊಲೀಸರೇ ಕಾರಣ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ತಾವು ರಾಜಕೀಯ ಒತ್ತಡಕ್ಕೆ ಮಣಿದು ಸೆಕ್ಷನ್ 307ಅನ್ನು ಸೇರಿಸಿದ್ದೇವೆಂದೂ ವಾಸ್ತವದಲ್ಲಿ ಆ ಸೆಕ್ಷನ್ ಅನ್ವಯವಾಗುವುದಿಲ್ಲವೆಂದೂ ಪೊಲೀಸರೇ ಖುದ್ದಾಗಿ ನ್ಯಾಯಾಲಯಕ್ಕೆ ಲಿಖಿತ ಹೇಳಿಕೆ ಸಲ್ಲಿಸಿದ್ದಾರಂತೆ. ಆಡಳಿತಾರೂಢ ಬಿಜೆಪಿ ಕಾರ್ಯಕರ್ತರನ್ನು ರಕ್ಷಿಸುವುದರಲ್ಲಿ ಪೊಲೀಸರ ನಿಷ್ಠೆಯನ್ನು ಯಾರಾದರೂ ಮೆಚ್ಚಲೇಬೇಕು. ಹೀಗಾದರೆ ಜನಸಾಮಾನ್ಯರು ರಕ್ಷಣೆ ಕೋರಿ ಯಾರಿಗೆ ಮೊರೆಹೋಗಬೇಕು?

■ ದೊಡ್ಡಿಪಾಳ್ಯ ನರಸಿಂಹಮೂರ್ತಿ

ಆಪರೇಷನ್ ಜೋಗಿ ಮಂಜ

ಈತನ ಹೆಸರಿಗೆ ಜೋಗಿ ಎಂಬ ಪದ ಅಂಟಿಕೊಂಡಿದ್ದಕ್ಕೂ ಜೋಗಿ ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲ. ಜೋಗಯ್ಯನೋರು ಧರಿಸುವಂತೆ ಕಿವಿಗಳಿಗೆ ಓಲೆ ಹಾಕುತ್ತಿದ್ದರಿಂದ ಈತನಿಗೆ ಈ ಅಡ್ಡ ಹೆಸರು ಬಂದಿದೆಯಂತೆ. ಅದು ಹಾಗಿರಲಿ.


ಮೂಲತಃ ಈ ಜೋಗಿ ಮಂಜ ರಾಮದಾಸ್‌ನಂತೆಯೇ ಕಾಂಗ್ರೆಸ್ ಕಾರ್ಯಕರ್ತನಾಗಿದ್ದವನು. ಅಲ್ಲಿ ಇಲ್ಲಿ ಸಣ್ಣಪುಟ್ಟ ಬಡ್ಡಿ ವ್ಯವಹಾರ ನಡೆಸುವುದು ಈತನ ಕಾಯಕ. ಇಲ್ಲಿಗೆ 5-6 ವರ್ಷಗಳ ಹಿಂದೆ ಇದೇ ಸೋಮಶೇಖರ್ ಹಿಂದೆ ಸುತ್ತುತ್ತಿದ್ದವನು. ಮೇಲಾಗಿ ಇಬ್ಬರೂ ಕುರುಬ ಜನಾಂಗಕ್ಕೆ ಸೇರಿದವರೇ. ನಗರಪಾಲಿಕೆ ಚುನಾವಣೆಯಲ್ಲಿ ತನಗೆ ಟಿಕೆಟ್ ಕೊಡಲಿಲ್ಲವೆಂದು ಮುನಿಸಿಕೊಂಡ ಜೋಗಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದ. ಅಷ್ಟರಲ್ಲಿ ವಿಧಾನಸಭಾ ಚುನಾವಣೆ ಬಂತು ನೋಡಿ. ತನ್ನ ಎದುರಾಳಿ ಸೋಮಶೇಖರ್‌ರ ವಿರುದ್ಧ ಸೆಣೆಸಲು ಕುರುಬ ಜನಾಂಗದ ಫಾಲೋಯರ್ಸ್‌ಗಾಗಿ ರಾಮದಾಸ್ ಹುಡುಕುತ್ತಿದ್ದಾಗ ಕಣ್ಣಿಗೆ ಬಿದ್ದವನೇ ಈ ಜೋಗಿ ಮಂಜ. ಅಂದಿನಿಂದ ಜೋಗಿ ಮಂಜನ ಕೈಗೆ ಕಮಲದ ಬಾವುಟ ಬಂದುಬಿಟ್ಟಿತು.

ಈತ ಮೊದಲಿನಿಂದಲೂ ನಾನಾ ಪೋಕರಿ ಕೃತ್ಯಗಳಲ್ಲಿ ಭಾಗಿಯಾಗಿದ್ದವನೇ. ಇಲ್ಲಿಗೆ 3-4 ವರ್ಷಗಳ ಹಿಂದೆ ಟಿಬೆಟಿಯನ್ ಧರ್ಮಪ್ರಚಾರಕರ ಸಭೆಯ ಮೇಲೆ ಈತ ದಂಡೆತ್ತಿ ಹೋಗಿ ಅಹಿಂಸಾವಾದಿಗಳಾದ ಅವರ ತಲೆ ಬುರುಡೆಗಳನ್ನು ಓಪನ್ ಮಾಡಿದ್ದ. ಇದು ಇಂಟರ್‌ನ್ಯಾಷನಲ್ ಲೆವೆಲ್‌ನಲ್ಲಿ ಸುದ್ದಿಯಾಗಿ ನಾಡಿನ ಮಾನ ಹರಾಜಾಗಿತ್ತು. ಹೇಗೂ ಪೊಲಿಟಿಕಲ್ ಇನ್‌ಫ್ಲುಯೆನ್ಸ್ ಇದ್ದುದರಿಂದ ಆರಾಮಾಗಿ ಓಡಾಡಿಕೊಂಡಿದ್ದಾನೆ.

ವಾಸ್ತವದಲ್ಲಿ ಸೋಮಶೇಖರ್ ಮನೆಯ ಮೇಲೆ ಈ ಅನಿರೀಕ್ಷಿತ ದಾಳಿಯ ಹಿಂದೆ ಈತನ ಗುರು ಸಚಿವ ರಾಮದಾಸ್ ಇದ್ದಾನೆಂಬುದು ಸೋಮಶೇಖರ್ ಆರೋಪ. ಯಾಕೆಂದರೆ ಹಗರಣಗಳಲ್ಲಿ ಹೂತು ಹೋಗಿ ಮುಳುಗುವ ಸ್ಥಿತಿಯಲ್ಲಿರುವ ರಾಮದಾಸ್‌ಗೆ ಪ್ರಬಲ ಪೈಪೋಟಿ ನೀಡಬಲ್ಲ ಅಭ್ಯರ್ಥಿಯೆಂದರೆ ಇದೇ ಸೋಮಶೇಖರ್ ಮಾತ್ರ. ಸಾಧು ಸ್ವಭಾವದ ಅವರ ಮನೆ ಮೇಲೆ ದಾಳಿ ಮಾಡಿ ಅವರ ಕ್ರಿಯಾಶೀಲತೆಯನ್ನು ಮಟ್ಟಹಾಕಬಹುದೆಂಬುದು ಈ ದಾಳಿಯ ಹಿಂದಿನ ಲೆಕ್ಕಾಚಾರ. ಮೈಸೂರಿನ ಬಿಜೆಪಿ ಕೂಟ ಎಂಥಾ ಹತಾಶ ಪರಿಸ್ಥಿತಿಗೆ ಇಳಿದಿದೆಯೆಂಬುದಕ್ಕೆ ಈ ಘಟನೆಯೇ ಸಾಕ್ಷಿ.

ಮಂಡ್ಯ: ಸ್ಲಂ ಜನರ ಎತ್ತಂಗಡಿಗೆ ಕಾಂಗ್ರೆಸ್ ಪಿತೂರಿ


2003ರಲ್ಲಿ ಮಂಡ್ಯದ ಶಾಸಕ ಎಂ.ಎಸ್.ಆತ್ಮಾನಂದರ ...ಲಿಗೆ ಕಾರಣವಾಗಿದ್ದ ಸ್ಲಂ ಹೋರಾಟ ಈ ಸಾರಿ ...ನಸಭಾ ಚುನಾವಣೆಗೆ ಮುನ್ನ ...ಮ್ಮೆ ನಡೆಯುವ ಸಾಧ್ಯತೆ ಇದೆ. ... ಸಾರಿ ಇದೇ ಕಾಳಿಕಾಂಬ ಸ್ಲಂನ ...ಕುಟುಂಬಗಳನ್ನು ಬಲವಂತವಾಗಿ ... ಸಮಾಜದ ಮನೆಗಳಿಗೆ ನುಗ್ಗಿಸಿದ್ದರೆ, ...ಸಾರಿ ತಮಿಳು ಕಾಲೋನಿಗೆ ನುಗ್ಗಿಸುವ ...ತ್ನವನ್ನು ಆತ್ಮಾನಂದ ಮಾಡುತ್ತಿದ್ದಾರೆ.



...ನಗರದ ಹೃದಯಭಾಗದಲ್ಲಿರುವ ...ಕಾಂಭ ದೇವಾಲಯದ ಹಿಂಭಾಗದಲ್ಲಿ ...ರು 50ಕ್ಕೂ ಹೆಚ್ಚು ಕುಟುಂಬಗಳು ...ಸುವ ಪ್ರದೇಶವೇ ಕಾಳಿಕಾಂಭ ಸ್ಲಂ. ... ಬೆಲೆಯಿರುವ ಈ ಜಾಗದ ಮೇಲೆ ... ಕಾಳಿಕಾಂಭ ದೇವಾಲಯ ಸಮಿತಿಯ ಅಧ್ಯಕ್ಷ ... ರಾಮಲಿಂಗೇಗೌಡ, ಮಾಜಿ ಸಚಿವ ಆತ್ಮಾನಂದ ...ವಂತೆ ಹಲವರು ಕಾಂಗ್ರೆಸ್‌ನವರು ತಮ್ಮ ದರ್ಪ, ...ಳಿಕೆಯಿಂದ ಕಾಳಿಕಾಂಭ ಜನರನ್ನು ಅಲ್ಲಿಂದ ...ಬ್ಬಿಸಲು ಸಂಚು ರೂಪಿಸಿದ್ದರು. ತಮ್ಮ ಬಲಗೈ ... ರೌಡಿ ಕಿಟ್ಟಿಯನ್ನು ಮುಂದಿಟ್ಟುಕೊಂಡು ಸ್ಲಂಜನರನ್ನು ...ಹಾಕಲು ಯತ್ನಿಸಿದ ಎಂ.ಕೆ ರಾಮಲಿಂಗೇಗೌಡನ ... ಪಡೆಯ ವಿರುದ್ಧ ಸ್ಲಂಜನರು ಒಂದಾಗಿ ...ಟ್ಟಿಸಿದ್ದರು.

ಅಗತ್ಯವಿರುವ ದಾಖಲೆಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಮತ್ತೊಂದು ಆಘಾತಕಾರಿ ವಿಷಯ ತಿಳಿದುಬಂತು. ಕಾಳಿಕಾಂಭ ಸ್ಲಂ ಇದ್ದುದ್ದು ಸರ್ವೆ ನಂ.843ಮತ್ತು 844ರಲ್ಲಿ. ಆದರೆ ಸ್ಲಂ ಜಾಗ ಡಿಕ್ಲೇರ್ ಆಗಿರುವುದು ಸರ್ವೆ ನಂ 845ರಲ್ಲಿ. ಚೆಕ್ಕುಬಂದಿ ಸರಿಯಾಗಿಯೇ ಇದ್ದರೂ ಸರ್ವೆ ನಂ 845 ರ ಪ್ರಕಾರ ಸ್ಲಂ ಇರಬೇಕಾದುದ್ದು ಈ ಜಾಗದಲ್ಲಿ. ಆದರೆ ಕಾಳಿಕಾಂಭ ಸೇವಾ ಸಮಿತಿಯವರು ಈ ಜಾಗದಲ್ಲಿ ಬೃಹತ್ತಾದ ಕಲ್ಯಾಣ ಮಂಟಪ ಕಟ್ಟಿದ್ದರು. ಸ್ಲಂ ಇರಬೇಕಾದ ಜಾಗದಲ್ಲಿ ತಮಗೆ ಮಂಜೂರಾಗದ ಜಾಗದಲ್ಲಿಯೇ ಕಲ್ಯಾಣ ಮಂಟಪ ಕಟ್ಟುತ್ತಾರೆಂದರೆ ಇವರ ತಾಕತ್ತು ಎಂತಹದ್ದೆಂದು ನೀವೆ ಯೋಚಿಸಿರಿ.

ಕಾಳಿಕಾಂಭ ಸೇವಾ ಸಮಿತಿ ಹೆಸರಿನಲ್ಲಿ ಟ್ರಸ್ಟ್ ಮಾಡಿಕೊಂಡಿದ್ದ ಎಂ.ಕೆ ರಾಮಲಿಂಗೇಗೌಡ ಸತತವಾಗಿ ನಗರಸಭೆಯಲ್ಲಿ 25ವರ್ಷ ಆಡಳಿತ ನಡೆಸಿದವನು. ಈತನ ಅಣ್ಣನ ಮಗ ಎಂ.ಎಸ್ ಆತ್ಮಾನಂದ ಸಚಿವರಾಗಿದ್ದವರು. 2002ರಲ್ಲಿ ಕಾಂಗ್ರೆಸ್‌ನ ಎಸ್.ಎಂ ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಶಾಸಕರಾಗಿದ್ದ ಆತ್ಮಾನಂದ ದವರಿ ಕಾಲೋನಿಯಲ್ಲಿ 19 ಹಾಗೂ ತಮಿಳು ಕಾಲೋನಿಯಲ್ಲಿ 22 ಕುಟುಂಬಗಳಿಗೆ ಮನೆಗಳನ್ನು ನೀಡುವಂತೆ ಸ್ಲಂ ಬೋರ್ಡ್ ಅಧಿಕಾರಿಗಳನ್ನು ಮುಂದೆ ಬಲವಂತವಾಗಿ 2003ರಲ್ಲಿ ನುಗ್ಗಿಸಲಾಯಿತು. ಎದುರು ಮಾತನಾಡುವವರಿಗೆ ಎಂ.ಕೆ ರಾಮಲಿಂಗೇಗೌಡನ ಗೂಂಡಾಪಡೆ ಹಲ್ಲೆ ನಡೆಸಿತು. ಇಷ್ಟಾದರೂ 40ಕ್ಕೂ ಹೆಚ್ಚು ಕುಟುಂಬಗಳು ಅಲ್ಲಿಂದ ಕಾಲ್ತೆಗೆಯಲಿಲ್ಲ. ಹಾಗೆಯೇ ಇನ್ನುಳಿದ 22 ಕುಟುಂಬಗಳಿಗೆ ತಮಿಳು ಕಾಲೋನಿಯಲ್ಲಿ ಮನೆ ನೀಡಿ ಎಂದು ತೀರ್ಮಾನಿಸಿದ ಆತ್ಮಾನಂದನ ಆದೇಶವನ್ನು ಪಾಲಿಸಲು ಸ್ಲಂ ಬೋರ್ಡ್ ಅಧಿಕಾರಿಗಳು ಅಂದೂ ಕೂಡ ಮುಂದಾಗಿದ್ದರು. ಈಗಲೂ ಸಹ ಮುಂದಾಗಿದ್ದಾರೆ. 2008ರಲ್ಲಿ ತಮಿಳು ಕಾಲೋನಿಗೆ ಬೆಂಕಿ ಬಿದ್ದು 400ಕ್ಕೂ ಹೆಚ್ಚು ಕುಟುಂಬಗಳು ಇನ್ನು ಕೂಡ ಮನೆ ನಿರ್ಮಾಣವಾಗದೇ ಬೀದಿಯಲ್ಲಿ ಬಿದ್ದಿವೆ.



ಇಂತಹ ಜಾಗದಲ್ಲಿ ಹಿಂದೆಯೇ ಅವರಿಗಾಗಿಯೇ ನಿರ್ಮಿಸಿದ್ದ 146 ಮನೆಗಳಲ್ಲಿ 22 ಮನೆಗಳನ್ನು ಕಾಳಿಕಾಂಭ ಸ್ಲಂ ಜನರಿಗೆ ಅಲಾಟ್ ಮಾಡಿದ್ದೇವೆಂದರೆ ಯಾವ ರೀತಿ ಇದೆ ನೋಡಿ ಆತ್ಮಾನಂದನ ಪವರು. ಇದನ್ನು ಪಾಲಿಸಲು ಮುಂದಾದ ಸ್ಲಂ ಬೋರ್ಡ್ ಅಧಿಕಾರಿಗಳ ನಿರ್ದಯತೆ.

ಇಷ್ಟೆಲ್ಲಾ ನಡೆದರೂ ಕೂಡ ಎಲ್ಲವನ್ನು ಎದುರಿಸಿ ಕಳೆದ ಹಲವು ವರ್ಷಗಳಿಂದ ಕಾಳಿಕಾಂಭ ಸೇವಾ ಸಮಿತಿಯ ವಿರುದ್ಧ ನಿಂತ ಹೈಕೋರ್ಟ್‌ನಲ್ಲಿ ಬಡಿದಾಡಿದ ಕಾಳಿಕಾಂಭ ಸ್ಲಂ ಜನರ ಪರವಾಗಿ ಈಗ ತೀರ್ಪು ಬಂದಿದೆ. ಮಂಡ್ಯ ಕುಟುಂಬಗಳನ್ನು ತಮಿಳು ಕಾಲೋನಿಗೆ ವರ್ಗಾಯಿಸಲು ತುದಿಗಾಲಲ್ಲಿ ನಿಂತಿದ್ದಾರೆ. ಕಾಳಿಕಾಂಭ ಸ್ಲಂ ಜನರೂ ಸೇರಿದಂತೆ ನಗರದ ಎಲ್ಲಾ ಸ್ಲಂಗಳ ಜನರ ಪರವಾಗಿ ಸಾಧ್ಯವಾದಷ್ಟು ಕೆಲಸ ಮಾಡುವ ಶಾಸಕ ಎಂ. ಶ್ರೀನಿವಾಸ್ ನ್ಯಾಯಾಲಯದಲ್ಲಿ ಮೊಕದ್ದಮೆ ಆರಂಭವಾಗುವ ಮುಂಚಿನಿಂದಲೂ ಸ್ಲಂ ಜನರ ಪರವಾಗಿಯೇ ನಿಂತಿದ್ದರು. ಈಗ ತೀರ್ಪಿನ ನಂತರವೂ ಸ್ಲಂ ಬೋರ್ಡ್ ಅಧಿಕಾರಿಗಳನ್ನು ಕರೆದು ತಮಿಳು ಕಾಲೋನಿಯ 22 ಕುಟುಂಬಗಳನ್ನು ಹೊರಹಾಕಿ ಅಲ್ಲಿ ಕಾಳಿಕಾಂಭ ಸ್ಲಂನ 22 ಕುಟುಂಬಗಳನ್ನು ಸೇರಿಸುವ ಸ್ಲಂಬೋರ್ಡ್ ಅಧಿಕಾರಿಗಳ ಹುನ್ನಾರಕ್ಕೆ ಛೀಮಾರಿ ಹಾಕಿದ್ದಾರೆ.

ಈಗಾಗಲೇ ತಮಿಳು ಕಾಲೋನಿಯಲ್ಲಿ ಅವರಿಗಾಗಿಯೇ ಕಟ್ಟಿರುವ 146 ಮನೆಗಳಲ್ಲಿ ಜನ ವಾಸ ಮಾಡುತ್ತಿದ್ದಾರೆ. ಬೆಂಕಿ ಬಿದ್ದು ತಮ್ಮ ಬದುಕನ್ನು ಕಳೆದುಕೊಂಡು ಅಲ್ಲಿನ ಜನ ಪರಿತಪಿಸುತ್ತಿರುವಾಗ ಬೆಂಕಿ ಬಿದ್ದ ಮನೆಯಲ್ಲಿ ಗಳ ಹಿರಿಯುವ ಕೆಲಸವನ್ನು ಸ್ಲಂಬೋರ್ಡ್‌ನ ಅಧಿಕಾರಿಗಳು ಮಾಡುತ್ತಿದ್ದಾರೆ. ಈ ಹಿಂದೆ ಕಾಳಿಕಾಂಭ ಸೇವಾ ಸಮಿತಿಯಲ್ಲಿರುವ ಕಾಂಗ್ರೆಸ್ ಮುಖಂಡರ ಪ್ರಬಲ ಲಾಬಿಯಿದೆ. ಅವರ ಋಣ ತೀರಿಸಲು ಸ್ಲಂ ಬೋರ್ಡ್







...ನಂತರ ಎಂ.ಕೆ ರಾಮಲಿಂಗೇಗೌಡ ಹೈಕೋರ್ಟ್‌ನಲ್ಲಿ ... ಹಾಕಿದ್ದರು. ಇದರಿಂದೇನೂ ಸ್ಲಂಜನರು ...ಲಾಗಲಿಲ್ಲ. ತಮಗೆ ಸಹಕಾರ ನೀಡಿದ ಸಂಘಟನೆಗಳ ...ಖರ ಬೆಂಬಲದಿಂದ ಬೆಂಗಳೂರಿನ ಜನಪರ ವಕೀಲರ ...ತ್ತಿನಿಂದ 2006ರಲ್ಲಿ ಕಾಳಿಕಾಂಭ ಸ್ಲಂ ಉಳಿಸಿಕೊಳ್ಳುವ ...ತ್ತೊಂದು ಸುತ್ತಿನ ಹೋರಾಟ ಹೈಕೋರ್ಟ್‌ನಲ್ಲಿ ...ಭವಾಯಿತು.

...ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದ ಸಂದರ್ಭದಲ್ಲಿ ಕೂರಿಸಿಕೊಂಡು ನಿರ್ಣಯ ಮಾಡಿಸಿದ್ದರು. ಶಾಸಕರ ತಾಳಕ್ಕೆ ತಕ್ಕಂತೆ ಕುಣಿದ ಸ್ಲಂ ಬೋರ್ಡ್ ಅಧಿಕಾರಿಗಳು ಅವರೊಂದಿಗೆ ಶಾಮೀಲಾಗಿ ಸ್ಲಂ ಜನರ ಬಾಯಿಗೆ ಮಣ್ಣು ಹಾಕುವ ಕೆಲಸಕ್ಕೆ ಮುಂದಾದರು. ದವರಿ ಎಂಬ ಜನಾಂಗ ದೇಶದ ಅಲೆಮಾರಿ ಜನಾಂಗಗಳಲ್ಲಿ ಒಂದು. ಇಡೀ ರಾಜ್ಯದಲ್ಲಿ ಅಲೆಮಾರಿ ಜನಾಂಗವೊಂದಕ್ಕೆ ಸರ್ಕಾರ ನೀಡಿರುವ ವಸತಿ ಸವಲತ್ತು ಬಹುಶಃ ದವರಿ ಜನಾಂಗಕ್ಕೆ ಪ್ರಥಮ. ಇಂತಹ ಅಲೆಮಾರಿ ಜನಾಂಗ ದವರಿಗಳಿಗೆಂದೇ ಕಟ್ಟಿದ್ದ ಮನೆಗಳಿಗೆ ಕಾಳಿಕಾಂಭ ಸ್ಲಂನಲ್ಲಿದ್ದ 19 ಕುಟುಂಬಗಳನ್ನು ನಗರ ಸ್ಲಂ ನಿವಾಸಿಗಳ ಒಕ್ಕೂಟ ಹಾಗೂ ಕರ್ನಾಟಕ ಜನಶಕ್ತಿಯ ಹೋರಾಟದಿಂದ ಹೈಕೋರ್ಟ್‌ನಲ್ಲಿ ನ್ಯಾಯಾಧೀಶರಾದ ರಾಮಮೋಹನ ರೆಡ್ಡಿ ಕಾಳಿಕಾಂಭ ಸ್ಲಂ ಜನರಿಗೆ ಆ ಸ್ಥಳದಲ್ಲಿಯೇ ಮನೆ ನಿರ್ಮಿಸಲು ತೀರ್ಪಿನಲ್ಲಿ ತಿಳಿಸಿದ್ದಾರೆ. ಹೀಗಿದ್ದರೂ ನ್ಯಾಯಾಲಯದ ತೀರ್ಪನ್ನೇ ತಿರುಚಲು ಹೊರಟಿದ್ದಾರೆ ಕೆಲ ಕಾಂಗ್ರೆಸ್ ಮುಖಂಡರು. ಸ್ಲಂ ಬೋರ್ಡ್ ಅಧಿಕಾರಿಗಳ ಮೇಲೆ ಒತ್ತಡ ತಂದು ತೀರ್ಪಿನ ಅಂಶಗಳ ಬಗ್ಗೆ ಗೊಂದಲ ಮೂಡಿಸುತ್ತಾ, ಸ್ಲಂ ಎಂದು ಡಿಕ್ಲೇರ್ ಮಾಡುವ ಪ್ರಯತ್ನ ಆರಂಭಿಸದೇ 22 ಅಧಿಕಾರಿಗಳು ಮುಂದಾಗಿದ್ದಾರೆ. ಇದನ್ನು ನೋಡಿದರೆ 2003ರಲ್ಲಿ ನಡೆದ ಸ್ಲಂಜನರ ಬೃಹತ್ ಹೋರಾಟ ಮತ್ತೆ ಮುಂದಿನ ದಿನಗಳಲ್ಲಿ ನಡೆಯುವ ಲಕ್ಷಣಗಳು ದಟ್ಟವಾಗಿಯೇ ಇದೆ. ಸರ್ಕಾರ ಮತ್ತು ಜಿಲ್ಲಾಡಳಿತ ಇತ್ತ ಗಮನಹರಿಸಿ ನೊಂದ ಸ್ಲಂ ಜನರಿಗೆ ನ್ಯಾಯ ದೊರಕಿಸಲಿ. ಇಲ್ಲದಿದ್ದರೆ ಸ್ಲಂ ಜನರ ಸ್ವಾಭಿಮಾನದ ಹೋರಾಟವನ್ನು ಕಾಂಗ್ರೆಸ್ ನಾಯಕರು ಎದುರಿಸಬೇಕಾಗುತ್ತದೆ.

■ ವರದಿಗಾರ

ಬೆಳಗಾಂ ಶಾಸಕ ಅಭಯ ಪಾಟೀಲ ದಂಧೆ ಮತ್ತು ದಾಳಿ



'ಅಭಯ್ ಪಾಟೀಲ್'.

ಇಡೀ ಬೆಳಗಾವಿಗೆ ಬೆಳಗಾವಿಯೇ ಬೆಚ್ಚಿ ಬೀಳುವಂತಹ ಭಯಾನಕ ಹೆಸರಿದು.

ಬೆಳಗಾವಿ ದಕ್ಷಿಣ ಕ್ಷೇತ್ರದ ಬಿಜೆಪಿ ಶಾಸಕನಾಗಿದ್ದರೂ ಗೂಂಡಾಗಿರಿಯೇ ಇವನ ಮೂಲ ಅಜೆಂಡಾ. ಹಿಂದೂತ್ವ, ಬೋಗಸ್ ವ್ಯವಹಾರಗಳೇ ಪರಮೋಚ್ಛ ಕಸುಬುಗಳು. ಅಂತಹ ಅಭಯ್ ಪಾಟೀಲ್‌ನ ಮೇಲೆ ಡಿಸೆಂಬರ್ 15 ರಂದು ಲೋಕಾಯುಕ್ತ ರೇಡೊಂದು ನಡೆಯಿತು. ಅದು ಪಕ್ಕಾ ವ್ಯವಸ್ಥಿತ ದಾಳಿ. ಕೇವಲ ಲೋಕಾಯುಕ್ತರ ಪಾಲಿಗೆ ಮಾತ್ರವಲ್ಲ, ಅಭಯ್ ಪಾಟೀಲ್‌ನ ಪಾಲಿಗೂ ಅದು ಪಕ್ಕಾ ವ್ಯವಸ್ಥಿತ ದಾಳಿ! ಯಾಕೆಂದರೆ ತನ್ನ ಮೇಲೆ ನಡೆಯಲಿರುವ ದಾಳಿಯ ಸುಳಿವು ಪಾಟೀಲನಿಗೆ ಒಂದು ತಿಂಗಳು ಮೊದಲೇ ಸಿಕ್ಕಾಗಿತ್ತು.

ಶನಿವಾರದ ಬೆಳ್ಳಂಬೆಳಗ್ಗೆ ಸುಮಾರು 36 ಜನರ ಐದು ತಂಡಗಳು ಬಸವಗಲ್ಲಿಯ ಅಭಯ್ ಪಾಟೀಲ್‌ನ ಮನೆ 'ಮಾಲಿನಿ', ಪಾಟೀಲ್ ರೈಸ್‌ಮಿಲ್, ಕಚೇರಿ ಮತ್ತು ಆತನ ಪಾಲುದಾರಿಕೆಯಿರುವ ಎಸ್.ಜಿ.ಕನ್‌ಸ್ಟ್ರಕ್ಷನ್, ದೇವ್ ಡೆವಲಪರ್ಸ್, ವಾಸ್ತು ಡೆವಲಪರ್ಸ್ ಕಂಪನಿಗಳ ಮೇಲೆ ದಾಂಗುಡಿಯಿಟ್ಟು ಶೋಧನೆ ಶುರು ಮಾಡುತ್ತಿದ್ದಂತೆ ಬೆಳಗಾವಿಯ ಜನ ವಿಪರೀತ ಖುಷಿ ಪಟ್ಟಿದ್ದರು. ದಬ್ಬಾಳಿಕೆಯ ರೌಡಿಸಂ ಮೂಲಕ ಬಡ ರೈತರ ಭೂಮಿಗಳನ್ನು ಅನಾಮತ್ತು ತಿಂದು ತೇಗುತ್ತಿದ್ದ ಈ ಮಹಾನ್ ಜನಪ್ರತಿನಿಧಿಗೆ ಕೊನೆಗೂ ಗ್ರಹಚಾರ ವಕ್ಕರಿಸಿತಲ್ಲ ಎಂದು ಒಳಗೊಳಗೇ ಸಂಭ್ರಮಿಸಿದ್ದರು. ಆದರೆ ಸಂಜೆಯಾಗುವ ವೇಳೆಗೆ ಇಡೀ ದಾಳಿಯ ಫಲಿತಾಂಶ ನೀರಸವಾಗಿ ಹೊರಬಿದ್ದಿತ್ತು. ಬೆಳಗ್ಗೆ ಐದರಿಂದ ಆರಂಭಿಸಿ ಸಂಜೆ ಆರರವರೆಗೆ ತಡಕಾಡಿದರೂ ಏನೊಂದು ಮಹತ್ವದ ದಾಖಲೆಯೂ ಸಿಗಲಿಲ್ಲವೆಂಬ ಅನುಮಾನದ ಡೈಲಾಗ್ ಹೇಳಲು ಬಯಸದ ದಾಳಿ ಉಸ್ತುವಾರಿ ವಹಿಸಿದ್ದ ಲೋಕಾಯುಕ್ತ ಎಸ್ಪಿ ಪಿ.ಎ ಬಳಂಕಾರರು 'ಇದು ಕೋರ್ಟ್ ಆದೇಶದ ಮೇರೆಗೆ ನಡೆಯುತ್ತಿರುವ ತನಿಖಾ ತಪಾಸಣೆಯಾದ್ದರಿಂದ ನಾವು ಬಹಿರಂಗವಾಗಿ ಏನನ್ನೂ ಹೇಳುವುದಿಲ್ಲ' ಎಂದಷ್ಟೇ ಗುನುಗಿ ಜೀಪನ್ನೇರಿದ್ದರು.

ಆದರೆ ಅಭಯ್ ಪಾಟೀಲನನ್ನು 'ಸೇಫ್' ಮಾಡುವ ಸಂಘದ ಅಂಕಲಿ ಮತ್ತು ಚಿಂಚಲಿ ಬ್ರಾಂಚ್‌ಗಳಿಗೆ ವರ್ಗಾವಣೆಯಾದ ಗುಮಾನಿಯಿದೆ. ಲೋಕಾಯುಕ್ತರು ಅವುಗಳನ್ನು ಹೆಕ್ಕಿ ತೆಗೆಯದ್ದು ದುರದೃಷ್ಟ.

ಇಲ್ಲಿ ಮತ್ತೊಂದು ಅನುಮಾನ ತಲೆ ಎತ್ತುತ್ತದೆ. ದೂರು ನೀಡಿದ್ದ ಸುಜಿತ್ ಮುಳಗುಂದ್ ಅವರಿಗೆ ಸದ್ಯದ ಲೋಕಾಯುಕ್ತ ಎಸ್ಪಿ ಬಳಂಕಾರ್ ಮತ್ತು ಪಾಟೀಲನ ನಡುವಿನ ಬಾಂಧವ್ಯದ ಬಗ್ಗೆ ತಿಳಿದೇ ಇದೆ. ಹಾಗಾಗಿ ಅವರು ನ್ಯಾಯಸಮ್ಮತ ತನಿಖೆ ಮಾಡಲಾರರು ಎನ್ನುವ ಸಂಶಯ ಶುರುವಾಗಿತ್ತು. ಅದಕ್ಕಾಗಿಯೇ ಅವರು ಇತ್ತೀಚೆಗಷ್ಟೆ ಲೋಕಾಯುಕ್ತ ನ್ಯಾಯಾಧೀಶರು ಮತ್ತು ರಾಜ್ಯಪಾಲರಿಗೆ ಪತ್ರ ಬರೆದು ಬಳಂಕಾರರ ಬದಲಿಗೆ ಐ.ಪಿ.ಎಸ್ ದರ್ಜೆಯ ಅಧಿಕಾರಿಗೆ ತನಿಖೆಯನ್ನು ವರ್ಗಾಯಿಸುವಂತೆ ಮನವಿ ಮಾಡಿಕೊಂಡಿದ್ದರು. ಅಲ್ಲಿಂದ ಪೂರಕ ಪ್ರತಿಕ್ರಿಯೆ ಸಿಗುವ ಸೂಚನೆ ಗೋಚರಿಸುತ್ತಿದ್ದಂತೆ ತರಾತುರಿಯಲ್ಲಿ ಈಗಿನ ಎಸ್ಪಿ ಸಾರಥ್ಯದಲ್ಲೇ ದಾಳಿ ನಡೆದುಹೋಗಿದೆ. ಹಾಗೊಮ್ಮೆ ಸುಜಿತ್‌ರ ಮನವಿಯನ್ನು ಪುರಸ್ಕರಿಸಿ ಬೇರೊಬ್ಬ ಅಧಿಕಾರಿ ತನಿಖೆಯ ಉಸ್ತುವಾರಿ ವಹಿಸಿಕೊಂಡಿದ್ದರೆ ಅಭಯ್ ಪಾಟೀಲ್ ತಗುಲಿಕೊಳ್ಳುವ ಎಲ್ಲಾ ಸಾಧ್ಯತೆಗಳೂ ಇದ್ದವು. ಅದಕ್ಕೂ ಮೊದಲೇ ಈತನೇ ಡೇಟ್ ಮತ್ತು ಟೈಮ್ ಫಿಕ್ಸ್ ಮಾಡಿ ದಾಳಿ ಮಾಡಿಸಿಕೊಂಡಿದ್ದಾನೆ ಎನ್ನುವ

ಪಾಟೀಲ್‌ರ ಹಿಂದೆ ಅಲೆದಾಡುತ್ತಲೆ ರಾಜಕೀಯದ ರಂಗಪ್ರವೇಶ ಮಾಡಿದಾತ. 1995ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇವಾಡಿ ಕ್ಷೇತ್ರದಿಂದ ಸ್ಪರ್ಧಿಸಿ ಸೋತ ಈತ 2003-04ರ ವೇಳೆಗಾಗಲೆ ಕೋಮುವಾದದ ಎಲಿಮೆಂಟಾಗಿ ಬೆಳೆದು ನಿಂತಿದ್ದ. ಕೋಮು ಪ್ರಚೋದನೆಗೆ ಸುಲಭಕ್ಕೆ ಬಲಿಯಾಗಿ ಬಿಡುವ ಮರಾಠಿಗರೇ ಅತಿಯಾಗಿರುವ ಬೆಳಗಾವಿಯಲ್ಲಿ ಈತ ಚಲಾವಣೆಗೆ ಬರಲು ಬಹಳ ಕಾಲವೇನು ಹಿಡಿಯಲಿಲ್ಲ. ಸಂಘ ಪರಿವಾರದ ಬೆಂಬಲ, ಗೂಂಡಾಗಿರಿಯ ಪಟಾಲಮ್ಮಿನ ಕುಮ್ಮಕ್ಕಿನಿಂದ 2004ರ ಚುನಾವಣೆಯಲ್ಲಿ ಗೆದ್ದು ಶಾಸಕನೂ ಆದ. ಅಲ್ಲಿಂದ ಶುರುವಾದ ಅಭಯನ ದಬ್ಬಾಳಿಕೆ, ದೌರ್ಜನ್ಯ, ವಂಚನೆಗಳು ಇವತ್ತಿಗೂ ನಿಂತಿಲ್ಲ, ನಿಲ್ಲುವ ಲಕ್ಷಣಗಳೂ ಕಾಣಿಸುತ್ತಿಲ್ಲ.

ರೈತರ ಫಲವತ್ತಾದ ಭೂಮಿ ಕಬಳಿಸುವುದರಲ್ಲಿ ಇವನಿಗೆ ವಿಕೃತ ಖುಷಿ ಇದ್ದಂತೆ ಕಾಣುತ್ತದೆ. ಅದಕ್ಕೆಂದೇ ಕೆ.ಐ.ಎ.ಡಿ.ಬಿ ಜೊತೆ ಸೇರಿ ಬರೋಬ್ಬರಿ 1200 ಎಕರೆಯಷ್ಟು ಜಾಗವನ್ನು ಲಪಟಾಯಿಸಲು ಹೊಂಚು ಹಾಕಿದ್ದ. ಸರ್ವೇ ನಂಬರ್ 628, 629 ಮತ್ತು 630 ರಲ್ಲಿ ಸುಮಾರು 20 ರೈತ ಕುಟುಂಬಗಳು ಲಗಾಯ್ತಿನಿಂದಲೂ ಉಳುಮೆ ಮಾಡಿಕೊಂಡೇ ಬಂದಿವೆ. ಇದು ಬೆಂಗಳೂರು ಪುಣೆ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಚಾಚಿಕೊಂಡಿರುವ

ಮನವಿಯೊಂದನ್ನು ಸಲ್ಲಿಸಿ ಆ ಜಾಗದಲ್ಲಿ ಸದರಿ ಸಂಘ ಕೃಷಿ ಶೈತ್ಯಾಗಾರ ಉಗ್ರಾಣ ಮಳಿಗೆಗಳನ್ನು ರೈತರ ಅನುಕೂಲಕ್ಕಾಗಿ ಸ್ಥಾಪಿಸಲಿದ್ದು ಭೂಮಿಯನ್ನು ಸಂಘಕ್ಕೆ ಬಿಟ್ಟುಕೊಡುವಂತೆ ಕೇಳಿಕೊಂಡಿದ್ದ. ಅದಕ್ಕೆ ಕೆ.ಐ.ಎ.ಡಿ.ಬಿ ಅಸ್ತು ಎಂದಿತ್ತು. ಈ ರೀತಿ ಸರ್ಕಾರಿ ಪರಿಹಾರದ ಮೊತ್ತದಲ್ಲಿ ರೈತರ ಭೂಮಿಯನ್ನು ಲಪಟಾಯಿಸಿ ಕೋಟ್ಯಂತರ ರೂಪಾಯಿ ಲಾಭ ಮಾಡಿಕೊಳ್ಳುವ ಹುನ್ನಾರ ನಡೆಸಿದ್ದ. ಆದರೆ ಇವನ ವಿರುದ್ಧ ತಿರುಗಿ ಬಿದ್ದ ರೈತರು ಹೈಕೋರ್ಟ್‌ನಲ್ಲಿ ಕೆ.ಐ.ಎ.ಡಿ.ಬಿ ವಿರುದ್ಧ ದಾವೆ ಹೂಡಿದ್ದರು. ಸತ್ಯಾಸತ್ಯತೆಯನ್ನು ಪರಿಶೀಲಿಸಿದ ಕೋರ್ಟ್ ಶಾಸಕನ ಆಣತಿಯಂತೆ ರೈತರ ಭೂಮಿಯನ್ನು ವಶಪಡಿಸಿಕೊಳ್ಳಲು ಮುಂದಾಗಿದ್ದ ಕೆ.ಐ.ಎ.ಡಿ.ಬಿಗೆ ಛೀಮಾರಿ ಹಾಕಿತ್ತು. ಇಲ್ಲಿ ಸಂಘರ್ಷ ಇದ್ದದ್ದು ರೈತರು ಮತ್ತು ಕೆ.ಐ.ಎ.ಡಿ.ಬಿ ನಡುವೆ. ಹಾಗೊಮ್ಮೆ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಬೇಕಿದ್ದರೆ ಅದು ಕೆ.ಐ.ಎ.ಡಿ.ಬಿ ಯ ಕೆಲಸವಾಗಿತ್ತು. ಆದರೆ ತನ್ನ ತಪ್ಪು ಇದ್ದುದರಿಂದ ಕೆ.ಐ.ಎ.ಡಿ.ಬಿ ಮೇಲ್ಮನವಿಯಂತಹ ದುಸ್ಸಾಹಸಕ್ಕೆ ಕೈಹಾಕಲಿಲ್ಲ. ಆದರೆ ಅಭಯ್ ಪಾಟೀಲ್ ತಾನೊಬ್ಬ ಜನಪ್ರತಿನಿಧಿ ಎನ್ನುವುದನ್ನೂ ಮರೆತು ತನ್ನದೇ ಕ್ಷೇತ್ರದ ರೈತರ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾನೆ.



ಪಾಟೀಲ್‌ನ ಬಹುಕೋಟಿ ಬಿಲ್ಡಿಂಗ್‌ಗಳು...



ಪಾಟೀಲ್‌ನ ದಾದಾಗಿರಿ ವಿರುದ್ಧ ಬೀದಿಗಿಳಿದ ಬೆಳಗಾವಿ ಜನತೆ...

ಕಾಮಗಾರಿಗಳು ಶುರುವಾಗಿರುವ ಲಕ್ಷಣಗಳು ಈಗಾಗಲೇ ದಟ್ಟವಾಗಿ ಕಾಣಿಸಿಕೊಳ್ಳುತ್ತಿವೆ. ಅಸಲಿಗೆ ಸುಜಿತ್ ಮುಳಗುಂದ್ ಎನ್ನುವ ಸಾಮಾಜಿಕ ಕಾರ್ಯಕರ್ತರೊಬ್ಬರು ಪಾಟೀಲ್‌ನ ಅಕ್ರಮ ಸಂಪತ್ತಿನ ಕುರಿತು ದಾಖಲೆ ಸಮೇತ ಲೋಕಾಯುಕ್ತಕ್ಕೆ ಕಳೆದ ತಿಂಗಳ 19ರಂದೇ ದೂರು ಸಲ್ಲಿಸಿದ್ದರು. ವಿಚಾರಣೆ ಕೈಗೆತ್ತಿಕೊಂಡ ಲೋಕಾಯುಕ್ತ ಕೋರ್ಟ್ ಅಭಯ್ ಪಾಟೀಲ್‌ನ ಸಂಪತ್ತಿನ ಕುರಿತು ಮಾಹಿತಿ ಸಂಗ್ರಹಿಸಿ ವರದಿ ನೀಡುವಂತೆ ಲೋಕಾಯುಕ್ತ ಪೊಲೀಸರಿಗೆ ಮಾರನೆಯ ದಿನವೇ ಆದೇಶಿಸಿತ್ತು. ಅದನ್ನು ಜಾರಿ ಮಾಡುವ ಸಲುವಾಗಿ ಪ್ರಸ್ತುತ ತಲಾಷ್ ನಡೆದಿದೆಯೇ ಹೊರತು ಆತನ ಅನಧಿಕೃತ ಸಂಪತ್ತನ್ನು ಮಟ್ಟಹಾಕುವ ಯಾವ ಉದ್ದೇಶವೂ ದಾಳಿಗೆ ಇದ್ದಂತಿಲ್ಲ.

ಕೋರ್ಟ್ ಒಂದು ತಿಂಗಳ ಹಿಂದೆಯೇ ದಾಳಿಗೆ ಆದೇಶ ನೀಡಿದ್ದರೂ ಇಲ್ಲಿಯವರೆಗೆ ಪೊಲೀಸರು ಸುಮ್ಮನಿದ್ದದ್ದಾದರು ಏಕೆ? ಎಂಬ ಅನುಮಾನ ಮೊದಲನೆಯದಾಗಿ ಕಾಡುತ್ತದೆ. ತನ್ನನ್ನು ತಪ್ಪಿತಸ್ಥ ಎಂದು ಸಾರಬಲ್ಲ ಎಲ್ಲಾ ದಾಖಲೆಗಳನ್ನು ಮತ್ತು ಭೌತಿಕ ಸಂಪತ್ತನ್ನು ನಾಶ ಪಡಿಸಲು ಇಲ್ಲವೆ ಬೇರೆಡೆಗೆ ಸಾಗಿಸಲು ಅಭಯ್ ಪಾಟೀಲ್‌ನಂತಹವನಿಗೆ ಇಷ್ಟು ಸಮಯ ಬೇಕಾದಷ್ಟಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಅವತ್ತು ಪಾಟೀಲನ ಮನೆ ಹೊಕ್ಕ ಲೋಕಾಯುಕ್ತರಿಗೆ ಅವನ ಮನೆಯಲ್ಲಿ ಪಾಟೀಲನ ಹೆಂಡತಿ ಮೈಮೇಲಿದ್ದ ತಾಳಿ ಮತ್ತು ಮೂಗುತಿಯ ಹೊರತಾಗಿ ಬೇರಾವ ಬೆಲೆಬಾಳುವ ಆಭರಣಗಳೂ ಸಿಕ್ಕಿಲ್ಲ. ರೇಡ್‌ಗು ಮೂರು ದಿನದ ಮುಂಚೆ ಪಾಟೀಲನ ಹಣದ ಬೃಹತ್ ಅಕೌಂಟುಗಳು ಸುದರ್ಶನ್ ಸಗರೆ ಎಂಬಾತನ ಸುಪರ್ದಿಯಲ್ಲಿರುವ ಆಧಾರ ಸೌಹಾರ್ದ ಸಹಕಾರಿ ನಿಯಮಿತ ಮತ್ತು ಪ್ರಭಾಕರ್ ಕೋರೆ ಕ್ರೆಡಿಟ್ ಸೌಹಾರ್ದ

ಸುದ್ದಿಗಳು ಬೆಳಗಾವಿಯಲ್ಲಿ ಹರಿದಾಡುತ್ತಿವೆ. ಅಲ್ಲದೆ ಸುಜಿತ್ ಮುಳಗುಂದ್ ಅವರು ಪಾಟೀಲನ ಅಕ್ರಮ ಸಂಪತ್ತಿನ ಒಂದೊಂದು ದಾಖಲೆಯ ಜೆರಾಕ್ಸ್ ಪ್ರತಿಯನ್ನೂ ಕಷ್ಟಪಟ್ಟು ಸಂಗ್ರಹಿಸಿ ಲೋಕಾಯುಕ್ತರಿಗೆ ಒಪ್ಪಿಸಿದ್ದರು. ಆದರೂ ತನಿಖೆ ವಿಳಂಬವಾಗುತ್ತಿರುವುದರ ಕುರಿತು ವಿಚಾರಿಸಲು ಹೋದಾಗ 'ಜೆರಾಕ್ಸ್ ಕಾಪಿ ಕೊಟ್ಟು ತನಿಖೆ ಮಾಡ್ರಿ ಅಂತೀರಲ್ರಿ, ಒರಿಜಿನಲ್ ಬೇಕಿತ್ತು' ಎಂದು ಅಧಿಕಾರಿಗಳೇ ರಾಗ ತೆಗೆದಿದ್ದರು. ಇದು ತನಿಖೆಯ ಕುರಿತು ಅವರಿಗಿದ್ದ ನಿರಾಸಕ್ತಿಯನ್ನು ಸ್ಪಷ್ಟವಾಗಿ ತೆರೆದಿಡುತ್ತದೆ.

ಲೋಕಾಯುಕ್ತ ಪೊಲೀಸರು ಕೋರ್ಟ್‌ಗೆ ಅದೆಷ್ಟು ಪವರ್‌ಫುಲ್ ವರದಿ ಸಲ್ಲಿಸುತ್ತಾರೆ, ಏನೆಲ್ಲಾ ದಾಖಲೆಗಳು ಅವತ್ತು ಸಿಕ್ಕಿಬಿದ್ದಿದ್ದವು ಎಂಬುದನ್ನು ಆಧರಿಸಿ ಮುಂದಿನ ನಡೆ ನಿರ್ಧಾರವಾಗಲಿದೆ.

ಅಭಯನ ಅನಾಚಾರಗಳು

ಇಲ್ಲಿಗೆ ಹತ್ತು ವರ್ಷಗಳ ಹಿಂದೆ ಅಭಯ್ ಪಾಟೀಲ್ ಏನಂದರೆ ಏನೂ ಅಲ್ಲ. ಇವತ್ತು ಎಲ್ಲವೂ ಆಗಿದ್ದಾನೆ. ಕೆಲವೇ ಲಕ್ಷಕ್ಕೆ ಬಾಳುತ್ತಿದ್ದ ಆತ ಈಗ ಏಕಾಏಕಿ 40 ರಿಂದ 50 ಕೋಟಿ ಆಸ್ತಿಯ ಒಡೆಯ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಆತನೇ ಸಲ್ಲಿಸಿರುವ ಅಫಿಡವಿಟ್ಟನಂತೆ ಆತನ ಆಸ್ತಿ ಇಪ್ಪತ್ತರಿಂದ ಮೂವತ್ತು ಲಕ್ಷ ಮತ್ತು ಒಂದು ದ್ವಿಚಕ್ರ ವಾಹನ ಮಾತ್ರ ಇತ್ತು. ಪಾಟೀಲನ ಗತ್ತು ನೋಡಿದ ಎಂತವರಿಗೇ ಆದರು ಇದು ಹಸೀ ಸುಳ್ಳೆನ್ನುವ ಸತ್ಯ ಥಟ್ಟನೆ ಗೊತ್ತಾಗಿ ಬಿಡುತ್ತದೆ.

ಆರಂಭದಿಂದಲೂ ಆರೆಸ್ಸೆಸ್‌ನಲ್ಲಿ ಗುರುತಿಸಿಕೊಂಡು ಬಂದ ಈತ ಶಂಕರ್‌ಗೌಡ ಪಾಟೀಲ್, ಬಾಬಾ ಗೌಡ

ಜಮೀನಾಗಿರುವುದರಿಂದ ಅದಕ್ಕೆ ಭಾರೀ ಬೆಲೆ ಇದೆ. ಇದನ್ನು ಸ್ವಾಹಾ ಮಾಡಲು ಈತ ಖತರ್ನಾಕ್ ಯೋಜನೆಯೊಂದನ್ನು ರೂಪಿಸಿದ್ದ. ಅದರ ಪ್ರಕಾರ ಮೊದಲು ಕೆ.ಐ.ಎ.ಡಿ.ಬಿ ಯಿಂದ ಅಷ್ಟೂ ಜಮೀನನ್ನು ಕೈಗಾರಿಕಾ ಅಭಿವೃದ್ಧಿ ಕೆಲಸಕ್ಕೆಂದು ನೋಟಿಫೈ ಮಾಡಿಸಿದ. ನಂತರ ತನ್ನ ಕುಟುಂಬದವರೇ ಸದಸ್ಯ, ನಿರ್ದೇಶಕರಾಗಿರುವಂತಹ ಪರಿವರ್ತನಾ ಅಲ್ಪಸಂಖ್ಯಾತರ ಕೃಷಿ ಸಹಕಾರ ಸಂಘ (ಪಿ.ಎ.ಕೆ.ಎಸ್.ಎಸ್) ಹೆಸರಿನ ಬೋಗಸ್ ಸಂಘವೊಂದನ್ನು ಹುಟ್ಟು ಹಾಕಿ ಅದರ ಮೂಲಕ ಕೆ.ಐ.ಎ.ಡಿ.ಬಿ ಗೆ

ಅಂದಹಾಗೆ ಹೀಗೆ ಮೇಲ್ಮನವಿ ಸಲ್ಲಿಸಬೇಕಾಗಿದ್ದರೆ ಈ ಕೇಸಿಗೆ ನಿರ್ದಿಷ್ಟವಾಗಿ 60 ಲಕ್ಷ ಡೆಪಾಸಿಟ್ ಅಮೌಂಟ್ ಇಡುವಂತೆ ಸುಪ್ರೀಮ್ ಕೋರ್ಟ್ ಸೂಚಿಸಿತ್ತು. ಅದಿಷ್ಟನ್ನೂ ಅಭಯ್ ಪಾಟೀಲ್ ತನ್ನ ಸ್ವಂತ ದುಡ್ಡಿನಿಂದಲೇ ಮಡಗಿದ್ದ. ಅಷ್ಟು ದುಡ್ಡು ಎಲ್ಲಿಂದ ಬಂತು? ಎನ್ನುವುದು ಮತ್ತೊಂದು ಪ್ರಶ್ನೆ. ಅಲ್ಲಿಗೆ ಚುನಾವಣಾ ಆಯೋಗಕ್ಕೆ ಈತ ಸುಳ್ಳು ಪ್ರಮಾಣ ನೀಡಿರುವ ಮತ್ತೊಂದು ಅಡ್ಡಕತ್ತರಿಗೆ ಸಿಕ್ಕಿಹಾಕಿಕೊಳ್ಳಲಿದ್ದಾನೆ.

ಇನ್ನು ಆತನ ಪಿ.ಎ.ಕೆ.ಎಸ್.ಎಸ್ ಸಂಘ → 13

ಆರೆಸ್ಸೆಸ್‌ನ ಭ್ರಷ್ಟ ಬೆಂಬಲ

ಚೆಡ್ಡಿ ಶಾಸಕ ಅಭಯ್ ಪಾಟೀಲ್‌ನ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿರುವ ಸುಜಿತ್ ಮುಳಗುಂದ್ ಕೂಡಾ ಒಂದು ಕಾಲಕ್ಕೆ ಆರೆಸ್ಸೆಸ್‌ನಲ್ಲಿ ಇದ್ದಂತವರೆ. ಆದರೆ ಆರೆಸ್ಸೆಸ್‌ನ ಇಬ್ಬಂದಿತನ ಅರಿವಾದ ನಂತರ ಬೇಸತ್ತು ಹೊರಬಂದಿದ್ದಾರೆ. ಅದಕ್ಕೂ ಈ ಅಭಯ್ ಪಾಟೀಲ್‌ನೆ ಕಾರಣ. ಆರೆಸ್ಸೆಸ್‌ನ ಒಣ ರಾಷ್ಟ್ರಪ್ರೇಮದ ವಾಶಿಂಗ್‌ಗೆ ಮಾರುಹೋಗಿ ಚೆಡ್ಡಿ ತೊಟ್ಟಿದ್ದ ಸುಜಿತ್‌ರಿಗೆ ಅಭಯ್ ಆರೆಸ್ಸೆಸ್‌ನಿಂದಲೇ ಆರಿಸಿಹೋಗಿ ಅಕ್ರಮ ನಡೆಸುತ್ತಿದ್ದದ್ದು ಅಚ್ಚರಿಯಂತೆ ಕಂಡುಬಂದಿತ್ತು. ಸಂಘಿಗಳ ಕಪಟ ಬೋಧನೆ ಮತ್ತು ಕೋಮು ಪ್ರಚೋದನೆಯನ್ನೆ ದೇಶಪ್ರೇಮ, ಧರ್ಮಮಾರ್ಗ ಎಂದೆಲ್ಲ ನಂಬಿಕೊಂಡಿದ್ದ ಸುಜಿತ್ ಬೆಳಗಾವಿ ಜಿಲ್ಲಾ ಆರೆಸ್ಸೆಸ್ ಮುಖಂಡರ ಸಮ್ಮುಖದಲ್ಲೆ ಅಭಯ್‌ನ ಅನಾಚಾರಗಳನ್ನು ಬಯಲು ಮಾಡಿ, ಆತನಿಗೆ ಬುದ್ಧಿ ಹೇಳುವಂತೆ ಕೇಳಿಕೊಂಡಿದ್ದರು. ಅಭಯ್ ಪಾಟೀಲನಿಗೆ ಬುದ್ಧಿ ಕಲಿಸುವ ಬದಲು, ಆರೆಸ್ಸೆಸ್ಸಿಗರು ಸುಜಿತ್‌ರಿಗೆ ಧಮಕಿ ರೂಪದ ಬುದ್ಧಿಮಾತಿನಲ್ಲಿ ತೆಪ್ಪಗಿರುವಂತೆ ಸೂಚಿಸಿದ್ದರು. ಅದನ್ನೂ ಮೀರಿ ಪ್ರತಿಭಟಿಸಿದಾಗ ನೀನು ಅಭಯ್ ಪಾಟೀಲರ ವಿರುದ್ಧ ಮಾತ್ರವೇ ಏಕೆ ದೂರು ಹೇಳುತ್ತೀಯಾ, ಬೆಳಗಾವಿ ಉತ್ತರ ಕ್ಷೇತ್ರದ ಕಾಂಗ್ರೆಸ್ ಶಾಸಕ ಫಿರೋಜ್ ಸೇಠ್ ಬಗ್ಗೆ ಆರೋಪ ಮಾಡುತ್ತಿಲ್ಲವೇಕೆ? ಎಂಬಿತ್ಯಾದಿ ಅರ್ಥವಿಲ್ಲದ ಪ್ರಶ್ನೆಕೇಳಿ ಅವರನ್ನು ಗೊಂದಲಕ್ಕೆ ತಳ್ಳುವ ಪ್ರಯತ್ನ ಮಾಡಿದ್ದರು. ಅದೆಲ್ಲ ಆದ ಮೇಲಷ್ಟೆ ಆರೆಸ್ಸೆಸ್‌ನ ನಿಜ ಬಣ್ಣ ಅವರಿಗೆ ಗೋಚರಿಸಿದ್ದು. ತಕ್ಷಣವೇ ಅವರು ಸಂಘದಿಂದ ಹೊರಬಂದು ಅಭಯ್ ಪಾಟೀಲ್‌ನ ವಿರುದ್ಧ ಸಮರ ಸಾರಿ ನಿಂತಿದ್ದಾರೆ.



ಪೂಜಾಗಾಂಧಿ ಮದುವೆ ಲಟಕ್

ತಂದೂರಿ V/s ರಾಗಿಮುದ್ದೆ

ಪೂಜಾ ಮದುವೆ ಮುರಿದುಬಿದ್ದಿದೆ.
ತಾಯಿ ಜ್ಯೋತಿ ಗಾಂಧಿಯ ಕಾಟಕ್ಕೆ ರೋಸತ್ತು ನಾನು ... ವಾಪಸ್ಸು ಮಾಡಿದ್ದೇನೆಂದು ಮಾಜಿ(?) ಪ್ರಿಯಕರ ...ನಂದಗೌಡ ಟಿ.ವಿ.ಕ್ಯಾಮೆರಾದವರನ್ನು ಕರೆಸಿ ಟಾಂಟಾಂ ...ದ್ದಾನೆ. ಅಮ್ಮನನ್ನು ಅವಮಾನಿಸಿದವನ ಜೊತೆ ...ಥ ಮದುವೆ' ಎಂದು ನಟಿ ಪೂಜಾ ಗಾಂಧಿಯೂ ...ವೆ ಕ್ಯಾನ್ಸಲ್ ಎಂದಿದ್ದಾಳೆ. ತಂದೆ ಪವನ್ ಗಾಂಧಿ ...ದ ದೆಹಲಿಯಿಂದ ಬಂದು ಮಾಡಬಹುದಾದ ರಾಜಿ, ...ಬಹುದಾದ ತೇಪೆಯ ಹಣೆಬರಹ ಆಪ್ತರಲ್ಲೇ ಇದೆ. ...ರೆ ಬರಗೆಟ್ಟ ಟೀವಿಗಳಿಗಂತೂ ಬರಪೂರ ಸರಕು, ...ತ್ತ ಟಿಆರ್‌ಪಿ.

...ಬ್ಬಳು ಬಿಂದಾಸ್ ನಟಿ ಮತ್ತೊಬ್ಬ ರೊಕ್ಕಸ್ಥ ಶೋಕಿ ...ನ ಮದುವೆಯ ಕತೆ ಏನಾಗುತ್ತದೆ ಎಂಬುದಕ್ಕೆ ...ಯ ರೇಖಾ, ಕರೀನಾ ಕಪೂರ್, ಮೋನಿಷಾ ಕೋಯಿ... ಕನ್ನಡದ ಆರತಿ, ಮಂಜುಳಾ ಇತ್ಯಾದಿ ನಟಿಯರ ...ಮುರುಕು ದಾಂಪತ್ಯ ದುರಂತಗಳೇ ಸಾಕಷ್ಟು ಪಾಠ ...ಕೊಟ್ಟಿರುವಾಗ ಇನ್ನು ಪೂಜಾ ಗಾಂಧಿಯಂತ ನಟಿಯ ...ತಿಗೆ ಮರುಗುವವರ್‍ಯಾರು?

...ಮಾಷೆಯೆಂದರೆ ಜೆಡಿಎಸ್ ತೊರೆದು ದೇವೇಗೌಡರ ...ಂಬಿಕ ಎದುರಾಳಿ ಯಡಿಯೂರಪ್ಪನವರ ಕೆಜೆಪಿಗೆ ನೆಗೆದ ...ಗಳಿಗೆಯಲ್ಲೇ ಪೂಜಾಳ ಮದುವೆಗೆ ಕಲ್ಲು ಬಿದ್ದಿದ್ದು! ...ದು ಏನೆಲ್ಲಾ ಗುಲ್ಲು, ಕುಚೋದ್ಯಗಳಿಗೆ ...ವಾಗುತ್ತಿದೆ ಎಂಬುದಕ್ಕೆ ಸದ್ಯ ಹೊಗೆಯಾಡುತ್ತಿರುವ ...ಮುಗಳೇ ಸಾಕು. ಜೆಡಿಎಸ್‌ಗೆ ಕೈಕೊಟ್ಟು ಕೆಜೆಪಿ ... ಸಿಟ್ಟಿಗೆ ಬಿದ್ದೇ ಕುಮಾರಣ್ಣ ಪೂಜಾ ಮದುವೆಗೆ ...ಹಾಕಿದರೆಂಬುದು ಒಂದು ಗುಲ್ಲಾದರೆ ಭಾವೀ ಪತಿ ...ವಗೌಡ ಗೃಹಮಂತ್ರಿ ಅಶೋಕ್ ಶಿಷ್ಯನೆಂದೂ ಆ ...ಕ್ಕೇ ಕುಮಾರಣ್ಣ ಅಶೋಕ್‌ಗೆ ಹೇಳಿಸಿ ...ವಗೌಡನನ್ನು ಪೂಜಾ ವಿರುದ್ಧ ಸಿಟ್ಟಿಗೇಳುವಂತೆ ...ದರೆಂಬುದು ಇನ್ನೊಂದು ವದಂತಿ. ಪೂಜಾ ಗಾಂಧಿ ...ಗೆ ಸೇರಿದ್ದು ಜೆಡಿಎಸ್ ನಿಷ್ಠ ಆನಂದಗೌಡನಿಗೆ ...ಗದ ಕಾರಣಕ್ಕೇ ಮದುವೆ ಮುರಿದುಬಿತ್ತೆಂಬ ...ತಾರವೂ ಇದೆ. ಜೊತೆಗೆ ಪೂಜಾ ಗಾಂಧಿ ತನ್ನ ...ಗೆಳೆಯ ಡಾ. ಕಿರಣ್ ಜೊತೆ ಮಾತಾಡಿದ್ದು ...ಗೌಡನಿಗೆ ಸಹಿಸಲಾಗದ್ದು ನವರಸ ನಾಯಕ ಜಗ್ಗೇಶ್ ... ಇನ್ನೂ ಪೂಜಾ ಮಾತುಕತೆ ಇಟ್ಟುಕೊಂಡಿದ್ದು, ...ಪಾಳ್ಯದ್ದೇ ಶೈಲಿಯ 'ಹಂತಕಿ' ಎಂಬ ಮತ್ತೊಂದು ...ಪ್ರೆ ಚಿತ್ರಕ್ಕೆ ಪೂಜಾ ಒಪ್ಪಿಕೊಂಡಿದ್ದು, ಬಿಜೆಪಿಗೆ ...ವಂತೆ ಆನಂದಗೌಡ ಒತ್ತಾಯಿಸಿದ್ದಕ್ಕೆ ಪೂಜಾ ಒಪ್ಪದೇ ...ದ್ದು, ಕಿಂಗ್‌ರವಿ ಎಂಬ ಶೋಕಿವೀರ ನಿರ್ಮಾಪಕ ...ಲ್ಲದ ಹೊತ್ತಲ್ಲಿ ಪೂಜಾಳ ಮೊಬೈಲಿಗೆ ಕರೆ ಮಾಡಿದ್ದು ... ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಮಗ ... ಜಗ್ಗನ ಜೊತೆ ಪೂಜಾಗಾಂಧಿ ಯಾವುದೋ ...ಸಾರದ ಕುರಿತು ಚರ್ಚಿಸಿದ್ದನ್ನೇ ಭಾವೀ ಪತಿ ...ಗೌಡ ಅಪಾರ್ಥ ಮಾಡಿಕೊಂಡನೆಂಬುದು; ಹೀಗೆ ...ಾ ಗಾಂಧಿಯ ಮದುವೆ ಭಂಗದ ಕುರಿತಂತೆ ...ಂದು ಕುಚೇಷ್ಟೆ ಕೇಳಿಬರುತ್ತಲೇ ಇದೆ. ಆದರೆ ...ಪೂಜಾ ಮತ್ತು ಆನಂದರ ಮಾತುಗಳ ನಡುವೆಯಲ್ಲೊ... ಕೂತಿರುವಂತಿದೆ.

...ದ್ಯಮಿ ಆನಂದಗೌಡ ಮತ್ತು ನಟಿ ಪೂಜಾ ನಡುವೆ ...ಯ, ಸ್ನೇಹ, ಪ್ರೇಮ ಯಾವ ಗಳಿಗೆಯಲ್ಲಿ, ಯಾವ ...ಯಲ್ಲಿ ಹೇಗೆ, ಎಲ್ಲಿ ಕುದುರಿತೆಂಬ ಬಗ್ಗೆ ಯಾರಲ್ಲೂ ...ಸ್ಪಷ್ಟತೆಯಿಲ್ಲ. ಮುಂಗಾರು ಮಳೆ ಕೃಷ್ಣಪ್ಪನ ಸೋದರಳಿಯ ...ಕಿರಣ್ ಎಂಬಾತ ನನಗೆ ಬೆದರಿಕೆ ಹಾಕುತ್ತಿದ್ದಾನೆ, ...ರೆ ಕೊಡುತ್ತಿದ್ದಾನೆ ಎಂದು ಪೂಜಾ ಮೀಡಿಯಾಗಳ ...ವ ಕಣ್ಣೀರಿಟ್ಟಾಗಲೇ ಸಿನಿಮಾ ಹೊರತಾದ ಪೂಜಾ ಬದುಕಿನ ಕುರಿತಂತೆ ಮಾತುಗಳು ಕೇಳಿಬಂದದ್ದು.

ಪೂಜಾ ದುರಹಂಕಾರಿಯಲ್ಲ, ದುಷ್ಟತನ ಗೊತ್ತಿಲ್ಲ. ಬೇರೆಲ್ಲ ನಟಿಯರಂತೆ ಬಿಂಕಬಿನ್ನಾಣ ಮಾಡಿದವಳಲ್ಲ. ಪ್ರಾಣಿಗಳ ಕುರಿತಂತೆ ಆಕೆಗಿರುವ ದಯೆ, ಪ್ರೀತಿಗಷ್ಟೇ ಅಲ್ಲ ಮಾನವ ಸಂಬಂಧಗಳ ಮಟ್ಟಿಗೂ ತನ್ನದೇ ಶೈಲಿಯ ವರ್ತನೆಗಳಿವೆ. ಸಂಭಾವನೆಗಾಗಿ ಪೀಡಿಸಿದ್ದು, ಶೂಟಿಂಗಿಗೆ ಕೈಕೊಟ್ಟಿದ್ದು, ನಿರ್ಮಾಪಕರನ್ನು ಕಾಡಿಸಿದ್ದು, ಸಣ್ಣಪುಟ್ಟ ಕ್ಯಾತೆ ತೆಗೆದು ಗೋಳಾಡಿಸಿದ್ದು ಇತ್ಯಾದಿ ಯಾವ ರಂಪ-ರಾದ್ಧಾಂತಗಳಿಗೂ ಈಡಾದವಳಲ್ಲ. ಹೀಗಾಗಿಯೇ ಪೂಜಾ ಬಗ್ಗೆ ಗಾಂಧಿನಗರದ ಯಾವ ಮೂಲೆಯಿಂದಲೂ ಅಪಸ್ವರ ಕೇಳಿ ಬರಲಿಲ್ಲ.

ಆಕೆಯ ತಾಯಿ ಜ್ಯೋತಿ ಗಾಂಧಿ ಮೂಲತಃ ಮುಂಬಯಿಯವರಾದ್ದರಿಂದ ಕನ್ನಡ ಗೊತ್ತಿಲ್ಲ. ಪ್ರಾರಂಭದಲ್ಲಿ ಬನಶಂಕರಿಯಲ್ಲಿ ಬಾಡಿಗೆ ಮನೆ ಮಾಡಿ ತಂಗಿ ರಾಧಿಕಾ ಗಾಂಧಿಯನ್ನು ಸಿನಿಮಾಕ್ಕೆಳೆದು ತಂದಿದ್ದೇ ಪೂಜಾ. ಇಲ್ಲಿಗೆ ವರ್ಷದ ಹಿಂದೆ ಪೂಜಾ ಕತ್ರಿಗುಪ್ಪೆಯ ಬಿಗ್ ಬಜಾರ್ ಹಿಂದೆ ನಟ ಉಪ್ಪಿಯ ಮನೆಯೆದುರಿನ ಅಪಾರ್ಟ್‌ಮೆಂಟಿನಲ್ಲಿ 70 ಲಕ್ಷದ ಫ್ಲಾಟ್ ಖರೀದಿಸಿದಾಗಲೇ ಆಕೆಯಿನ್ನು ಮುಂಬಯಿಗೆ ವಾಪಸ್ಸಾಗಲಾರಳೆಂದು ಗಾಂಧಿನಗರ ಲೆಕ್ಕ ಹಾಕಿದ್ದು. ಅಲ್ಲಿಯತನಕ ಪೂಜಾಳಿಗೆ ಸಾತು ಕೊಟ್ಟವನು ಅಡಕಮಾರನಹಳ್ಳಿ ಕೃಷ್ಣಪ್ಪನ ಸಂಬಂಧಿ ಡಾ. ಕಿರಣ್!

ಮದುವೆಯಾಗಿ ಮಕ್ಕಳಿದ್ದ ಡಾ. ಕಿರಣ್ ಒಂದು ಹಂತದಲ್ಲಿ ಪೂಜಾ ಗಾಂಧಿಗೆ ಬಾಡಿಗಾರ್ಡ್‌ನಂತೆಯೇ ಓಡಾಡಿಕೊಂಡಿದ್ದ. ಇಬ್ಬರೂ ಸೇರಿಯೇ ಬನಶಂಕರಿಯಲ್ಲೊಂದು ಟ್ರಾವಲ್ಸ್ ಆರಂಭಿಸಬೇಕಿತ್ತು. ಅದಕ್ಕೆ ಕೆ.ಪಿ. ಟ್ರಾವಲ್ಸ್ ಎಂದೇ ಹೆಸರಿಟ್ಟರು. ಕೆ.ಪಿ ಅಂದರೆ ಕಿರಣ್ ಮತ್ತು ಪೂಜಾ ಎಂದರ್ಥ. ಆ ಮಟ್ಟಿಗೆ ಪೂಜಾ ಮತ್ತು ಕಿರಣ್ ನಡುವೆ ವ್ಯಾಪಾರಿಕ ನಂಟಿತ್ತು, ಅದೇ ಹೊತ್ತಿಗೆ ಎಂಟ್ರಿ ಕೊಟ್ಟವನು ಆನಂದ್‌ಗೌಡ. ಜಯನಗರದ ಒಂಬತ್ತನೇ ಬ್ಲಾಕಿನಲ್ಲೊಂದು ಕಾಂಪ್ಲೆಕ್ಸ್, ಪಕ್ಕದಲ್ಲೇ ಭರ್ಜರಿ ಬಂಗಲೆಯ ಆನಂದ್‌ಗೌಡ ಮೂಲತಃ ಶಿವಮೊಗ್ಗದ ಮಲೆನಾಡು ಗೌಡ.

ಸ್ಫುರದ್ರೂಪಿಯಲ್ಲ, ನಟನಲ್ಲ, ಸಿನಿಮಾ ಬಗ್ಗೆ ಅಂಥ ಸಂಬಂಧವನ್ನು ಹೊಂದಿದವನಲ್ಲ, ಹಾಗಿದ್ದು ಚಪಲವಿತ್ತಲ್ಲ; ಅದು ಆನಂದ್‌ಗೌಡನನ್ನು ಪೂಜಾಗಾಂಧಿಯ ತನಕ ಎಳೆದುತಂದಿತ್ತು. ಐಷಾರಾಮಿ ಕಾರು, ನಿರರ್ಗಳ ಇಂಗ್ಲಿಷು ಮತ್ತು posh ಲೈಫ್‌ಸ್ಟೈಲ್‌ನಿಂದಾಗಿ ಆನಂದ್‌ಗೌಡ ಆಗರ್ಭ ಶ್ರೀಮಂತನಂತೆಯೇ ಕಾಣಿಸುತ್ತಿದ್ದ. ಯಾವುದೋ ಕಾಲಕ್ಕೆ ಹಿರಿಯ ನಟಿ ಬಿ.ಸರೋಜಾದೇವಿಯವರ ಸಂಬಂಧಿಯನ್ನು ಮದುವೆಯಾಗಿ ಆರೇ ತಿಂಗಳಿಗೆ ಡೈವೋರ್ಸ್ ಪಡೆದು ಮುಖಭಂಗಕ್ಕೀಡಾಗಿದ್ದ ಆನಂದ್‌ನ ಸಹೋದರಿಯೊಬ್ಬಳು ಅಮೆರಿಕದಲ್ಲಿದ್ದಳೆಂಬುದನ್ನು ಬಿಟ್ಟರೆ ಆತನ ಬಗ್ಗೆ ಬೇರೇನೂ ಗೊತ್ತಿರಲಿಲ್ಲ. ಕೆಲವರ ಪ್ರಕಾರ ಆತ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಪತ್ನಿ ಪ್ರೇಮಾರ ಸಂಬಂಧಿ. ಇನ್ನೂ ಕೆಲವರು ಆತ ಕೆಂಗಲ್ ಹನುಮಂತಯ್ಯನವರ ತಂಗಿ ಮಗ ದೇವೇಗೌಡರ ಸಂಬಂಧಿಯೆಂದೂ ಭಾವಿಸಿದವರುಂಟು.

ಆದರೆ ಆನಂದ್ ಇದ್ಯಾವುದೂ ಆಗಿರಲಿಲ್ಲ. ಅದ್ಯಾರು ಈತನ ಬಗ್ಗೆ ಪೂಜಾಗಾಂಧಿಗೆ ಹುಯಿಟ್ಟರೋ ಗೊತ್ತಿಲ್ಲ. ಜಾತಿಯಲ್ಲಿ ಗೌಡ, ಕನ್ನಡಿಗ. ಜೊತೆಗೆ ಆಗರ್ಭ(?) ಶ್ರೀಮಂತ. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ ಪೂಜಾಳ ಲೆಕ್ಕಾಚಾರವೂ ಗರಿಗೆದರಿದೆ. ದೋಸ್ತಿ ಕುದುರಿದೆ. ಇದೇ ಹೊತ್ತಿಗೆ ಪೂಜಾ ತಂದೆ ಪವನ್‌ಗಾಂಧಿ ದೆಹಲಿ ತೊರೆದು ಬೆಂಗಳೂರಿಗೆ ಬಂದಿದ್ದೇ ಮೊದಲು ಮಾಡಿದ ಕೆಲಸವೇನು ಗೊತ್ತೆ?

ರಿವಾಲ್ವರ್ ಲೈಸನ್ಸಿಗೆ ಅರ್ಜಿ ಹಾಕಿದ್ದು!

ತನ್ನದು ಟ್ರಾನ್ಸ್‌ಪೋರ್ಟ್ ದಂಧೆ. ದೆಹಲಿ, ಬಾಂಬೆ ಮತ್ತು ಬೆಂಗಳೂರಿನ ಮಧ್ಯೆ ಕಾರ್ಗೋ ವಹಿವಾಟು ಮಾಡಿಕೊಂಡಿರುವುದರಿಂದಾಗಿ ತನಗೆ ರೌಡಿಗಳಿಂದ ಬೆದರಿಕೆಯಿದೆ. ಅದಕ್ಕೇ ರಿವಾಲ್ವರ್ ಲೈಸನ್ಸ್ ಬೇಕೆಂದು ಬೆಂಗಳೂರು ಪೊಲೀಸ್ ಕಮೀಶನರ್ ಮಿರ್ಜಿಗೆ ಪವನ್‌ಗಾಂಧಿ ಅರ್ಜಿ ಹಾಕುತ್ತಾರೆ. ಜೊತೆಗೆ ತಾನು ಕನ್ನಡದ ಸಿನಿಮಾ ನಟಿ ಪೂಜಾಗಾಂಧಿಯ ತಂದೆ ಎಂದೂ ಹೇಳಿಕೊಳ್ಳುತ್ತಾರೆ. ಇನ್ನು ಮುಂದೆ ತಾನು ಬೆಂಗಳೂರಿನಲ್ಲೇ ಕಾಯಮ್ಮಾಗಿ ನೆಲೆಸುತ್ತೇನೆಂದು ಲಿಖಿತ ಪ್ರಮಾಣಪತ್ರವನ್ನೂ ದಾಖಲಿಸುತ್ತಾರೆ.

ರಿವಾಲ್ವರ್ ಲೈಸೆನ್ಸ್ ಕುರಿತಂತೆ ಪರಿಶೀಲನೆಗೆಂದು ಪವನ್‌ಗಾಂಧಿಯನ್ನು ಸಂಪರ್ಕಿಸಿದ ಪೊಲೀಸ್ ಅಧಿಕಾರಿಯೊಬ್ಬರಿಗಿದು ವಿಚಿತ್ರವೆನಿಸಿ, 'ಅಲ್ರೀ... ನಿಮಗೀಗ ವಯಸ್ಸು ಅರವತ್ತು ದಾಟಿದೆ. ದೆಹಲಿ-ಬಾಂಬೆಯಲ್ಲಿ ಇಷ್ಟು ವರ್ಷಗಳ ಕಾಲ ಏನೇನೋ ದಂಧೆ ನಡೆಸಿದ್ದೀರಿ ಅಂತೀರಲ್ಲ. ದೆಹಲಿ ಬಾಂಬೆಯಂಥ ನಗರಗಳಲ್ಲೇ ಇಲ್ಲದ ಪ್ರಾಣ ಭೀತಿ ಬೆಂಗಳೂರಿನಂಥ ಸಾಫ್ಟ್ ಸಿಟಿಯಲ್ಲಿ ಹೇಗೆ ಬರಲು ಸಾಧ್ಯ? There must be some other reason....!' ಎನ್ನುತ್ತಾರೆ.

ಯಾವತ್ತು ಆನಂದಗೌಡನ ಜೊತೆ ಪೂಜಾಗಾಂಧಿಯ ನಿಶ್ಚಿತಾರ್ಥದ ಸುದ್ದಿ ಬಯಲಾಯಿತೋ ಅದಕ್ಕೆ ಕೇವಲ ವಾರದ ಮೊದಲೇ ತಂದೆ ಪವನ್‌ಗಾಂಧಿಗೆ ರಿವಾಲ್ವರ್ ಲೈಸೆನ್ಸ್ ಸಿಕ್ಕಾಗಿತ್ತು. ಅದು ಪೂಜಾಳ ತಾಯಿ ಜ್ಯೋತಿಗಾಂಧಿಯ ಷಡ್ಯಂತ್ರದ ಪ್ರತಿಫಲವಾಗಿತ್ತೇ? ಆನಂದ್‌ಗೌಡನ ಜೊತೆಗಿನ ಪೂಜಾ ಒಡನಾಟ ತಾಯಿಗೆ ಇಷ್ಟವಿರಲಿಲ್ಲವೆ? ಅಥವಾ ಮಗಳು ಆನಂದಗೌಡನ ಜೊತೆ ನಿಶ್ಚಿತಾರ್ಥಕ್ಕೆ ಬಿದ್ದಿದ್ದರ ಪರಿಣಾಮವನ್ನು ಎದುರಿಸುವುದಕ್ಕಾಗಿ ರಿವಾಲ್ವರ್ ಲೈಸೆನ್ಸ್‌ನ ಅನಿವಾರ್ಯವಾಗಿತ್ತೆ?

ಏಕೆಂದರೆ ಈ ಹೊತ್ತಿಗಾಗಲೇ ಡಾ. ಕಿರಣ್ ಮತ್ತು ಪೂಜಾ ಮಧ್ಯೆ ಟ್ರಾವಲ್ಸ್ ಆರಂಭಿಸುವ ಬಗ್ಗೆ ಸಾಕಷ್ಟು ಲೇವಾದೇವಿಯಾಗಿತ್ತು. ಕಿಂಗ್ ರವಿ ಎಂಬ ಚಟಗಾರ ನಿರ್ಮಾಪಕ ಇನ್ನೆಂಥದೋ ಪ್ರಾಜೆಕ್ಟಿಗೆಂದು ಪೂಜಾ ಜೊತೆ ಬಿಜಿನೆಸ್ ಆರಂಭಿಸಿದ್ದೇನೆಂದು ಹೇಳಿಕೊಂಡಿದ್ದ. ನವರಸ ನಾಯಕ ಜಗ್ಗೇಶ್ ಕೂಡ ಹೆಚ್ಚೂ ಕಮ್ಮಿ ಪೂಜಾಳ ಗಾಡ್‌ಫಾದರ್ ಗೆಟಪ್ಪಿನಲ್ಲಿ ವ್ಯವಹರಿಸುತ್ತಿದ್ದರು. ಈ ಪೈಕಿ ಯಾರಿಗೆ ಪೂಜಾ ನಿಶ್ಚಿತಾರ್ಥದಿಂದಾಗಿ ಆಘಾತವಾಗುತ್ತಿತ್ತೆಂದು ತಾಯಿ ಜ್ಯೋತಿಗಾಂಧಿಗೆ ಭೀತಿಯಿತ್ತು? ಯಾರಿಂದ ತನ್ನ ಮಗಳಿಗೆ ಅಪಾಯವಿದೆಯೆಂದು ತಂದೆ ಪವನ್‌ಗಾಂಧಿ ಲೆಕ್ಕಹಾಕಿದ್ದರು.

ಇದರ ಹೊರತಾಗ್ಯೂ ಆನಂದಗೌಡ ಮತ್ತು ಪೂಜಾ ನಿಶ್ಚಿತಾರ್ಥ ತೀರ ಅನಿರೀಕ್ಷಿತ, ಅವಸರವಸರ, ಅರೆಕಾಲಿಕ ಎಂಬಂತೆ ನಡೆದುಹೋಯಿತು. ಆ ಹೊತ್ತಿಗೆ ಆನಂದ್ ಮತ್ತು ಪೂಜಾ ಪರಿಚಯವಾಗೇ ವರ್ಷ ಕಳೆದಿರಲಿಲ್ಲ. ಆನಂದ್‌ಗೆ ಸಿನಿಮಾ ಲ್ಯಾಂಡು ಹೊಸದು. ಜೊತೆಗೆ ಪೂಜಾ ಬಗ್ಗೆ ವಿಪರೀತ posessive. ಎಷ್ಟೆಂದರೂ ಮಲೆನಾಡು ಗೌಡ. ಒಬ್ಬ ನಟಿ ಅದರಲ್ಲೂ ಸೆಲೆಬ್ರಿಟಿ ಹೇಗೆ ಮನೆ ಮುಕ್ಕ ಗೃಹಿಣಿಯಾಗಲು ಸಾಧ್ಯವಿಲ್ಲವೋ ಹಾಗೇ ಏಕಾಏಕಿ ತನ್ನೆಲ್ಲಾ ಜೀವನ ಶೈಲಿ, ಸಂಪರ್ಕ, ಗ್ಲಾಮರ್ ಮತ್ತು ಮನಸ್ಥಿತಿಯಿಂದ ಹೊರಬರುವುದೂ ಅಸಾಧ್ಯವೆಂಬುದು ಗೊತ್ತಿಲ್ಲ.

ನಿಶ್ಚಿತಾರ್ಥದ ಮರುದಿನದಿಂದಲೇ ತನ್ನ 'ಪಿತ್ರಾರ್ಜಿತ' ಮನಸ್ಥಿತಿಗೆ ಬಿದ್ದು 'ಬೆಳಗ್ಗೆ ಎಲ್ಲಿಗೆ ಹೋಗಿದ್ದೆ? ಏಕೆ ತಡವಾಯಿತು? ಏಕಿನ್ನು ಮನೆಗೆ ಬಂದಿಲ್ಲ? ಯಾರ್‍ಯಾರ ಫೋನ್ ಬಂದಿತ್ತು?' ಇತ್ಯಾದಿ ಅನುಮಾನಕ್ಕೆ ಕೈಯಿಟ್ಟ. ಪೂಜಾಗಿದು ಅಸಹನೀಯವೆನಿಸಿದೆ. ಅದಕ್ಕಿಂತಲೂ ತಾಯಿ ಜ್ಯೋತಿಗಾಂಧಿಯ ತಲೆಕೆಟ್ಟಿದೆ. ಮದುವೆಗೂ ಮೊದಲೇ ಇಷ್ಟೊಂದು ಕಾಟವಾದರೆ ಇನ್ನು ಮದುವೆಯ ನಂತರ ಗತಿಯೇನು ಎಂಬ ಆತಂಕ ಶುರುವಾಗಿದೆ.

ಏಕೆಂದರೆ ತಾಯಿ ಜ್ಯೋತಿಗಾಂಧಿಯ ಲೆಕ್ಕಕ್ಕೆ ಗಂಡ ಎಂಬ ಪ್ರಾಣಿ ಏನಿದ್ದರೂ ಅನುಕೂಲಕ್ಕೊಬ್ಬ ಗಂಡ ಮಾತ್ರ. ಆ ಕಾಲದಿಂದಲೂ ಪೂಜಾಗಾಂಧಿಯ ಮನೆಯ ವಾತಾವರಣವಿರುವುದೇ ಹಾಗೆ. ಗಂಡ ಏನಿದ್ದರೂ ದುಡಿದು ಹಾಕುವ ವಸ್ತು ಮನೆಯ ಪರಿಸ್ಥಿತಿ, ಅಪ್ಪನ ದುರ್ಗತಿ ಎಲ್ಲವನ್ನೂ ನೋಡುತ್ತಲೇ ಬೆಳೆದ ಪೂಜಾಗೆ ತಾಯಿ ಕಲ್ಪಿಸಿದ ಸ್ವೇಚ್ಛೆ ಸೌಕರ್ಯ ಸುಖದ ಮುಂದೆ ಆನಂದನ ಅಂಕೆ ಅಸಹನೀಯವೆನಿಸಿದೆ. ತಾನು ಲೆಕ್ಕ ಹಾಕಿದಷ್ಟು ಆನಂದ್ ಶ್ರೀಮಂತನಲ್ಲ ಎಂಬುದು ಇನ್ನೊಂದು ಕೊರಗಾಗಿದೆ.

ಮೊದಲೇ ಮದುವೆ ಇಷ್ಟವಿಲ್ಲದ ತಾಯಿಗೆ ಇದಕ್ಕಿಂತ ಬೇಕೆ? ಪದೇಪದೇ ಆನಂದನ ಬಿಜಿನೆಸ್ ಬಗ್ಗೆ ತನಿಖೆ ಶುರುವಾಗಿದೆ. ಮನೆಗೆ ಬಂದಾಗಲೆಲ್ಲ ಆತನ ರೂಪ, ಊಟ, ವಸ್ತ್ರ ನಡವಳಿಕೆಗಳ ಬಗ್ಗೆ ಹೀಯಾಳಿಕೆ ತಲೆಎತ್ತಿದೆ. ಈ ಮಧ್ಯೆ ಡಿಸೆಂಬರ್ 18 ರಂದು ಪೂಜಾ ಆನಂದ್ ಜೊತೆಗಿರುವಾಗಲೇ ನಿಗೂಢ ಫೋನ್ ಕರೆಯೊಂದು ಬಂದಿದೆ. ಅದು ಡಾ.ಕಿರಣ್‌ನ ಫೋನಾಗಿತ್ತೆ? ಅಥವಾ ಹಾಗೆಂದು ಆನಂದ್ ತಪ್ಪಾಗಿ ಭಾವಿಸಿಕೊಂಡನೆ?


ಇದು ಆನಂದ್ ಮತ್ತು ಪೂಜಾ ಮಧ್ಯೆ ಅಂತರ ಉಲ್ಬಣಿಸಿದೆ. ಆನಂದ್ ಎದುರಿಗೇ ಪೂಜಾ ತಾಯಿಗೆ ಫೋನ್ ಮಾಡಿ ಇಂಥದೊಂದು ಕರೆ ಬಂದಿದ್ದಕ್ಕೆ ಆತ ಸಿಕ್ಕಾಪಟ್ಟೆ ವಿಚಾರಣೆ ನಡೆಸುತ್ತಾನೆಂದು ದೂರಿದ್ದಾಳೆ. ತಾಯಿಗೆ ಇಷ್ಟೇ ಸಾಕಿತ್ತು. ಮಾರನೇ ದಿನ ಅಂದರೆ ಡಿಸೆಂಬರ್ 19ಕ್ಕೆ ಏಕಾಏಕಿ ಜಯನಗರದ ಆನಂದ್ ಮನೆಗೆ ಹೋಗಿದ್ದೇ "ಇದೆಂಥಾ ಮನೆ? ಇಲ್ಲಿ ನನ್ನ ಮಗಳು ಇರೋಕ್ಕಾಗುತ್ತಾ? ನಿಮ್ಮ ಮನೆಯ ಅನ್ನ ಸಾಂಬಾರ್ ತಿನ್ನಲು ಸಾಧ್ಯವಾ? ನನ್ನ ಮಗಳು ಪ್ರತಿನಿತ್ಯ ತಂದೂರಿ ರೊಟ್ಟೀನೇ ತಿನ್ನೋದು." ಎಂದೆಲ್ಲಾ ಹೀಯಾಳಿಸಿದ್ದಾಳೆ.

ಅಲ್ಲಿಗೆ ಆನಂದನ ತಾಳ್ಮೆಯೂ ಕೆಟ್ಟಿತು. ನಿಶ್ಚಿತಾರ್ಥದ ರಿಂಗ್ ಕೊಟ್ಟು ಬರುವಂತೆ ತನ್ನ ತಂಗಿಯನ್ನು ಕಳಿಸಿಕೊಟ್ಟರೆ ತಾಯಿ ಜ್ಯೋತಿಗಾಂಧಿ ಆಕೆಯನ್ನೂ ವಾಚಾಮಗೋಚರ ಬಯ್ದು ಹೊರಗಟ್ಟಿದ್ದಾಳೆ. ಉಳಿದದ್ದು ಟೀವಿಗಳ ತೆರೆಯ ಮೇಲೆಯೇ.

ರಾಗಿ ಮುದ್ದೆಯೇ ಬೇರೆ. ತಂದೂರಿ ರೊಟ್ಟಿ ಆಲೂ ಮಟರ್‌ನ ರುಚಿಯೇ ಬೇರೆ. ಹಿಂದಿ ಜನರ ಬಣ್ಣದ ಬದುಕು ಮಲೆನಾಡು ಗೌಡರ ಮನೆಗೆ ಹೇಗೆ ಹಿಡಿಸಲು ಸಾಧ್ಯ?

ಪಾಪ, ಪೂಜಾಗಾಂಧಿಗೆ ಹೀಗಾಗಬಾರದಿತ್ತು. ಕನ್ನಡಿಗರಾಗುವ ಆಕೆಯ ಕನಸು ಕನಸಾಗೇ ಉಳಿಯಿತು.

■ ಡಾ.ಸೋಮನಾಥ್



ಕಣ್ಣೀರಿನ ಲಾಭ ಕೆಜೆಪಿಗೆ?

ಪೂಜಾ ಮದುವೆ ಮುರಿದು ಬಿದ್ದಿದ್ದರ ಲಾಭ ಆಕೆಯ ತಾಯಿಗಲ್ಲದೆ ಮತ್ತಾರಿಗಾದರೂ ಆಗುವುದಿದ್ದರೆ ಅದು ಯಡ್ಡಿಯ ಕೆಜೆಪಿ ಕಾರ್ಯಕರ್ತರಿಗೆ ಮಾತ್ರ.

ದಂಡುಪಾಳ್ಯದ ರಾಣಿಯನ್ನು ಮುಂದಿಟ್ಟುಕೊಂಡು ಓಟು ಕೇಳುವ ದುರ್ಗತಿ ಜೆಡಿಎಸ್‌ಗೆ ಬಂದಿದೆಯೆಂಬ ಟೀಕೆಗೆ ಬೇರೆ ಯಾರ್‍ದೇ ಆಗಿದ್ದರೂ ಪೂಜಾಗಾಂಧಿಯನ್ನು ಸಂತೈಸುತ್ತಿದ್ದರು. ಆದರೆ ಕುಮಾರಣ್ಣ ಗಾಯದ ಮೇಲೆ ಬರೆ ಎಳೆದಂತೆ ಪೂಜಾ ವಿರುದ್ಧವೇ ಕುಟುಕಿಬಿಟ್ಟರು. ಜೆಡಿಎಸ್‌ನಲ್ಲಾದ ಅವಮಾನ ಸಹಿಸಲಾರದೆ ಕೆಜೆಪಿಗೆ ಬಂದರೆ ಆಕೆಯ ಮದುವೆಯೇ ಮುರಿದು ಬಿತ್ತು. ಪೂಜಾ ಮತ್ತೆ ಕಣ್ಣೀರಿಡುವಂತಾಯ್ತು.

ಇದರ ಲಾಭ ಕೆಜೆಪಿಗೆ ಆಗುತ್ತದೆಯೆಂಬುದು ಅದರ ಕಾರ್ಯಕರ್ತರ ವಾದ. ಮುಂಬರುವ ಚುನಾವಣೆಯಲ್ಲಿ ಅನಿತಾ ಕುಮಾರಸ್ವಾಮಿಯ ವಿರುದ್ಧವೂ ಭವಾನಿ ರೇವಣ್ಣರ ವಿರುದ್ಧವೋ ಪೂಜಾಗಾಂಧಿಯನ್ನು ನಿಲ್ಲಿಸಿದರೆ ಆಕೆಯ ಕಣ್ಣೀರಿಗಾದರೂ ಮಹಿಳೆಯರು ಸಾರಾಸಗಟು ಓಟು ಹಾಕುತ್ತಾರಂತೆ. ಅನುಕಂಪದ ಅಲೆಯಿಂದಲೇ ಪೂಜಾ ಗೆದ್ದು ಬಿಡುತ್ತಾಳಂತೆ.

ಹಾಗೆಂದು ಕೆಜೆಪಿ ಕಾರ್ಯಕರ್ತರು ಲೆಕ್ಕ ಹಾಕುತ್ತಿದ್ದಾರೆ. ಬಹುಶಃ ಯಡ್ಡಿಗೂ ಇದೇ ಬೇಕಿತ್ತೇನೊ!



ಬಿಜಾಪುರದ ಚೀನಿ ಮಹಲು ಗೊತ್ತೆ?

ಬಿಜಾಪುರದಲ್ಲಿ ಪೊಲೀಸ್ ವರಿಷ್ಠಾಧಿಕಾರಿಗಳಾಗಿದ್ದ ಡಾ. ಡಿ.ಸಿ.ರಾಜಪ್ಪನವರನ್ನು ನೋಡಲು ಹೋಗಿದ್ದಾಗ ಅವರು ವಾಸವಾಗಿದ್ದ ಆದಿಲ್‌ಶಾಹಿ ಕಟ್ಟಡ ಚೀನಿ ಮಹಲ್ ನೋಡಿ ಬೆರಗುಗೊಂಡಿದ್ದೆವು. ಬಾಗಲಕೋಟೆ ರಸ್ತೆಯಲ್ಲಿರುವ ಈ ಕಟ್ಟಡ ಒಂದು ಕಾಲದಲ್ಲಿ- ಅಂದರೆ ಆದಿಲ್‌ಶಾಹಿ ಬಾದಶಹರ ಕಾಲದಲ್ಲಿ- ಅರಮನೆಯ ರಕ್ಷಣೆ ಜವಾಬ್ದಾರಿ ಹೊತ್ತ ಸರದಾರರ ಆವಾಸಸ್ಥಾನವಾಗಿತ್ತು, ಕಿಶ್ವರ್‌ಖಾನ್, ಅಫಜಲ್‌ಖಾನರಂಥ ಸರದಾರರು ಇಲ್ಲಿ ವಾಸವಾಗಿದ್ದರು. ಬಿಜಾಪುರದ ತುಂಬೆಲ್ಲಾ ವಿಶ್ವವಿಖ್ಯಾತ ಗುಮ್ಮಟಗಳುಳ್ಳ ಕಟ್ಟಡಗಳಿದ್ದರೂ ಗುಮ್ಮಟವಿಲ್ಲದ ಅದೇ ಕಾಲದ ಚೀನಿ ಮಹಲ್ ಬಹಳ ವಿಶಿಷ್ಟ ವಿನ್ಯಾಸದಲ್ಲಿದೆ. ಬಾದಶಾಹರ ಕಟ್ಟಡಗಳಿಗೂ, ಸರದಾರರ ಕಟ್ಟಡಗಳಿಗೂ ಇದ್ದಂತಹ ಅಂತರವನ್ನು ಈ ಚೀನಿ ಮಹಲ್ ಎತ್ತಿ ತೋರಿಸಿದೆ. ಆದರೂ ತನ್ನ ಸೌಂದರ್ಯ ಬಿಟ್ಟುಕೊಟ್ಟಿಲ್ಲ.

1686 ರಲ್ಲಿ ಆದಿಲ್‌ಶಾಹಿ ರಾಜ್ಯ ಪತನಗೊಂಡಿತು. ಮೊಗಲ ಬಾದಶಾಹ ಔರಂಗಜೇಬನು ಮತಾಂಧನಾಗಿದ್ದರೂ ಕೂಡ ತನ್ನ ಧರ್ಮದ ರಾಜರ ಬಗ್ಗೆ ಯಾವುದೇ ವಿನಾಯಿತಿ ತೋರದೆ ಬಿಜಾಪುರವನ್ನು ವಶಪಡಿಸಿಕೊಂಡನು. ಪರಿಣಾಮವಾಗಿ ರಾಜಧಾನಿಯಾಗಿದ್ದ ಬಿಜಾಪುರ ನಗರವು ಹೈದರಾಬಾದ್ ಸಭೆಯ ಒಂದು ಭಾಗವಾಯಿತು. ಅದೇ ಸಂದರ್ಭದಲ್ಲಿ ಬಂದ ಪ್ಲೇಗು ಮಾರಿ ಬಿಜಾಪುರವನ್ನು ಗುಡಿಸಿ ಹಾಕಿತು. ಎಲ್ಲಿ ಅಂದರಲ್ಲಿ ಹೆಣಗಳ ರಾಶಿ. ಶವ ಸಂಸ್ಕಾರ ಮಾಡುವವರೂ ದಿಕ್ಕಿಲ್ಲದೆ ಹೋದ ಆ ಸಂದರ್ಭ ಎಂಥವರನ್ನೂ ಬೆಚ್ಚಿಬೀಳಿಸುವಂತದ್ದು. ಸಾಮಾನ್ಯವಾಗಿ ಮಹಾಮಾರಿ ರೋಗಗಳು ಬಂದಾಗ ಅದರ ಬೆನ್ನ ಹಿಂದೆಯೇ ಬರಗಾಲವೂ ಬರುತ್ತದೆ. ಆದ್ದರಿಂದ ಪ್ಲೇಗು, ಬರ ಎರಡೂ ಸೇರಿ ಬಿಜಾಪುರವನ್ನ ಗುಡಿಸಿ ಹಾಕಿತ್ತು.

ಕೆಲವೇ ವರ್ಷಗಳ ಹಿಂದೆ ಭಾರತದ ಮಹಾ ಸಂಗೀತಗಾರರೆಲ್ಲಾ ಬಂದು ಗೋಲಗುಂಬಜ್‌ನಲ್ಲಿ ಸಂಗೀತ ಕಛೇರಿ ನಡೆಸುತ್ತಿದ್ದರು. ಆದಿಲ್‌ಶಾಹಿಗಳು ಸಾಹಿತ್ಯ, ಸಂಗೀತ, ಘಜಲ್ ಮತ್ತು ಕವ್ವಾಲಿಯಲ್ಲಿ ಮುಳುಗೇಳುತ್ತಿದ್ದರು. ಆದರೆ ಔರಂಗಜೇಬ, ಪ್ಲೇಗು ಮತ್ತು ಬರ ಏಕಕಾಲದಲ್ಲಿ ಎರಗಿ ಬಿಜಾಪುರ ನಾಶಗೊಂಡು. ನಂತರ ಬ್ರಿಟಿಷರ ಕಾಲದಲ್ಲಿ ಕಾದಲಗಿ ಜಿಲ್ಲೆಯ ಒಂದು ತಾಲ್ಲೂಕಾಯಿತು.

1848 ರಲ್ಲಿ ಬಂದ ಕ್ಯಾಪ್ಟನ್ ವಿಲ್ಕಿನ್‌ಸನ್ ಎಂಬ ಬ್ರಿಟಿಷ್ ಅಧಿಕಾರಿಯು ಇಲ್ಲಿಯ ಆದಿಲ್‌ಶಾಹಿ ಅವಶೇಷಗಳನ್ನ ನೋಡಿ, "ಇಲ್ಲಿಗೇ ಜಿಲ್ಲಾ ಮುಖ್ಯ ಸ್ಥಳವನ್ನು ಏಕೆ ಬದಲಿಸಬಾರದು" ಎಂದು ತನ್ನ ಮೇಲಿನವರಿಗೆ ವರದಿ ಕೊಟ್ಟನು. ಜೊತೆಗೆ "ಕಡಿಮೆ ಖರ್ಚಿನಲ್ಲಿ ಬ್ರಿಟಿಷರ ಆಡಳಿತಕ್ಕೆ ಬೇಕಾಗಬಹುದಾದ ಸ್ಥಳಗಳು, ಅಧಿಕಾರಿಗಳಿಗೆ ವಾಸಸ್ಥಾನಗಳೆಲ್ಲಾ ದೊರೆಯುತ್ತವೆ" ಎಂದು ವಿವರಿಸಿದನು. ಅಂದಿನ ಬ್ರಿಟಿಷ್ ಅಧಿಕಾರಿಗಳು ಸಮ್ಮತಿಸಿದಾಗ ಇಲ್ಲಿನ ಆಯ್ದ ಕಟ್ಟಡಗಳ ದುರಸ್ತಿ ಪ್ರಾರಂಭವಾಯಿತು.

ಇಂದಿನ ಜಿಲ್ಲಾಧಿಕಾರಿ ಕಚೇರಿಯ ದುರಸ್ತಿಯನ್ನು ಪ್ರಾರಂಭಿಸಿದಾಗ ಅಲ್ಲಿ ಬಹು ಸಂಖ್ಯೆಯಲ್ಲಿದ್ದ ಚೀನಿ ಮಣ್ಣಿನ ಪಾತ್ರೆ ಪಗಡಗಳನ್ನು ಕಂಡ ವಿಲ್ಕಿನ್‌ಸನ್ ಅದನ್ನು ಚೀನಿ ಮಹಲ್ ಎಂದೇ ಕರೆದರು. ಅದರ ಮೂಲ ಹೆಸರು 'ಯುಸೂಫ್ ಮಂಜಿಲ್' ಎಂಬುದು ಅವರಿಗೆ ಗೊತ್ತಿರಲಿಲ್ಲ, ಅವುಗಳನ್ನ ಬೇರೆಡೆ ಇಟ್ಟು ಆಡಳಿತಕ್ಕೆ ಅನುಕೂಲವಾಗುವಂತೆ ಕಟ್ಟಡವನ್ನು ಮಾರ್ಪಡಿಸಬೇಕಾಗಿತ್ತು, ಆದ್ದರಿಂದ ಹತ್ತಿರದಲ್ಲೇ ಇದ್ದ ಚೀನಿ ಮಹಲ್‌ನನ್ನೂ ದುರಸ್ಥಿ ಮಾಡಿದರು. ಮಾಳಿಗೆಗಳು, ಕಿಟಕಿ ಬಾಗಿಲುಗಳನ್ನೆಲ್ಲಾ ದುರಸ್ತಿ ಮಾಡಿ ಅಲ್ಲಿನ ಚೀನಿ ಪಾತ್ರೆಗಳನ್ನೆಲ್ಲಾ ಸಾಗಿಸಿದಾಗ ಚೀನಿ ಮಹಲ್ ಎರಡು ಎಂದು ಹೆಸರಿಟ್ಟರು. ಅದೇ ಹೆಸರು ಇಂದಿನವರೆಗೂ ಮುಂದುವರಿದಿದೆ.


ಆಡಳಿತಕ್ಕೆ ಬೇಕಾಗುವ ಕಟ್ಟಡಗಳ ದುರಸ್ತಿಯಾಯಿತು. ನಂತರ ಇಲ್ಲಿಗೆ ಬರುವ ಅಧಿಕಾರಿಗಳ ವಾಸಸ್ಥಾನಕ್ಕೆ ಕಟ್ಟಡಗಳನ್ನು ಸಿದ್ಧಪಡಿಸತೊಡಗಿದರು. ಅರಮನೆಯ ಆವರಣದಲ್ಲೇ ಇದ್ದ ಅದಾಲತ್ ಮಹಲನ್ನು ಜಿಲ್ಲಾಧಿಕಾರಿಗಳ ನಿವಾಸವೆಂದು ನಿರ್ಧರಿಸಿ ಅದನ್ನು ಸಂಪೂರ್ಣ ಬದಲಿಸಿ ದುರಸ್ತಿ ಮಾಡಿದರು. ಇನ್ನು ಜಿಲ್ಲೆಯ ಎರಡನೇ ಮುಖ್ಯ ಅಧಿಕಾರಿ ಎಂದರೆ ಪೊಲೀಸ್ ಅಧಿಕಾರಿಗಾಗಿ ನಿವಾಸವನ್ನು ಹುಡುಕುತ್ತಿರುವಾಗ ಚೀನಿ ಮಹಲ್‌ಗಿಂತ ಮೋಹಕವಾದ ಸ್ಥಳ ಅವರಿಗೆ ದೊರೆಯಲಿಲ್ಲ, ಆದ್ದರಿಂದ ಚೀನಿ ಮಹಲೇ ಜಿಲ್ಲಾ ಪೊಲೀಸ್ ಅಧಿಕಾರಿಯ ವಾಸಸ್ಥಾನವಾಯಿತು. ಆದರೆ ಈಗಾಗಲೇ ತಂದಿಟ್ಟಿದ್ದ ಚೀನಿ ಪಾತ್ರೆ ಪಡಗಗಳನ್ನು ಆನಂದ ಮಹಲಿನ ಪಕ್ಕದ ಕಟ್ಟಡಕ್ಕೆ ಸಾಗಿಸಿದರು. ಆನಂತರ ಪತನಗೊಂಡ ಸಂಸ್ಥಾನದ ಎಲ್ಲಾ ವಸ್ತುಗಳನ್ನು ಸಂಗ್ರಹಿಸಿ ಗೋಳಗುಮ್ಮಟದ ಎದುರಿನ ನಗರ ಖಾನಾದಲ್ಲಿ ಇಟ್ಟರು. ಅದೇ ಬಿಜಾಪುರದ ಪ್ರಸಿದ್ಧ ವಸ್ತು ಸಂಗ್ರಹಾಲಯವಾಯಿತು.

ಈ ಚೀನಿ ಮಹಲ್‌ನ ವಿಶೇಷವೆಂದರೆ ಇದರ ಒಳ ವಿನ್ಯಾಸ. ಇದು ನಮ್ಮ ಆಧುನಿಕ ಇಂಜಿನಿಯರುಗಳು ದಂಗು ಬಡಿಯುವಂತಹ ತಾಂತ್ರಿಕತೆಯಿಂದ ಕೂಡಿದೆ. 70 ಅಡಿ ಉದ್ದ, 70 ಅಡಿ ಅಗಲದ ಈ ಚೌಕಾಕಾರದ ಕಟ್ಟಡದ ಒಳಗೆ 60 ಅಡಿ ಉದ್ದ, 35 ಅಡಿ ಅಗಲದ ವಿಶಾಲವಾದ ಪಡಸಾಲೆಯಿದೆ. 35 ಅಡಿ ಎತ್ತರದ ಗೋಡೆಗಳ ಮೇಲೆ ಹೂವುಗಳು, ಒಂಬತ್ತು ಕಮಾನುಗಳು, ಈ ಕಮಾನುಗಳು ಸಂಧಿಸುವಲ್ಲಿ ಒಳ ಮೂಲೆಗಳು ಸುಂದರವಾಗಿ ಕಾಣುತ್ತವೆ. ವಿಶಾಲವಾದ ಪಡಸಾಲೆಯಿದ್ದರೂ ಪ್ರತಿಧ್ವನಿಯಾಗುವುದಿಲ್ಲ, ತಮ್ಮ ಮಾತೇ ತಮಗೆ ಕೇಳದಂತಹ ಎಕೋ ಸೃಷ್ಟಿಯ ಕಟ್ಟಡ ನಿರ್ಮಾತೃ ಇಂಜಿನಿಯರುಗಳು ಒಮ್ಮೆ ಹೋಗಿ ಈ ಚೀನಿ ಮಹಲ್ ಅಧ್ಯಯನ ಮಾಡುವುದೊಳ್ಳೆಯದು.

ಒಂಬತ್ತು ಅಂಕಣಗಳ ಪ್ರತಿ ಮಾಳಿಗೆಯೂ ವರ್ತುಲಂಕಾರವಾಗಿ ಸುಂದರ ಕೆತ್ತನೆಯಿಂದ ಅಲಂಕೃತಗೊಂಡಿದೆ. ನಾಲ್ಕು ದಿಕ್ಕುಗಳಲ್ಲಿ ಇದ್ದ ಕಮಾನಾಕಾರದ ಕಿಟಕಿಗಳಿಂದ ಗಾಳಿಬೆಳಕಿನ ಕೊರತೆಯಿಲ್ಲ, ಪಡಸಾಲೆಯ ಮಧ್ಯದ ಮಾಳಿಗೆಯಲ್ಲಿ ವರ್ತುಲಾಕಾರವಾಗಿ ಬಿಟ್ಟ ಬಹುದೊಡ್ಡ ಎತ್ತರದ ಕಿಂಡಿಯಿಂದಾಗಿ, ಹೊರಗೆ ಬಿಜಾಪುರ ಬಿಸಿಲಿನಿಂದ ರಣಗುಡುತ್ತಿದ್ದರೆ ಈ ಕಟ್ಟಡದೊಳಗೆ ಹವಾ ನಿಯಂತ್ರಣದ ವಾತಾವರಣವಿರುತ್ತದೆ. ಅದಕ್ಕೆ ಇಲ್ಲಿಗೆ ಬಂದ ಅಧಿಕಾರಿಗಳು ಬಿಸಿಲಿಗೆ ತಲೆಕೆಡಿಸಿಕೊಳ್ಳದೆ ತಣ್ಣಗೆ ಬದುಕಿ ಹೋಗಿರುವ ದಾಖಲೆ ಸಿಗುತ್ತದೆ.

ಕ್ರಿ.ಶ. 1885 ರಲ್ಲಿ ಬಿಜಾಪುರ ಜಿಲ್ಲಾ ಕೇಂದ್ರವಾದಾಗ ಮೊಟ್ಟ ಮೊದಲ ಬಾರಿಗೆ ಇಲ್ಲಿಗೆ ಬಂದ ಪೊಲೀಸ್ ಅಧಿಕಾರಿಯ ಹೆಸರು ಅಳಿಸಿಹೋಗಿದೆ. ಆದರೆ 1899 ರಿಂದ 2010 ರವರೆಗೆ ಈ ಚೀನಿ ಮಹಲಿನಲ್ಲಿದ್ದು ಆಡಳಿತ ನಡೆಸಿದ ಜಿಲ್ಲಾ ಪೊಲೀಸ್ ಅಧಿಕಾರಿಗಳ ಸಂಖ್ಯೆ 88. ಈ ಪೈಕಿ ಚೀನಿ ಮಹಲ್‌ನ ಮಹತ್ವ ಮತ್ತು ಇತಿಹಾಸವನ್ನು ಅರಿತ ಕೆಲವರು ಸಣ್ಣಪುಟ್ಟ ರಿಪೇರಿ ಕಾರ್ಯಗಳನ್ನು ಮಾಡುತ್ತಲೇ ಬಂದಿದ್ದಾರೆ. ಕೆಲವರು ಗಿಡಮರಗಳನ್ನು ಬೆಳೆಸಿದ್ದಾರೆ. ಈ ಚೀನಿ ಮಹಲ್ ಹಲವಾರು ಜನ ಅಧಿಕಾರಿಗಳಿಗೆ ಒಳ್ಳೆಯ ನೆನಪುಗಳನ್ನು ತುಂಬಿದೆ. ಹಾಗೆಯೇ, ಇದರೊಳಗಿದ್ದು ಆಡಳಿತ ಮಾಡಿದ ಜನ ಆದಿಲಶಾಹಿ ಕಾಲದಲ್ಲೇ ವಿಹರಿಸುತ್ತ ರಾಜರ ಕಾಲದ ಗತ್ತಿನಲ್ಲೇ ಕಾಲ ಹಾಕಿದ ಉದಾಹರಣೆಗಳೂ ಇವೆ. ಈ ಹಿಂದೆ ಇಲ್ಲಿ ಪೊಲೀಸ್ ವರಿಷ್ಠರಾಗಿದ್ದಂತಹ ಡಬ್ಲ್ಯು.ಡಬ್ಲ್ಯು. ಚಿಫರ್ಡ್ ಎಂಬ ಬ್ರಿಟಿಷ್ ಅಧಿಕಾರಿಯ ಮಗ, ಯಾವುದೊ ದೇಶದಿಂದ ಬಂದು 1930 ರ ತನ್ನ ಬಾಲ್ಯದ ತಾಣವನ್ನ ಹುಡುಕಿ ಕಣ್ತುಂಬಿಕೊಂಡು ಹೋಗಿದ್ದಾನೆ. ನಮ್ಮ ರಾಜ್ಯದ ಹೆಸರಾಂತ ಪೊಲೀಸ್ ಅಧಿಕಾರಿಗಳೆಲ್ಲಾ ಈ ಬಾದಶಹನ ಚೀನಿ ಮಹಲ್‌ನಲ್ಲಿದ್ದು ಹೋಗಿದ್ದಾರೆ. ಈ ಪೈಕಿ ಕೆಲವರು ಸುಮ್ಮನೆ ಬದುಕಿಹೋಗಿದ್ದರೆ ಮತ್ತೆ ಕೆಲವರು ಈ ಚೀನಿ ಮಹಲನ್ನ ಮತ್ತಷ್ಟು ಶೃಂಗರಿಸಿ ಹೋಗಿದ್ದಾರೆ.

2010 ರಲ್ಲಿ ಬಂದ ಡಿ.ಸಿ.ರಾಜಪ್ಪನವರು ಕಟ್ಟಡದ ಸುತ್ತಲೂ ಇರುವ ಕಾಂಪೌಂಡ್ ಗೋಡೆಯನ್ನು ಮೂರು ಅಡಿ ಎತ್ತರಿಸಿದರು. ಟೆನ್ನಿಸ್ ಕೋರ್ಟಿಗೆ ಎಲ್ ಆಕಾರದಲ್ಲಿ ಗೋಡೆಯ ಮೇಲೆ ತಂತಿಜಾಲರನ್ನು ಅಳವಡಿಸಿದರು. ಟೆನಿಸ್ ಕೋರ್ಟಲ್ಲಿ ನೀರನ್ನು ಸಂಗ್ರಹಿಸಲು ಎರಡು ತೊಟ್ಟಿಗಳನ್ನು ನಿರ್ಮಿಸಿ, ಪೂರ್ವ ದಿಕ್ಕಿನಲ್ಲಿ 15 ಅಡಿ ಉದ್ದ, 15 ಅಡಿ ಅಗಲದ ಎರಡು ಕೋಣೆಗಳನ್ನು ಕಟ್ಟಿಸಿದ್ದಾರೆ. ಅದರಲ್ಲಿ ಕಟ್ಟಡದ ಒಳಗಿನ ನಿರುಪಯುಕ್ತ ವಸ್ತುಗಳನ್ನ ಇಡಲು ಅನುಕೂಲವಾಗಿದೆ. ದಕ್ಷಿಣ ದಿಕ್ಕಿನ ಅಂಗಳದಲ್ಲಿ 200 ಸಾಗುವಾನಿ ಗಿಡಗಳನ್ನು ನೆಟ್ಟಿದ್ದಲ್ಲದೆ 50 ಅಶೋಕ ಮರಗಳನ್ನು, 10 ನಿಂಬೆ ಹಾಗು ಬಾಳೆ ಗಿಡಗಳನ್ನು ಬೆಳೆಸಿದ್ದಾರೆ. ಕಟ್ಟಡದ ಮೇಲ್ಭಾಗದಲ್ಲಿ ಬಿದ್ದು ಹೋಗಿದ್ದ ಮೇಲ್ಛಾವಣಿಯನ್ನು ದುರಸ್ಥಿ ಮಾಡಿಸಿ ಗಚ್ಚಿನ ಗಾರೆ ಸುಣ್ಣ ಹಚ್ಚಿಸಿದಾರೆ. ಜೊತೆಗೆ ಕಟ್ಟಡದ ಒಳ ಹೊರಗೆ ಸಂಪೂರ್ಣವಾಗಿ ವಾತಾನುಕೂಲ (ಅಪೆಕ್ಸ್) ಬಣ್ಣವನ್ನು ಹಚ್ಚಿಸಿ, ಹಳೆ ಭಾವಿಯನ್ನು ಮುಚ್ಚಿಸಿ, ಸುಂದರವಾದ ಈಜುಕೊಳವನ್ನು ನಿರ್ಮಿಸಿದ್ದಾರೆ. ಸುಮಾರು 350 ವರ್ಷಗಳಷ್ಟು ಹಳೆಯದಾದ ಈ ಕಟ್ಟಡ ನವನವೀನವಾಗಿ ಶೃಂಗಾರಗೊಂಡಿದೆ. ಒಮ್ಮೆ ನಮ್ಮ ಕಟ್ಟೆ ಪುರಾಣದ




ಪಾತ್ರಧಾರಿಗಳು ಬೇರೆಲ್ಲೂ ಹೋಗದೆ ಚೀನಿ ಮಹಲ್‌ನಲ್ಲೇ ಉಳಿದು, ನಾಟಕ ಮುಗಿದನಂತರ ಸ್ವಿಮ್ಮಿಂಗ್ ಪೂಲ್ ಸುತ್ತ ಕುಳಿತು ಪಾರ್ಟಿ ಮಾಡಿ ಬಂದರು. ನಾವಷ್ಟೇ ಅಲ್ಲ ಶಿವಮೊಗ್ಗದ ಬಹಳಷ್ಟು ಜನ ಬಿಜಾಪುರಕ್ಕೆ ಹೋದಾಗಲೆಲ್ಲಾ ಬಿಜಾಪುರದ ಆಧುನಿಕ ಆದಿಲಶಾಹಿಗಳ ಆತಿಥ್ಯವನ್ನು ಕಂಠಪೂರ್ತಿ ಅನುಭವಿಸಿ ಬಂದಿದ್ದಾರೆ.

ಇತ್ತೀಚೆಗೆ ಪೊಲೀಸ್ ಕಮಾಂಡೆಂಟ್ ಗಂಗಾಧರಪ್ಪನವರು ತಮ್ಮ ಕವನ ಸಂಕಲನ 'ಬಯಲಗಾಳಿ' ಬಿಡುಗಡೆಗೆ ನಮ್ಮ ನಾಟಕವನ್ನು ಕರೆಸಿದ್ದರು. ಆದರೆ ನಾವು ಬಿಜಾಪುರಕ್ಕೆ ಹೋಗಿದ್ದಾಗ ಈ ಚೀನಿ ಮಹಲಿನ ಗೇಟು ಬಂದಾಗಿತ್ತು, ಏಕೆಂದರೆ ರಾಜಪ್ಪನವರಿಗೆ ವರ್ಗವಾಗಿ ಅಲ್ಲಿ ಬೇರೊಬ್ಬ ಅಧಿಕಾರಿ ಇದ್ದರು. ಅವರು ನಮ್ಮವರಲ್ಲದ ಕಾರಣ ಚೀನಿ ಮಹಲು ಎಸ್ಪಿ ಮನೆಯ ಗತ್ತಿನಿಂದ ಕಂಗೊಳಿಸಿತು. ನಿರಾಶೆಗೊಂಡ ನಾವು "ಏನೇ ಆಗಲಿ, ಬಿಜಾಪುರದ ಗೋಲಗುಂಬಜ್, ಇಬ್ರಾಹಿಂ ರೋಜಾ ತರದಲ್ಲೋ ಎಸ್ಪಿ ಡಿಸಿ ಮನೆಗಳೂ ಪ್ರವಾಸಿಗರ ತಾಣವಾಗಬೇಕೆ ಹೊರತು ಅಧಿಕಾರಿಗಳ ದರ್ಪದ ತಾಣವಾಗಬಾರದು. ಆದಿಲಶಾಹಿಗಳು ಕಟ್ಟಿಸಿದ ಮಹಲುಗಳಲ್ಲಿ ಅಧಿಕಾರಿಗಳಿರುವುದು ಸರಿಯಲ್ಲ. ಬೇಕಿದ್ದರೆ ಜಿಲ್ಲಾ ಉಸ್ತುವಾರಿ ಮಂತ್ರಿಗಳಿರಲಿ" ಎಂಬ ಚರ್ಚೆಯೊಂದಿಗೆ ವಾಪಸು ಬಂದೆವು!

■ ಬಿ.ಚಂದ್ರೇಗೌಡ

ಕ್ಷಮಯಾ ಧರಿತ್ರಿ



ಕ್ಷಮಯಾ ಧರಿತ್ರಿ ಎಂದೊಡನೆ
ಕಿವಿ ಮುಂದುಮಾಡುವ ನಿನಗೆ
ಹಗಲುಗುರುಡು

ನಿನ್ನ ಎದೆಯ ಸುಧೆ ಅಮೃತ
ಎಂದುಬ್ಬಿಸಿದರೂ, ತ್ರಿಮೂರ್ತಿಗಳೇ
ನಿನ್ನ ಬೆತ್ತಲ ಬಯಸಿದ್ದು ನೆನಪಿರಲಿ

ಸೃಷ್ಟಿಯ ಯಾವ ಹೆಣ್ಣ ಎದೆಯಲ್ಲಿ
ವಿಷ ಉಕ್ಕಿದೆ ಹೇಳು? ರಕ್ತದಂಬಲ
ಕೈಸಪಡಲಿ ಮರೆಯದಿರು

ನಿನ್ನ ಗರ್ಭದೊಳಗೇ ರೂಪುಗೊಂಡು
ಜಗಕಂಡ ಮೇಲೆ, ಪದ್ಮಿನಿ, ಹಸ್ತಿನಿ
ಎನುವ ಕಾಮುಕತೆ ನೋಡು

ಮಾರುವೇಷದಿ ಬಂದು, ಮೈಸುಖ ಉಂಡು
ಕಾಡಿನಲಿ ಕಲ್ಲಾಗು, ಅಂಗಳದ ಗಿಡವಾಗು
ಎಂದರಸುವ ಪರಿಯನರಿ

ನೀನೆ ನೆಲ, ಜಲ, ವನ, ಶಕ್ತಿ ಲಕ್ಷ್ಮಿ
ಕೋಮಲೆ, ಚಂದಿರೆ, ಸುಂದರಿ
ಎಂದೊಡನೆ ಉಬ್ಬುವುದ ಬಿಡು

ಹೆತ್ತುಕೊಡುವ ಯಂತ್ರವಾಗಿಸಿ
ಫಲ ಕಿತ್ತುಕೊಳುವ ಪರಿಯ
ಪರಾಂಬರಿಸು

ಬೀಜದ ಹಕ್ಕು ಸಾಧಿಸಿ
ಹೆತ್ತ ಮಗಳನು ಪರಿಗ್ರಹಿಸಿದವ
ಪರಬೊಮ್ಮ! ತಿಳಿ

ಮೂರು ಜಗದ ಪ್ರಸಿದ್ಧಿಗೆ
ಕಾಡಿಗೆ ನಡೆದುದಾಣತಿ
ಹೆತ್ತುದಷ್ಟೇ ನಿನ್ನ ಕೀರುತಿ

ಜಗದೇಕವೀರರು ಒಂಟಿ ಹೆಣ್ಣಿಗೆ
ಗಂಟು ಬಿದ್ದುದಲ್ಲದೆ, ಮತ್ತೊಬ್ಬನಲೂ
ಅವಳಿಗಾಸೆಯೆಂದು ಕುಹಕವಾಡಿದ್ದ ನೆನೆ

ಪತಿ ಪರದೈವವೆಂದು ತಪಗೈದ ನಿನಗೆ
ಅಗ್ನಿ ಪರೀಕ್ಷೆಯೇ ಗತಿ, ದಶಶಿರನ ಹತಿ
ಅಪನಿಂದೆಗಂಜಿ ಎಂದ ಪತಿ!

'ಪತಿವ್ರತ' ನಿನಗೆಳೆದ ಮೂಗುದಾರ
ಕುರುಹೆಲ್ಲಿದೆ? ಸತಿಯೊಡನೆ
ಸಹಗಮಿಸಿದ ಸರದಾರ

ಕಾಮ ಕೆರಳಲವರು ನಿನ್ನ ತೇರು
ತಂಬೂರ ಭಜಿಪರು, ನೀನಂಗಲಾಚಿದರೆ
ಮೂಗು ಮುಂದಲೆ ಕೊಯ್ವರು

ಉಳಿವೆಲ್ಲದೆ ಹಸುಳೆ, ತರಳೆ ಗರತಿಗೆ
ಕೀಚಕರದೇ ಕೇಕೆಯು ಅನುರಣಿಸಿದೆ
ಅದ ಮಣಿಸುವ ಎಂಟೆದೆ ಯಾರಲ್ಲಿದೆ

ಬರಿದೆ ತಲೆಕೊಡದಿರು ಸಂಪ್ರದಾಯದ
ಉರುಳಿಗೆ ನೀನಿಲ್ಲದ ಜಗಕೆಲ್ಲಿದೆ
ಏಳಿಗೆ?

■ ಕೆ.ಎಂ.ಗಂಗಾಧರಪ್ಪ, ಬಿಜಾಪುರ


ಮಂಗಳೂರಿನಲ್ಲಿ ಭಯೋತ್ಪಾದಕರ್‍ಯಾರು?



ಕಬೀರ್

ಮಂಗಳೂರಿನಲ್ಲಿ ಕೇಸರಿ ಪಡೆಯ ಅಟ್ಟಹಾಸ, ...ರ್ಷನ್ನಗಳು ಈಗ ಜಗಜ್ಜಾಹೀರಾಗಿ ಹೋಗಿದೆ. ಕೇಸರಿಗಳ ...ತೆಜೊತೆಗೆ ಖಾಕಿ ಪಡೆಯೂ ಸಾರ್ವಜನಿಕರ ಮೇಲೆ ...ಗಿಬಿದ್ದಿರುವುದು ಮಂಗಳೂರು ನಾಗರಿಕರ ದೌರ್ಭಾಗ್ಯವೇ ... ತಮ್ಮ ಹಲಾಲುಕೋರ ದಂಧೆಗಳನ್ನು ಪ್ರಶ್ನಿಸುವ ...ರ್ಯ ತೋರಿದವರಿಗೆ "ಭಯೋತ್ಪಾದಕ" ಎಂಬ ...ಪಟ್ಟ ಹಚ್ಚಿ ಮಟ್ಟಹಾಕಲು ಇಲ್ಲಿ ಭಾರೀ ...ತ್ರವೊಂದು ಸದ್ದಿಲ್ಲದೆ ರೂಪುಗೊಂಡಿದೆ.

ಈ ಘನ ಉದ್ದೇಶ ಸಾಧನೆಗಾಗಿ 'ಶೇಕ್ ಇಸಾಕ್, ...ಗಳೂರು' ಎಂಬ ನಾಮಾಂಕಿತವುಳ್ಳ ವ್ಯಕ್ತಿಯೊಬ್ಬ ...ಟ್ಟಿಕೊಂಡಿದ್ದಾನೆ. ವಿಳಾಸ, ಕುಲ, ಗೋತ್ರಗಳಿಲ್ಲದ ಈ ...ಮಿ ಒಂದು ಸ್ಪೆಷಲ್ ಕಂಪ್ಲೈಂಟ್ ಲೆಟರನ್ನು ನೇರವಾಗಿ ...ಲೀಸ್ ಮಹಾ ನಿರ್ದೇಶಕರಿಗೆ ಕಳಿಸಿದ್ದಾನೆ. ಅಷ್ಟು ...ತ್ರವಲ್ಲ. ಎಡಿಜಿಪಿ ಲಾ ಅಂಡ್ ಆರ್ಡರ್, ಎಡಿಜಿಪಿ ...ರ್, ಎಡಿಜಿಪಿ ಲೋಕಾಯುಕ್ತ, ಮಾನವ ಹಕ್ಕುಗಳ ...ೋಗದ ಅಧ್ಯಕ್ಷರು, ಮಂಗಳೂರು ಪೊಲೀಸ್ ...ಷನರ್, ದಕ್ಷಿಣ ಕನ್ನಡ ಎಸ್.ಪಿ. ಹೀಗೆ ಒಟ್ಟು 15 ...ದಿಗೆ ಇದರ ಪ್ರತಿಗಳು ರವಾನೆಯಾಗಿವೆ. ಈ ಪತ್ರದ ...ಂಶ ಹೀಗಿದೆ.





...ವಿಷಯ: ಪೊಲೀಸ್ ಅಧಿಕಾರಿಗಳ ವಿರುದ್ಧ ಸುಳ್ಳು ...ು ನೀಡಲು ಕುತಂತ್ರ

... ಮಂಗಳೂರಿನ ಸಮೀಪದಲ್ಲಿರುವ ಉಳ್ಳಾಲದಲ್ಲಿ ...ರ್ ಎಂಬುವವನೊಬ್ಬನಿದ್ದು, ಆತನು ಪಿಯುಸಿಎಲ್ ... ಒಂದು ಸಂಸ್ಥೆಯ ಸದಸ್ಯನಾಗಿರುತ್ತಾನೆ. ಈ ಸಂಸ್ಥೆಯು ...ು, ಭಯೋತ್ಪಾದಕರು ಮತ್ತು ಸಮಾಜದ್ರೋಹಿಗಳಿಗೆ ...ವ ಹಕ್ಕುಗಳ ಹೆಸರಿನಲ್ಲಿ ನಿರಂತರವಾಗಿ ಬೆಂಬಲವನ್ನು ನೀಡುತ್ತಾ ಬಂದಿದೆ. ಈ ಸಂಸ್ಥೆಯ ಸದಸ್ಯನಾದ ಕಬೀರ್ ಮಾನವ ಹಕ್ಕುಗಳ ಹೆಸರಿನಲ್ಲಿ ಇಂಡಿಯನ್ ಮುಜಾಹಿದ್ದೀನ್ ಎಂಬ ಭಯೋತ್ಪಾದನಾ ಸಂಸ್ಥೆಯ ಸದಸ್ಯರುಗಳಿಗೆ .... ಜಾಮೀನು ಕೊಡಿಸುವಲ್ಲಿ ಸಫಲನಾಗಿದ್ದಾನೆ. .... ರೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದಾನೆ. ಉಳ್ಳಾಲ ಪೊಲೀಸ್ ಠಾಣೆಗೆ ಬರುವ ಮುಸ್ಲಿಂರ ಪ್ರತಿಯೊಂದು ದೂರುಗಳಲ್ಲಿಯೂ ಹಸ್ತಕ್ಷೇಪ ಮಾಡಿ ಪೊಲೀಸರಿಗೆ ಹಣ ನೀಡಬೇಕೆಂದು ಹೇಳಿ ಅವರಿಂದ ಹಣ ವಸೂಲಿ ಮಾಡುತ್ತಾನೆ....

ಇವನ ಅವ್ಯವಹಾರಗಳನ್ನು ನೋಡಿದ ಹಲವಾರು ಜನ ಮುಸ್ಲಿಂರೇ ಈತನಿಗೆ ವಿರೋಧಿಗಳಾಗಿದ್ದು ಈತನ ಕೈಕಾಲುಗಳನ್ನು ಮುರಿಯಬೇಕೆಂದು ಉದ್ದೇಶ ಮಾಡಿದ್ದಾರೆ. ಇದನ್ನು ತಿಳಿದ ಈತನು ತಾನೊಬ್ಬ ಮಾನವ ಹಕ್ಕು ಹೋರಾಟಗಾರನೆಂದು ಬಿಂಬಿಸಿಕೊಳ್ಳುವ ಸಲುವಾಗಿ ಹೊಸ ತಂತ್ರವೊಂದನ್ನು ರೂಪಿಸಿದ್ದಾನೆ. ಅದೇನೆಂದರೆ ತನಗೆ ಯಾರಾದರೂ ಹಲ್ಲೆ ಮಾಡಿದರೆ ಅದನ್ನು ಪೊಲೀಸ್ ಅಧಿಕಾರಿಗಳ ತಲೆಗೆ ಕಟ್ಟಬೇಕೆಂದು, ಆ ಮೂಲಕ ಅವರನ್ನು ಕೆಲಸ ಮಾಡಲು ಬಿಡಬಾರದೆಂದು ಷಡ್ಯಂತ್ರ ರೂಪಿಸಿದ್ದಾನೆ. ಡಿಐಎಸ್‌ಪಿ ಜಯಂತ ಶೆಟ್ಟಿ, ಇನ್ಸ್‌ಪೆಕ್ಟರ್ ವೆಂಕಟೇಶ ಪ್ರಸನ್ನ, ಕೊಣಾಜೆ ಸಬ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್, ಮೊದಲು ಉಳ್ಳಾಲದಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಶಾಮಸುಂದರ್ ಇವರು ನಾಲ್ಕು ಜನರು ಸೇರಿ ತನ್ನನ್ನು ಕೊಲ್ಲಲು ಸಂಚು ರೂಪಿಸಿದ್ದಾರೆಂದು ಪೊಲೀಸ್ ಅಧಿಕಾರಿಗಳಿಗೆ ಒಂದು ಸುಳ್ಳು ದೂರನ್ನು ನೀಡಲು ತಯಾರಿ ನಡೆಸಿದ್ದಾನೆ.

ಮುಂದೊಂದು ದಿನ ಈತನ ಅನಾಚಾರಗಳನ್ನು ನೋಡಿ ಈತನಿಗೆ ಯಾರೇ ಹಲ್ಲೆ ನಡೆಸಿದರೂ ಅದನ್ನು ಪೊಲೀಸರ ತಲೆಗೆ ಕಟ್ಟಲು ಈತನು ತಂತ್ರ ರೂಪಿಸಿದ್ದಾನೆ. ಆದ್ದರಿಂದ ಪೊಲೀಸ್ ಇಲಾಖೆ ಎಚ್ಚರದಿಂದ ಇರಬೇಕೆಂದು ಕೋರುತ್ತೇನೆ."


ಈ ಪತ್ರವನ್ನು ಸ್ವಲ್ಪ ಬದಿಗಿಟ್ಟು ಇದರ ಹಿನ್ನೆಲೆಯನ್ನು ಪರಿಶೀಲಿಸೋಣ.

ಕಬೀರ್ ಕಳೆದ ಹತ್ತು ವರ್ಷಗಳಿಂದಲೂ ಪಿಯುಸಿಎಲ್ ಸಂಘಟನೆಯ ಸಕ್ರಿಯ ಸದಸ್ಯ. ಆ ಸಂಘಟನೆಯ ಉಪಾಧ್ಯಕ್ಷರಾಗಿ ನಾನಾ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು ಅಧಿಕಾರಿಗಳ ಭ್ರಷ್ಟಾಚಾರ, ಅವ್ಯವಹಾರಗಳನ್ನು ಬಯಲಿಗೆಳೆಯುತ್ತಾ ಬಂದಿದ್ದಾರೆ. ಅದರ ಭಾಗವಾಗಿಯೇ ಪೊಲೀಸರು ಅಮಾಯಕರನ್ನು ಬಂಧಿಸುವುದು, ಹಣ ವಸೂಲಿ ಮಾಡುವುದರ ವಿರುದ್ಧವೂ ಹಲವಾರು ಬಾರಿ ಹೋರಾಟಗಳನ್ನು ಸಂಘಟಿಸುತ್ತಾ ಬಂದಿದ್ದಾರೆ. ಕೆಲ ಉದಾಹರಣೆಗಳನ್ನು ನೋಡುವುದಾದರೆ 2006ರಲ್ಲಿ ಮಂಗಳೂರಿನಲ್ಲಿ ಕೋಮುಗಲಭೆ ಪ್ರಾರಂಭವಾದ ಕೂಡಲೆ ಜಿಲ್ಲಾ ಎಸ್‌ಪಿ ಹಾಗೂ ಅಂದಿನ ಉಸ್ತುವಾರಿ ಸಚಿವ ರಮಾನಾಥ್ ರೈ ಅವರ ಗಮನಕ್ಕೆ ತಂದು ಗಲಭೆಯನ್ನು ನಿಯಂತ್ರಿಸಿ ಶಾಂತಿ ಕಾಪಾಡಬೇಕೆಂದು ಬೇಡಿಕೊಳಿದರು.

ಆದರೆ ಪೊಲೀಸರು ಮಾಡಿದ್ದು ಮಾತ್ರ ಶುದ್ಧ ಕಾನೂನು ಬಾಹಿರ ನಡವಳಿಕೆ. ಕೈಗೆ ಸಿಕ್ಕಸಿಕ್ಕ ಸುಮಾರು ಇನ್ನೂರು



ಮಂದಿಯನ್ನು ಬಂಧಿಸಿದರು. ಅದರಲ್ಲಿ ಹಿಂದೂಗಳು ಮುಸ್ಲಿಮರು ಎಲ್ಲರು ಇದ್ದರೂ ಬಹುಪಾಲು ಮಂದಿ ನಿರಪರಾಧಿಗಳಾಗಿದ್ದರು. ಗಲಭೆ ಹುಟ್ಟುಹಾಕಿದ ಪ್ರಭಾವಿ ವ್ಯಕ್ತಿಗಳನ್ನು ಬಿಟ್ಟು ಅಮಾಯಕರನ್ನು ಶಿಕ್ಷಿಸಹೊರಟ ಪೊಲೀಸ್ ಕ್ರಮವನ್ನು ಪ್ರಶ್ನಿಸಿದ ಫಲವಾಗಿ ಪೊಲೀಸರು ಕಬೀರ್‌ರನ್ನೂ ಬಂಧಿಸಿ ಕೇಸು ಜಡಿದರು.



ಈ ಅನ್ಯಾಯದ ವಿರುದ್ಧ ಮೇಲಾಧಿಕಾರಿಗಳಿಗೆ ದೂರು ನೀಡಿದ ಕಬೀರ್ ಮನೆಗೆ ರಾತ್ರಿ 2.15ರ ವೇಳೆಗೆ ನುಗ್ಗಿದ ಪೊಲೀಸರು ಮನಬಂದಂತೆ ಥಳಿಸಿದರು. ಪೊಲೀಸ್ ಅಟ್ಟಹಾಸದಲ್ಲಿ ಕಬೀರ್ ಅವರ ಕೈಬೆರಳುಗಳು ಮುರಿದಿವೆ. ನಂತರ ಕೋಮು ಗಲಭೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಬಳ್ಳಾರಿ ಜೈಲಿಗೆ ಕಳಿಸಿದರು.



ಈ ಪೊಲೀಸ್ ದೌರ್ಜನ್ಯದ ವಿರುದ್ಧ ಕಬೀರ್ ಕಾನೂನು ಹೋರಾಟಕ್ಕಿಳಿದಿದ್ದಾರೆ. ಕಬೀರ್ ನೀಡಿದ ಖಾಸಗಿ ದೂರಿನ ಸತ್ಯಾಸತ್ಯತೆಯನ್ನು ಪರಿಗಣಿಸಿದ ಹೈಕೋರ್ಟ್ ಎಫ್‌ಐಆರ್ ದಾಖಲಿಸಿಕೊಂಡು ಆರೋಪಿತ ಅಧಿಕಾರಿಗಳಾದ ಜಯಂತ್ ಶೆಟ್ಟಿ, ಶಿವಪ್ರಕಾಶ್ ಮುಂತಾದವರಿಗೆ ಸಮನ್ಸ್ ಜಾರಿ ಮಾಡಿದೆ.

ತಮ್ಮ ಅನಾಚಾರಗಳನ್ನು ಪ್ರಶ್ನಿಸುತ್ತಿದ್ದ ಕಬೀರ್‌ಗೆ ಪಾಠ ಕಲಿಸಲು ಎಸ್‌ಐ ಶಿವಪ್ರಕಾಶ್ ಮತ್ತೊಂದು ತಂತ್ರ ಹೂಡಿದರು. ಗಂಡಹೆಂಡಿರ ಜಗಳದ ಪ್ರಕರಣವೊಂದರಲ್ಲಿ ತನ್ನ ಮಕ್ಕಳನ್ನು ಕಬೀರ್ ಕಿಡ್ನಾಪ್ ಮಾಡಿದ್ದಾನೆ ಎಂಬ ಸುಳ್ಳು ಕಂಪ್ಲೈಂಟ್ ಪಡೆದು ಪೊಲೀಸ್ ಠಾಣೆಯಲ್ಲಿ ಕೂಡಿ ಹಾಕಿದ. ಈ ಅನ್ಯಾಯ ಕೆಲವು ಪೊಲೀಸ್ ಪೇದೆಗಳಿಂದಲೇ ಪತ್ರಕರ್ತರ ಗಮನಕ್ಕೆ ಬಂದು ಪತ್ರಕರ್ತರು ಠಾಣೆಯ ಮುಂದುಗಡೆ ಧರಣಿ ಮಾಡಲು ಮುಂದಾಗಿದ್ದರಿಂದ ಕಬೀರ್ ಅವರಿಗೆ ಬಿಡುಗಡೆ ಸಿಕ್ಕಿತು.

ಕೊನೆಗೆ ಹತಾಶರಾದ ಪೊಲೀಸರು ಕೇಸುಗಳಲ್ಲಿ ಸಿಕ್ಕಿಬೀಳುವ ರೌಡಿಗಳಿಗೆ ಕಬೀರ್‌ರನ್ನು ಕೊಲೆ ಮಾಡಿ ಬಂದರೆ ನಿಮಗೆ ಯಾವುದೇ ಸಮಸ್ಯೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ, ಜೊತೆಗೆ ಎರಡು ಲಕ್ಷ ಹಣ ಕೂಡ ಕೊಡುತ್ತೇವೆ ಎಂದು ಸುಪಾರಿ ಕೊಡಲು ಪ್ರಯತ್ನಿಸಿದ ವಿಷಯವನ್ನು ಆ ರೌಡಿಗಳೇ ಒಪ್ಪಿಕೊಂಡಿದ್ದಾರೆಂಬ ಅಂಶವನ್ನು ಕಬೀರ್ ತಮ್ಮ ಖಾಸಗಿ ಕಂಪ್ಲೈಂಟ್‌ನಲ್ಲಿ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.

ಇಷ್ಟು ಮಾತ್ರವಲ್ಲದೆ ಈಗಿನ ಡಿವೈಎಸ್‌ಪಿ ಜಯಂತ ಶೆಟ್ಟಿ ತನ್ನ ಬಂಧುವಿನ ಹೆಸರಿನಲ್ಲಿ ಉಳ್ಳಾಲ ಸಮೀಪದ ಕಡಲ ಕಿನಾರೆಯ ಸರ್ಕಾರಿ ಜಾಗದಲ್ಲಿ ಕಾನೂನುಬಾಹಿರವಾಗಿ ಐಷಾರಾಮಿ ಗೆಸ್ಟ್‌ಹೌಸ್ ನಿರ್ಮಿಸಿದ್ದಾನೆಂದು ದೂರು ನೀಡಿರುವ ಕಬೀರ್ ಈ ಬಗ್ಗೆ ತನಿಖೆಯಾಗಬೇಕೆಂದು ಹೋರಾಟ ನಡೆಸಿದ್ದಾರೆ. ಅಮಾಯಕರ ಮೇಲೆ ಪೊಲೀಸ್ ದೌರ್ಜನ್ಯ ನಡೆದ ಹಲವಾರು ಸಂದರ್ಭಗಳಲ್ಲಿ ಮಾನವಹಕ್ಕು ಆಯೋಗ ಅಥವಾ ಕೋರ್ಟ್‌ಗಳ ಗಮನಕ್ಕೆ ತಂದಿರುವುದಲ್ಲದೆ ಸಾರ್ವಜನಿಕ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನೂ ರೂಪಿಸುತ್ತಿದ್ದಾರೆ.

ಈ ಎಲ್ಲಾ ಹಿನ್ನೆಲೆಯಲ್ಲಿ ತಮ್ಮ ಹಾದಿಗೆ ಅಡ್ಡವಾಗಿರುವ ಸಾಮಾಜಿಕ ಕಾರ್ಯಕರ್ತ ಕಬೀರ್‌ರನ್ನು ನಿವಾರಿಸಿಕೊಳ್ಳಲು ಪೊಲೀಸರು ಹೂಡಿರುವ ಷಡ್ಯಂತ್ರವೇ 'ಶೇಕ್ ಇಸಾಕ್'ನ ಪತ್ರ. ಈ ಪತ್ರ ಭ್ರಷ್ಟ ಪೊಲೀಸ್ ಅಧಿಕಾರಿಗಳ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶಕ್ಕಾಗಿಯೇ ಸೃಷ್ಟಿಸಲಾಗಿದೆಯೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆ ಪತ್ರದ ಉದ್ದೇಶ ಅದಕ್ಕಿಂತಲೂ ಬಹಳ ಗಂಭೀರವಾದುದು.

ಸಾಮಾಜಿಕ ಕಾರ್ಯಕರ್ತರೊಬ್ಬರನ್ನು ಭಯೋತ್ಪಾದನಾ ಚಟುವಟಿಕೆಗಳಲ್ಲಿ ಫಿಕ್ಸ್ ಮಾಡುವುದು ಮೊದಲನೇ ಉದ್ದೇಶವಾದರೆ, ಕಬೀರ್ ಮೇಲೆ ನಡೆಸಲು ಉದ್ದೇಶಿಸಿರುವ ದಾಳಿಯನ್ನು ಪಾಪ್ಯುಲರ್ ಫ್ರಂಟ್ ಮುಸ್ಲಿಮರ ತಲೆಗೆ ಕಟ್ಟಿ ಅದರ ಪ್ರಮುಖರನ್ನು ಮಟ್ಟ ಹಾಕುವುದು ಎರಡನೇ ಉದ್ದೇಶವೆಂದು ತೋರುತ್ತದೆ. ಮೇಲಿನ ಪತ್ರದಲ್ಲಿ ಈ ಎರಡು ದುರುದ್ದೇಶಗಳು ನಿಚ್ಚಳವಾಗಿ ಎದ್ದು ಕಾಣುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಅನಾಹುತ ಸಂಭವಿಸುವ ಮುನ್ನ ಈ ಷಡ್ಯಂತ್ರವನ್ನು ತಡೆಗಟ್ಟಲು ಮಂಗಳೂರಿನ ಜನತೆ ಎಚ್ಚೆತ್ತುಕೊಳ್ಳುವುದು ಸೂಕ್ತ. ಹಾಗೇ ಪೊಲೀಸ್ ವರಿಷ್ಠರಾದ ಲಾಲ್‌ರುಕುಂ ಪಚಾವೊ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕಾನೂನು ಪಾಲನೆಗೆ ಮುಂದಾಗುತ್ತಾರೆಂದು ನಾವು ನಿರೀಕ್ಷಿಸಬಹುದೆ?

■ ಮೊಟ್ಟಿನಾಳ್ ನರಸಿಂಹಮೂರ್ತಿ

ಬೇರುಬಿಟ್ಟಿರುವ ಖಾಕಿಗಳು

ಮಂಗಳೂರಿನಲ್ಲಿ ಆರೆಸ್ಸೆಸ್ಸಿಗರು, ಬಜರಂಗಿಗಳು ಮುಂತಾದ ಡೋಂಗಿ ದೇಶಭಕ್ತರ ಹಾವಳಿ ಹೆಚ್ಚಾಗಿದ್ದಕ್ಕೂ ಮತ್ತು ಈ ಬಜರಂಗಿ ತಾಳಕ್ಕೆ ಕುಣಿಯುವ ಪೊಲೀಸ್ ಅಧಿಕಾರಿಗಳು ಇಲ್ಲೇ ಠಿಕಾಣಿ ಹೂಡಿರುವುದಕ್ಕೂ ನೇರವಾದ ಸಂಬಂಧವಿದೆ. ಕಬೀರ್ ಮತ್ತು ಪಿಯುಸಿಎಲ್ ಸಂಘಟನೆಯವರು ಮಾಹಿತಿ ಹಕ್ಕನ್ನು ಬಳಸಿ ಪಡೆದುಕೊಂಡಿರುವ ಮಾಹಿತಿ ಪ್ರಕಾರ ಮೂರು ವರ್ಷಕ್ಕಿಂತ ಹೆಚ್ಚು ಕಾಲ ನಗರದಲ್ಲಿ ತಳವೂರಿರುವ ಅಧಿಕಾರಿಗಳ ಸಂಖ್ಯೆ ಒಂದಲ್ಲಾ ಎರಡಲ್ಲಾ ಬರೋಬ್ಬರಿ 14! ಸಬ್ ಇನ್ಸ್‌ಪೆಕ್ಟರ್‌ಗಳಾದ ಶಿವಪ್ರಕಾಶ್, ಗೋಪಾಲಕೃಷ್ಣ ಭಟ್, ಶಾಮಸುಂದರ್, ಮಂಜುನಾಥ ಶೆಟ್ಟಿ, ಇನ್ಸ್‌ಪೆಕ್ಟರ್‌ಗಳಾದ ವಿನಯ್ ಗಾಂವ್‌ಕರ್, ವೆಂಕಟೇಶ ಪ್ರಸನ್ನ, ಡಿವೈಎಸ್‌ಪಿ ಹರಿಶ್ಚಂದ್ರ ... ಹೀಗೆ ಪಟ್ಟಿ ಮುಂದುವರೆಯುತ್ತದೆ.

ಒಂದು ಉದಾಹರಣೆ ನೋಡೋಣ. ವೆಂಕಟೇಶ ಪ್ರಸನ್ನ ಎಂಬ ಪೊಲೀಸ್ ಇನ್ಸ್‌ಪೆಕ್ಟರ್ 08-01-2004ರಲ್ಲಿ ಮಂಗಳೂರಿನ ಮುಲ್ಕಿ ವೃತ್ತಕ್ಕೆ ವರ್ಗವಾಗಿ ಬಂದವನು ಇಂದಿನವರೆಗೂ ಮಂಗಳೂರಿಗೆ ಅಂಟಿ ಕೂತುಬಿಟ್ಟಿದ್ದಾನೆ. ಮಂಗಳೂರು ಉಡುಪಿಗಳಲ್ಲೇ ಅಡ್ಡಾಡಿದ ಈ ಭೂಪ ಈಗ 27-08-2008ರಿಂದ ಮಂಗಳೂರು ಜಿಲ್ಲಾ ಕ್ರೈಂ ಬ್ರಾಂಚ್‌ನಂಥಾ ಹಾಲುಖಾದ ಜಾಗಕ್ಕೆ ಹೊಡೆದುಕೊಂಡಿರುವ ಗೂಟವನ್ನು ಸಡಿಲಿಸುವ ತಾಕತ್ತು ಯಾರಿಗೂ ಇಲ್ಲ ಬಿಡಿ. ಈತ ಹೀಗೆ ಮಂಗಳೂರಿನಲ್ಲೇ ಬೇರುಬಿಟ್ಟು ಹೆಮ್ಮರವಾಗಲು ಕಾರಣ ಕಲ್ಲಡ್ಕ ಪ್ರಭಾಕರ ಭಟ್ಟ ಎಂಬುದು ಇಡೀ ಊರಿಗೇ ಗೊತ್ತಿರುವ ಸಂಗತಿ. ಮೇಲಾಗಿ ಈ ಖಾಕಿ ಅಧಿಕಾರಿಗೂ ಆ ಕೇಸರಿ ಭಟ್ಟನಿಗೂ ಜಾತಿ ಬಾಂಧವ್ಯ ಬೇರೆ. ಹೀಗೆ ಮಂಗಳೂರಿನಲ್ಲಿ ಖಾಕಿ-ಕೇಸರಿಗಳು ಸಮ್ಮಿಳಿತಗೊಂಡು ಕಾನೂನು ಪಾಲನೆಯೆಂಬುದು ಕಾಡು ಪಾಲಾಗಿದೆ.

ಭಯ ಪಾಟೀಲ ದಂಧೆ ಮತ್ತು ದಾಳಿ

ಅನಧಿಕೃತ ಹಣ ವರ್ಗಾವಣೆಯ ವೇದಿಕೆ ಎನ್ನುವುದು ಎಲ್ಲರಿಗೂ ಗೊತ್ತಾಗಿ ಹೋಗಿದೆ. ಅದರಲ್ಲಿ ಓಡಾಡಿರುವ ...ಟಿಗಟ್ಟಲೆ ಫಂಡು ಇವನ್ನು ಸಾಬೀತು ಮಾಡುತ್ತದೆ. ...ನೋಡಿದರೆ ಅಭಯ್ ಪಾಟೀಲ್ ಬಲು ಚಾಣಾಕ್ಷ ...ನ್ನಬಹುದು. ಏಕೆಂದರೆ ತನ್ನೆಲ್ಲ ಅಕ್ರಮ ...ವಹಾರಗಳನ್ನು ತಮ್ಮಂದಿರ ಹೆಸರಿನಲ್ಲಿ ನಡೆಸಿ ಸೇಫಾಗುವ ಪ್ರಯತ್ನ ಮಾಡಿದ್ದಾನೆ. ಶೀತಲ್ ಪಾಟೀಲ್ ಮತ್ತು ಸಂತೋಷ್ ಪಾಟೀಲ್ ಎಂಬ ಕಿಲಾಡಿ ಸಹೋದರರನ್ನು ಕನ್‌ಸ್ಟ್ರಕ್ಷನ್ ಕಂಪನಿಗಳಿಗೆ ಪಾರ್ಟನರ್‌ರನ್ನಾಗಿಸಿ ತಾನು ಮಾತ್ರ ದೂರ ಉಳಿದಿದ್ದಾನೆ. ಆದರೆ ಇವೆಲ್ಲವು ಅಭಯ್‌ನದೇ ದಂಧೆಗಳೆನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಅನಗೋಳದಲ್ಲಿನ ಸರ್ವೆ ನಂಬರ್ 2549 (31/1), ಸರ್ವೇ ನಂಬರ್ 115/2ಬಿ, ಹಲಗೆಯ ಸರ್ವೇ ನಂಬರ್ 173, ಸರ್ವೇ ನಂಬರ್ 175/2ಬಿ ಮತ್ತು 2ಸಿ, ಸರ್ವೇ ನಂಬರ್ 603/1, ಇವು ಅಭಯ್ ಪಾಟೀಲನ ಭಾರೀ ಸೈಟ್ ಡೀಲಿಂಗ್‌ಗಳಾದರು ಅವೆಲ್ಲವನ್ನು ತನ್ನ ತಮ್ಮಂದಿರು ಇಲ್ಲವೆ ಕನ್ಸ್‌ಟ್ರಕ್ಷನ್ ಕಂಪನಿ ಹೆಸರಿನಲ್ಲಿ ಖರೀದಿ ಮಾಡಿರುವುದೂ ಇದೇ ಕಾರಣಕ್ಕೆ.

ಇನ್ನು ಈ ಅಭಯ್ ಪಾಟೀಲ್ ಮಹಾನ್ ರೌಡಿ ಎಲಿಮೆಂಟ್ ಎನ್ನುವುದು ಬೆಳಗಾವಿ ಜನತೆಗೆ ಖಾತ್ರಿಯಾಗಿದೆ. ಎಷ್ಟೋ ಬಾರಿ ರೈತರನ್ನು ಬೆದರಿಸಿ, ಇಲ್ಲವೇ ಪೊಲೀಸರನ್ನು ಛೂ ಬಿಟ್ಟು ಆಸ್ತಿಯನ್ನು ಬರೆಸಿಕೊಂಡದ್ದೂ ಉಂಟು. ಅಲ್ಲದೆ ತನ್ನ ಮಾತು ಕೇಳಲಿಲ್ಲ ಎಂಬ ಒಂದೇ ಕಾರಣಕ್ಕೆ ಬೆಳಗಾವಿ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಬಸವರಾಜ್ ಜವಳಿ ಎಂಬುವರನನ್ನು ತನ್ನ ಕಚೇರಿಗೆ ಕರೆಸಿಕೊಂಡು ಹಿಗ್ಗಾಮುಗ್ಗ ಥಳಿಸಿ ತಾನೊಬ್ಬ ಖಾದಿ ಕಮ್ ಕೇಸರಿ ರೌಡಿ ಎಂಬುದನ್ನು ಸಾಬೀತು ಪಡಿಸಿದ್ದ. ಅವತ್ತು ಬೆಳಗಾವಿಯ ಜನ 'worst MLA ever Seen' ಎನ್ನುವ ಬ್ಯಾನರ್ ಹಿಡಿದು ಡೌನ್, ಡೌನ್ ಅಂತ ಧಿಕ್ಕಾರ ಕೂಗಿ ನಗರವನ್ನು ಬಂದ್ ಮಾಡಿದ್ದರು. ಆದರೂ ಈತನ ವಿಕಟಾಟ್ಟಹಾಸ ಮಾತ್ರ ಕಡಿಮೆಯಾಗಿಲ್ಲ, ಲೋಕಾಯುಕ್ತ ದೂರು, ರೇಡುಗಳಾದರು ಇವನಿಗೆ ಬುದ್ಧಿ ಕಲಿಸಬಹುದೇನೋ ಎಂಬ ನಿರೀಕ್ಷೆಗಳು ಹುಸಿಯಾಗುವ ಲಕ್ಷಣಗಳು ಗೋಚರಿಸುತ್ತಿವೆ.

■ ಗಿರೀಶ್ ತಾಳಿಕಟ್ಟೆ



ವಾಗ್ವಾದಗಳ ಕನ್ನಡ ಸಾಹಿತ್ಯ ಚರಿತ್ರೆ

ಪುಸ್ತಕ ವಿಮರ್ಶೆ


■ ಡಾ. ಅರುಣ್ ಜೋಳದಕೂಡ್ಲಿಗಿ

ಕನ್ನಡ ಸಾಹಿತ್ಯ ಚರಿತ್ರೆಯನ್ನು ಭಿನ್ನವಾಗಿ ಕಟ್ಟುವ ಪ್ರಯತ್ನಗಳು ನಿರಂತರವಾಗಿ ನಡೆದಿವೆ. ಅದು ಈಗಲೂ ನಿಂತಿಲ್ಲ. ಇಂತಹ ಸಮಕಾಲೀನ ಪ್ರಯತ್ನವೆ ರಹಮತ್ ತರೀಕೆರೆ ಅವರ 'ಕನ್ನಡ ಸಾಹಿತ್ಯ ವಾಗ್ವಾದಗಳು' ಕೃತಿ. ಒಂದು ಊರಿನ ಚರಿತ್ರೆ: ಶಾಸನ ಹಸ್ತಪ್ರತಿ ತಾಲೂಕು ಕಚೇರಿಯ ದಾಖಲೆಗಳಿಗಿಂತ, ಆ ಊರಿನ ಜಗಳ ಹೊಡೆದಾಟ ಸೇಡು ಯುಕ್ತಿಯ ಮೌಖಿಕ ಕಥನಗಳ ಮೂಲಕ ರುಗೇರುತ್ತದೆ, ಸಾಹಿತ್ಯ ಚರಿತ್ರೆಗೂ ಇರುವ ಇಂತಹದ್ದೊಂದು ಗುಣವನ್ನು ಈ ಕೃತಿ ಕಾಣಿಸುತ್ತದೆ. ಸಾಹಿತ್ಯದ ಒಳಗಿಂದ ಹೊರಟ ಬಾಣಗಳು ಸಾಮಾಜಿಕ ವಲಯವ ತಾಕಿ ಕೆಲ ವಾಗ್ವಾದಗಳು ಹುಟ್ಟಿದರೆ, ಸಮಾಜದ ಒಳಗಿಂದ ಹೊರಟ ಬಾಣಗಳು ಸಾಹಿತ್ಯಲೋಕಕ್ಕೆ ತಾಕಿ ಮತ್ತೆ ಕೆಲ ವಾಗ್ವಾದಗಳು ಹುಟ್ಟಿವೆ.

ಈ ಕೃತಿಯಲ್ಲಿ ನಾವಲು (1917), ರುದ್ರನಾಟಕ (1941), ಶೂದ್ರ ತಪಸ್ವಿ (1944), ಅಶ್ಲೀಲ ಸಾಹಿತ್ಯ (1952), ಚೆನ್ನಬಸವ ನಾಯಕ (1956), ದಲಿತ ದೃಷ್ಟಿಕೋನ' (1980), ಬೂಸಾ ಸಾಹಿತ್ಯ (1973), ಕರ್ನಾಟಕ ಸಂಸ್ಕೃತಿ ಚರ್ಚೆ (1978), ಶ್ರೇಷ್ಠತೆಯ ಪ್ರಶ್ನೆ (1990), ಸುಗ್ಗಾ ಬಾಳ್ಯಾ (2005) ಹೀಗೆ ಹತ್ತು ಪ್ರಮುಖ ಸಂಗತಿಗಳು ಹುಟ್ಟಿಸಿದ ವಾಗ್ವಾದಗಳನ್ನು ಚರ್ಚಿಸಲಾಗಿದೆ. ಈ ವಾಗ್ವಾದಗಳು ಸಾಹಿತ್ಯ ಮತ್ತು ಸಾಮಾಜಿಕ ಸಂಬಂಧಗಳಲ್ಲಾದ ಪಲ್ಲಟಗಳ ದಾಖಲೆಯಂತಿವೆ. ಲಿಂಗಭೇದ ಮತ್ತು ಜಾತಿ ಶ್ರೇಣೀಕರಣದ ನೆಲೆಯಲ್ಲಿ ಸಾಹಿತ್ಯವನ್ನು ನೋಡುವ ದೃಷ್ಟಿಕೋನದಲ್ಲಾದ ಬದಲಾವಣೆಗಳನ್ನು ಬಿಂಬಿಸುವ ಚಿತ್ರಪಟದಂತಿವೆ.

ಇಲ್ಲಿನ ವಾಗ್ವಾದಗಳಲ್ಲಿ ಮುಖ್ಯವಾಗಿ ತಿರುಮಲಾಂಬ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ನರಹರಿ ಶರ್ಮಾ, ಬಿ.ಎಂ.ಶ್ರೀಕಂಠಯ್ಯ, ದ.ರಾ.ಬೇಂದ್ರೆ, ಎಂ.ಜಿ. ಕೃಷ್ಣಮೂರ್ತಿ, ಕುವೆಂಪು, ಸಂಗಣ್ಣ ಕುಪ್ಪಸ್ತ, ಅನಕೃ, ನಿರಂಜನ, ಬಿ.ಕೃಷ್ಣಪ್ಪ, ಬಿ. ಬಸವಲಿಂಗಪ್ಪ, ಸಿದ್ದಲಿಂಗಯ್ಯ, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಕೆ.ವಿ.ಸುಬ್ಬಣ್ಣ, ಪಿ. ಲಂಕೇಶ್, ಎಂ.ಎಂ.ಕಲಬುರ್ಗಿ, ಚಂದ್ರಶೇಖರ ಕಂಬಾರ, ಕುರ್ತಕೋಟಿ ಮುಂತಾದವರ ಚಿಂತನೆಗಳಿದ್ದು, ಅವುಗಳ ಮೇಲೆ ಚರ್ಚೆ ಬೆಳೆಸಲಾಗಿದೆ.

ಪ್ರತಿ ಪ್ರಕರಣವನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದ್ದು, ಮೊದಲನೆಯದರಲ್ಲಿ ಪ್ರಕರಣಕ್ಕೆ ಕಾರಣವಾದ



ಕನ್ನಡ ಸಾಹಿತ್ಯ ವಾಗ್ವಾದಗಳು
ಡಾ.ರಹಮತ್ ತರೀಕೆರೆ
ಪುಟ: 230, ಬೆಲೆ: 120, 2012
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಗತಿಗಳ ಪೂರ್ವಪೀಠಿಕೆಯಿದೆ; ಎರಡನೆಯದರಲ್ಲಿ ವಾಗ್ವಾದಕ್ಕೆ ಕಾರಣವಾದ ಚಿಂತನೆಯ ವಾದಮಂಡನೆಯಿದೆ; ಮೂರನೆಯ ಖಂಡದಲ್ಲಿ ವಾದಮಂಡನೆಗೆ ಪ್ರತಿಯಾಗಿ ಪರ-ವಿರೋಧವಾಗಿ ಬಂದ ಪ್ರತಿಕ್ರಿಯೆಗಳಿವೆ. ನಾಲ್ಕನೆಯದರಲ್ಲಿ ಸಾಹಿತ್ಯ ಸಮಾಜ ಮತ್ತು ಸಂಸ್ಕೃತಿ ಪ್ರಶ್ನೆಗಳ ವಿಶ್ಲೇಷಣೆಯಿದೆ. ಕೊನೆಯಲ್ಲಿ ವಾಗ್ವಾದಕ್ಕೆ ಪೂರಕವಾದ ಟಿಪ್ಪಣಿ ಹಾಗೂ ಇನ್ನಿತರ ಆಕರಗಳ ಮಾಹಿತಿ ಒದಗಿಸಲಾಗಿದೆ.

ಕಳೆದೊಂದು ಶತಮಾನದ ಅವಧಿಯಲ್ಲಿ ಕಾಲಕಾಲಕ್ಕೆ ಎದ್ದ ಪ್ರಮುಖ ವಾಗ್ವಾದಗಳ ನೆಲೆಯಲ್ಲಿ ಹುಟ್ಟಬಹುದಾದ ಚಿಂತನಾಕ್ರಮ ಇಲ್ಲಿದೆ. ಹಾಗಾಗಿ ಇಲ್ಲಿ ಪ್ರಾತಿನಿಧಿಕವಾದ ಕೆಲವನ್ನು ಮಾತ್ರ ಚರ್ಚಿಸಲಾಗಿದ್ದರೂ, ಇಡಿಯಾದ ಚರ್ಚೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಆಯಾ ಕಾಲಕ್ಕೆ ಉಂಟಾದ ನೂರಾರು ವಾಗ್ವಾದಗಳನ್ನು ಒಡಲೊಳಗಿಟ್ಟುಕೊಂಡಂತಿದೆ. ಈ ವಾಗ್ವಾದಗಳು ಸಾಹಿತ್ಯ ಪರಿಕಲ್ಪನೆಗೆ, ಸಾಹಿತ್ಯ ಕೃತಿಗಳಿಗೆ, ವಿಮರ್ಶೆಯ ವಿಧಾನಕ್ಕೆ, ಅನುವಾದದ ಸ್ವರೂಪಕ್ಕೆ, ಸಂಪಾದನೆಯ ತತ್ವಕ್ಕೆ, ಭಾಷೆಯ ಬಳಕೆಗೆ, ಛಂದಸ್ಸಿನ ನಿಯಮೋಲ್ಲಂಘನೆಗೆ, ಸಾಹಿತ್ಯದ ಓದಿಗೆ ಸಂಬಂಧಿಸಿವೆ. ಹೀಗಾಗಿ ವಾಗ್ವಾದಗಳ ಪ್ರಮುಖ ಭಾಗಗಳನ್ನು ಉಲ್ಲೇಖಿಸಿಕೊಂಡು, ಅಲ್ಲಿ ಅಡಗಿರುವ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಶ್ನೆಗಳನ್ನು ಎತ್ತಿಕೊಂಡು, ಅವು ನಮ್ಮ ವರ್ತಮಾನ ಬದುಕಿನಲ್ಲಿ ಹೇಗೆ ರೂಪಾಂತರಗೊಂಡು ಮುಂದುವರೆದಿವೆ ಎಂಬುದನ್ನು ಪರಿಶೀಲಿಸುವ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ.

ಲೇಖಕರ ರಚನೆಯ ಸಾಹಿತ್ಯವನ್ನು ಓದುವ ಮೂಲಕ ಅವರ ಬಗೆಗೆ ಒಂದು ಚಿತ್ರವನ್ನು ಕಟ್ಟಿಕೊಂಡಿರುತ್ತೇವೆ. ಅದೇ ಲೇಖಕರು ಸಾಮಾಜಿಕ ವಿದ್ಯಮಾನಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆ, ಸಾಹಿತ್ಯಿಕ ವಾಗ್ವಾದವೊಂದರಲ್ಲಿ ಲೇಖಕರ ನಿಜ ಕಾಳಜಿ ಹೇಗೆ ವ್ಯಕ್ತವಾಗುತ್ತದೆ ಮುಂತಾಗಿ ನೋಡಲು ಈ ಕೃತಿ ಹೊಸ ನೋಟವೊಂದನ್ನು ಕೊಡುತ್ತದೆ. ಹೀಗಾಗಿ ಸಾಹಿತ್ಯ ಕೃತಿಗಳ ಮೂಲಕ ಕಾಣುವ ಹಲವು ಸಾಹಿತಿಗಳ ಚಿತ್ರ, ಸಾಮಾಜಿಕ ನೆಲೆಯಲ್ಲಿ ಹೇಗೆ ಬದಲುಗೊಳ್ಳುತ್ತದೆ ಎನ್ನುವುದನ್ನು ನೋಡುವುದು ಕುತೂಹಲಕಾರಿಯಾಗಿದೆ. ಕೃತಿಯ ಚಾರಿತ್ರಿಕ ವಿವರ ಮತ್ತು ಅದರೊಳಗಿನ ಚಿಂತನೆಗಳೆರಡೂ ಸಮಸಮ ಆಗಿರುವಂತಹ ವಿಧಾನವು, ಸಾಹಿತ್ಯ ಚರಿತ್ರೆಗೆ ಹೊಸ ಆಯಾಮ ನೀಡಬಲ್ಲದು. ಈ ಹಿನ್ನೆಲೆಯಲ್ಲಿ ವಾಗ್ವಾದಗಳ ಮೂಲಕ ಕಟ್ಟಲಾದ ಸಾಹಿತ್ಯ ಚರಿತ್ರೆಯಾಗಿ ಇಡೀ ಚಿಂತನೆ ರೂಪುಗೊಂಡಿದೆ.

ಇಲ್ಲಿನ ವಾಗ್ವಾದಗಳ ಕುರಿತ ಚರ್ಚೆ ಕೇವಲ ಸಾಹಿತ್ಯಿಕ ಮಾತ್ರವಾಗಿರದೆ, ಸಾಮಾಜಿಕ ಚರ್ಚೆಯ ಆಯಾಮವನ್ನು ಪಡೆಯುವುದು, ಅದು ರಾಜಕೀಯ ವಿದ್ಯಮಾನದ ಚರ್ಚೆಯಾಗಿಯೂ ವಿಸ್ತರಣೆ ಪಡೆದು ಸಾಂಸ್ಕೃತಿಕ ವಾಗ್ವಾದವಾಗುವ ಆಯಾಮ ಇಲ್ಲಿನ ಚರ್ಚೆಗಿದೆ. ಈ ಕಾರಣಕ್ಕಾಗಿ ಶುದ್ಧ ಸಾಹಿತ್ಯದ ಚರ್ಚೆಯ ಸೀಮಿತ ಚೌಕಟ್ಟುಗಳನ್ನು ಮುರಿಯುವ ಕಾರಣಕ್ಕೂ ಈ ಕೃತಿ ಮುಖ್ಯವಾಗುತ್ತದೆ. ಕೃತಿಯೊಂದರ ಶುದ್ಧ ಸಾಹಿತ್ಯಿಕ ಚರ್ಚೆಗೆ ಇರುವ ಮಿತಿಗಳನ್ನು ಇಲ್ಲಿನ ವಾಗ್ವಾದಗಳು ಸ್ಪಷ್ಟವಾಗಿ ಕಾಣಿಸುತ್ತವೆ.

ಸಾಹಿತ್ಯ ಲೋಕಕ್ಕೆ ಹೊಸ ಪ್ರಕಾರದ ನೆಲೆಯಲ್ಲಿ ನಾವಲು, ರುದ್ರನಾಟಕ; ಲಿಂಗದ ನೆಲೆಯಲ್ಲಿ ಮಹಿಳೆ; ಜಾತಿಯ ನೆಲೆಯಲ್ಲಿ ದಲಿತ ಕೆಳಜಾತಿಗಳು ಪ್ರವೇಶಿಸಿದಾಗಲೂ ಅವು ವಾಗ್ವಾದದ ಮೂಲಕ ತನ್ನ ಪ್ರವೇಶವನ್ನು ಗಟ್ಟಿಗೊಳಿಸಿಕೊಂಡಂತಿವೆ. ರುದ್ರನಾಟಕ ವಾಗ್ವಾದದಲ್ಲಿ ಪಶ್ಚಿಮದ ಸಾಹಿತ್ಯ ಪ್ರಕಾರವೊಂದರ ಪ್ರವೇಶ, ನಾವಲು ವಾಗ್ವಾದದಲ್ಲಿ ಮಹಿಳೆಯ ಸಾಹಿತ್ಯ ಪ್ರವೇಶ, ಶೂದ್ರ ತಪಸ್ವಿ, ದಲಿತ ದೃಷ್ಟಿಕೋನ, ಬೂಸಾ ಸಾಹಿತ್ಯದ ವಾಗ್ವಾದಗಳಲ್ಲಿ ದಲಿತ ಸಾಹಿತ್ಯದ ಪರೀಕ್ಷೆಯೂ ನಡೆದಂತಿದೆ.

ವಾಗ್ವಾದಗಳ ಕೃತಿ ಮತ್ತೊಂದು ವಾಗ್ವಾದಕ್ಕೆ ಎಡೆಯಾಗದಿರಲಿ ಎಂಬ ಎಚ್ಚರ ತರೀಕೆರೆಯವರನ್ನು ಬಹುವಾಗಿ ಕಾಡಿದಂತಿದೆ. ಈ ಎಚ್ಚರವೇ ಹಲವುಕಡೆ ವಿಶ್ಲೇಷಣೆಯ ಮೊನಚನ್ನು ಮೊಂಡಾಗಿಸಿದೆ. ನಿಷ್ಠುರ ಟೀಕೆಯನ್ನು ನಯವಾಗಿಸಿ ತೇಲಿಸಿದೆ. ಪುಸ್ತಕದ ಕೊನೆಯ ಭಾಗದ ಚರ್ಚೆಯಲ್ಲಿ ವಾಗ್ವಾದಗಳ ಬಿಡಿ ಬಿಡಿ ಚಿತ್ರಗಳ ನೆಲೆಯಲ್ಲಿ ಅವುಗಳು ಬಿಟ್ಟುಕೊಡುವ ಸೂಕ್ಷ್ಮ ಒಳನೋಟಗಳನ್ನು ಹೆಕ್ಕಿ ಕೊಡುತ್ತಾರೆ. ಆದರೆ ಈ ಎಲ್ಲಾ ಬಿಡಿಚಿತ್ರಗಳ ಒಳಗಿಂದ ಹೊಮ್ಮಬಹುದಾದ ತಾತ್ವಿಕ ನೆಲೆಯೊಂದನ್ನು ಶೋಧಿಸುವಲ್ಲಿ ತರೀಕೆರೆಯವರು ಪೂರ್ಣ ಯಶಕಂಡಂತಿಲ್ಲ. ಅಥವಾ ಇನ್ನಷ್ಟು ಶೋಧಕ್ಕೆ ಅವಕಾಶವನ್ನು ಒದಗಿಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯ ಜಡ ಓದಿಗೆ ಈ ಕೃತಿ ತಡೆಯನ್ನೊಡ್ಡುತ್ತದೆ. ಅಂತೆಯೇ ಸಾಹಿತ್ಯವನ್ನು ಪ್ರವೇಶಿಸುವ ವಿದ್ಯಾರ್ಥಿಗಳಿಗೆ ಇದು ಭಿನ್ನವಾದ ದೃಷ್ಟಿಕೋನವನ್ನು ಒದಗಿಸುತ್ತದೆ. ಇಂದು ನಿರ್ಲಿಪ್ತವಾಗಿರುವ ಸಾಹಿತ್ಯ ವಲಯವನ್ನು ಅಣಕಿಸುವಂತೆ, ಕೆಣಕುವಂತೆ ಸಣ್ಣಪುಟ್ಟ ಕಿಡಿಗಳು ಈ ಕೃತಿಯ ಒಳಗಿಂದ ಸಿಡಿಯುತ್ತವೆ. ಈ ಎಲ್ಲಾ ಕಾರಣಗಳಿಗಾಗಿ ಸಾಹಿತ್ಯದ ವಿದ್ಯಾರ್ಥಿಗಳು ಸಾಧ್ಯವಾದರೆ ಒಮ್ಮೆ ಓದಬಹುದಾದ ಕೃತಿಯಿದು.

ಸತ್ಯಮೇವ ಜಯತೆ!

ನ್ಯಾಯ ಕೋರಿ ಕೋರ್ಟು ಕಟ್ಟೆ ಹತ್ತುವ ನೂರು ಜನ ಅಮಾಯಕರ ಪೈಕಿ ಒಬ್ಬನೇ ಒಬ್ಬನೂ ನ್ಯಾಯವಂಚಿತನಾಗಕೂಡದು. ಇದು ಕಾನೂನು ವಿದ್ಯಾರ್ಥಿಗಳಿಗೆ ಹೇಳಿಕೊಡುವ ಮೊದಲ ಪಾಠಗಳಲ್ಲೊಂದು. ಆದರೆ ಒಮ್ಮೆ ಕಾನೂನು ಓದು ಮುಗಿಸಿ ವಕಾಲತ್ತನ್ನು ಆರಂಭಿಸಿದ ಮೇಲೆ, ನಾನು ಇಂತಿಂತಹ ಅಪರಾಧವೆಸಗಿದ್ದೇನೆ, ನನ್ನನ್ನು ಈ ಕೇಸಿನಿಂದ ಪಾರು ಮಾಡಿರಿ ಎಂದು ಬಾಯಿಬಿಟ್ಟು ಹೇಳುವವರು ನನ್ನ ಬಳಿ ಸುಳಿಯಕೂಡದು ಎಂದು ಅದೆಷ್ಟು ವಕೀಲರು ಹೇಳುತ್ತಾರೆ? ಇಂತಹ ಮಾತುಗಳನ್ನು ಗಾಂಧೀಜಿ ಮಾತ್ರ ಆಡಬಹುದಿತ್ತು. ಇಂದು ಹಣವೇ ಸರ್ವಸ್ವವೆನ್ನುವ ಜಗತ್ತಿನಲ್ಲಿ ವೃತ್ತಿಧರ್ಮ ಪಾಲಿಸುವ ಅದೆಷ್ಟು ಮಂದಿ ವಕೀಲರಿದ್ದಾರೆ? ಬಡ ಕಕ್ಷಿದಾರರನ್ನು ಸುಲಿಯುವ ವಕೀಲರೇ ಈಗ ಎಲ್ಲೆಲ್ಲೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ ಕೋರ್ಟಿನಲ್ಲಿ ಗೆದ್ದವನು ಸೋತ, ಸೋತವನು ಸತ್ತ ಎನ್ನುವ ಮಾತು ಸುಳ್ಳಾಗುವ ಲಕ್ಷಣಗಳು ಕಾಣುತ್ತಿಲ್ಲ.

ಸುಮಾರು ನಾಲ್ಕು ದಶಕಗಳ ಹಿಂದಿನ ಮಾತು. ನಾನು ಕಲಿಯುತ್ತಿದ್ದ ಕಾಲೇಜಿನ ಇಬ್ಬರು ಅಧ್ಯಾಪಕರನ್ನು ಕಾಲೇಜು ಆಡಳಿತ ಮಂಡಳಿ ಕೆಲಸದಿಂದ ವಜಾ ಮಾಡಲು ತೀರ್ಮಾನಿಸಿತ್ತು. ಅದಕ್ಕೂ ಮೊದಲು ಅವರನ್ನು ಅಮಾನತ್ತಿನಲ್ಲಿಟ್ಟಿತ್ತು. ಅಧ್ಯಾಪಕರು ಆಡಳಿತ ಮಂಡಳಿ ವಿರುದ್ಧ ನ್ಯಾಯ ಕೋರಿ ಕೋರ್ಟ್ ಮೆಟ್ಟಿಲೇರಿದ್ದರು. ಅಧ್ಯಾಪಕರಿಗೆ ಅನ್ಯಾಯವಾಗಿದೆ ಎಂದು ಭಾವಿಸಿದ್ದ ವಿದ್ಯಾರ್ಥಿಗಳು ನ್ಯಾಯಾಲಯದ ಕಲಾಪಗಳನ್ನು ವೀಕ್ಷಿಸಲು ತಪ್ಪದೆ ನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದರು. ಆ ಪೈಕಿ ನಾನೂ ಒಬ್ಬ.

ಕಾಲೇಜು ಆಡಳಿತ ಮಂಡಳಿ ಪರವಾಗಿ ಬೆಳಗಾವಿಯ ಇಬ್ಬರು ಸುಪ್ರಸಿದ್ಧ ವಕೀಲರು ಕಾರಿನಲ್ಲಿ ಆಗಮಿಸಿದರು. ಅವರ ಗತ್ತುಗಾರಿಕೆ ಸಹಜವೇ ಆಗಿತ್ತು, ಇನ್ನು ನಮ್ಮ ಅಧ್ಯಾಪಕರ ವಕೀಲರು ಎಂತಹವರಿರಬಹುದು ಎಂದು ನಮಗೆಲ್ಲ ಕುತೂಹಲ. ಅಂತೂ ನ್ಯಾಯಾಲಯದ ಕಲಾಪ ಶುರುವಾಗುವ ಮುನ್ನ ವಕೀಲರು ಆಗಮಿಸಿದ್ದಾರೆ ಎನ್ನುವ ಸುದ್ದಿ ಕಿವಿಯ ಮೇಲೆ ಬಿತ್ತು, ಅವರು ಬರಲಿದ್ದ ದಾರಿಯಲ್ಲೇ ನಮ್ಮ ದೃಷ್ಟಿ ನೆಟ್ಟಿತ್ತು, ಅವರು ಒಂದು ಆಟೋದಿಂದ ಇಳಿದರು. ಶುಭ್ರ ಪ್ಯಾಂಟ್ ಶರ್ಟ್ ಮೇಲೆ ಕಪ್ಪು ಕೋಟು ಧರಿಸಿದ್ದ ಅವರು ಮೆಲ್ಲನೆ ಹೆಜ್ಜೆ ಹಾಕತೊಡಗಿದರು. ಅವರ ಒಂದು ಕಾಲು ಆನೆ ಕಾಲು ರೋಗದಿಂದಾಗಿ ಕಂಬದಂತಾಗಿ ಬಿಟ್ಟಿತ್ತು.

ನಮಗೇಕೋ ವಕೀಲರನ್ನು ನೋಡಿದ ಕೂಡಲೇ ನಮ್ಮ ಅಧ್ಯಾಪಕರಿಗೆ ಸೋಲು ಕಟ್ಟಿಟ್ಟ ಬುತ್ತಿ ಎನಿಸಿತು. ಆದರೆ ನ್ಯಾಯಾಲಯದಲ್ಲಿ ಅವರು ತಮ್ಮ ವಾದ ಮಂಡಿಸಲು ಎದ್ದು ನಿಲ್ಲುತ್ತಲೇ ಮ್ಯಾಜಿಸ್ಟ್ರೇಟ್ ಅವರ ವಾದವನ್ನು ವಿಶೇಷ ಆಸಕ್ತಿ ವಹಿಸಿ ಆಲಿಸಿದರಷ್ಟೇ ಅಲ್ಲ, ತಮಗಿಂತಲೂ ವಯಸ್ಸಿನಲ್ಲಿ ಹಿರಿಯರಾಗಿದ್ದ ನ್ಯಾಯವಾದಿ ಬಗ್ಗೆ ಅವರಿಗೆ ಎಂತಹ ಗೌರವವಿತ್ತೆನ್ನುವುದೂ ಸ್ಪಷ್ಟವಾಗುತ್ತಿತ್ತು. ಇಂಗ್ಲಿಷಿನಲ್ಲಿ ನಡೆಯುತ್ತಿದ್ದ ವಾದ ಪ್ರತಿವಾದ ನಮಗೆ ಅಷ್ಟಿಷ್ಟು ಅರ್ಥವಾಗುತ್ತಿತ್ತು. ಆದರೆ ಕಾನೂನಿನ ಗಂಧಗಾಳಿಯಿಲ್ಲದಿದ್ದರೂ ವಾದಿ ಪ್ರತಿವಾದಿಗಳ ವಕೀಲರು ಹಾಗೂ ಮ್ಯಾಜಿಸ್ಟ್ರೇಟ್‌ರ ಮುಖದಲ್ಲಿ ಏರಿಳಿಯುತ್ತಿದ್ದ ಭಾವನೆಗಳ ಗ್ರಾಫಿನಿಂದ ಯಾರ ಕೈಮೇಲಾಯಿತು ಯಾರಿಗೆ ಹಿನ್ನಡೆಯಾಯಿತು ಎನ್ನುವುದು ನಮಗೆ ಅರ್ಥವಾಗುತ್ತಿತ್ತು.



ಕೆಲವೇ ದಿನಗಳಲ್ಲಿ ನ್ಯಾಯಾಲಯ ತೀರ್ಪು ನೀಡಿತು. ನಮ್ಮ ಅಧ್ಯಾಪಕರ ಪರವಾಗಿ ತೀರ್ಪು ಬಂತು. ನಮಗೆಲ್ಲ ಹಿಗ್ಗೋ ಹಿಗ್ಗು. ಆಗ ನಮಗೆ ನಮ್ಮ ಅಧ್ಯಾಪಕರೇ ಮುಖ್ಯವಾಗಿದ್ದರೇ ವಿನಾ ಅವರಿಗೆ ನ್ಯಾಯ ದೊರಕಿಸಿಕೊಟ್ಟಿದ್ದ ಆ ವಕೀಲರಲ್ಲ. ಕೆಲ ವರ್ಷಗಳ ನಂತರ ನಮ್ಮ ಇನ್ನೊಬ್ಬ ಅಧ್ಯಾಪಕರು ತಮ್ಮ ಒಂದು ಮೊಕದ್ದಮೆಯನ್ನು ಅದೇ ವಕೀಲರಿಗೆ ವಹಿಸಿಕೊಟ್ಟಿದ್ದರು. ವಕಾಲತ್ತು ಪತ್ರಕ್ಕೆ ಸಹಿ ಹಾಕುವ ಮುನ್ನ ವಕೀಲರು ಈ ಕೇಸಿನಲ್ಲಿ ನಿಮಗೆ ಜಯ ಸಿಕ್ಕೇ ಸಿಗುತ್ತದೆಂದೇನೂ ಹೇಳಲಾರೆ ಎಂದು ಅವರು ತಮ್ಮ ಕಕ್ಷಿದಾರನಿಗೆ ಯಾವ ಮುಲಾಜಿಲ್ಲದೆ ಹೇಳಿಬಿಟ್ಟಿದ್ದರಂತೆ. ನಿಮ್ಮ ಬಗ್ಗೆ ನನಗೆ ತುಂಬ ವಿಶ್ವಾಸವಿದೆ. ಸೋತರೆ ನಾನೇನೂ ನಿಮ್ಮ ಬಗ್ಗೆ ಬೇಸರಪಟ್ಟುಕೊಳ್ಳಲಾರೆ ಎಂದು ನಮ್ಮ ಅಧ್ಯಾಪಕರು ತಮ್ಮ ವಕೀಲರಿಗೆ ಹೇಳಿದ್ದರಂತೆ.

ತಮ್ಮ ವಕೀಲರ ಮೇಲೆ ನಮ್ಮ ಅಧ್ಯಾಪಕರಿಗೆ ಅದೆಷ್ಟು ವಿಶ್ವಾಸವಿತ್ತೆಂದರೆ, ಅವರು ಬೆಳಗಾವಿಗೆ ಬರಹೇಳಿದಾಗೊಮ್ಮೆ ಹೋಗಿ ತಮ್ಮಲ್ಲಿದ್ದಷ್ಟು ಹಣವನ್ನು ಅವರಿಗೆ ಕೊಟ್ಟು ಮೊಕದ್ದಮೆ ಯಾವ ಹಂತದಲ್ಲಿದೆ, ಮತ್ತೆ ಯಾವಾಗ ಕೋರ್ಟಿಗೆ ಹಾಜರಾಗಬೇಕು ಎಂದೆಲ್ಲ ಕೇಳಿ ವಾಪಸ್ಸು ಬರುತ್ತಿದ್ದರು. ಮುಂದೆ ತಮ್ಮ ಅಧ್ಯಯನ ಅಧ್ಯಾಪನದಲ್ಲಿ ನಿರತರಾಗುತ್ತಿದ್ದರು. ಆ ನ್ಯಾಯವಾದಿಯ ಸಂಗದಿಂದಾಗಿ ನಮ್ಮ ಅಧ್ಯಾಪಕರೇ ಕಾನೂನು ವಿದ್ಯಾರ್ಥಿಯಂತೆ ಕಾನೂನಿನ ಅಧ್ಯಯನದಲ್ಲಿ ತೊಡಗಿದರು. ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಮೇಲೆ ನೀವು ವಕೀಲರಾಗದಿದ್ದರೂ ನಿಮ್ಮ ಕಾನೂನು ಜ್ಞಾನ ವ್ಯರ್ಥವಾಗಲಾರದು ಎಂದು ಆ ವಕೀಲರು ತಮ್ಮ ಕಕ್ಷಿದಾರರಿಗೆ ಪದೇ ಪದೇ ಹೇಳುತ್ತಿದ್ದರಂತೆ.

ಒಂದು ದಿನ ನಮ್ಮ ಅಧ್ಯಾಪಕರಿಗೆ ವಕೀಲರಿಂದ ದೂರವಾಣಿ ಕರೆ ಬಂತು. ಈ ಕೇಸಿನಲ್ಲಿ ನಿಮಗೆ ಸೋಲಾಗಿದೆ ಎಂದು ಅವರು ತಿಳಿಸಿದ್ದರು. ಮುಂದೇನು ಮಾಡಬೇಕು ಎನ್ನುವ ವಿಷಯವಾಗಿ ನಮ್ಮ ಅಧ್ಯಾಪಕರು ತಮ್ಮ ವಕೀಲರಿಂದ ಸಲಹೆ ಪಡೆಯಲು ಬೆಳಗಾವಿಗೆ ಹೋದರು. ವಕೀಲರು ನ್ಯಾಯಾಲಯದ ಕಲಾಪಗಳ ಸಂಕ್ಷಿಪ್ತ ವರದಿ ನೀಡಿದರು. "ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದರಿಂದ ಏನೂ ಪ್ರಯೋಜನವಿಲ್ಲ. ಆದರೆ ನಿಮಗೆ ಒಂದು ಅವಕಾಶವಿದೆ ಎಂದ ಮೇಲೆ ಅಪೀಲ್ ಮಾಡಬಹುದು" ಎಂದು ವಕೀಲರು ತಮ್ಮ ಅಭಿಪ್ರಾಯ ತಿಳಿಸಿದರು. ಅವರಿಂದ ಬೀಳ್ಕೊಂಡು ಹೊರಬಂದ ನಮ್ಮ ಅಧ್ಯಾಪಕರನ್ನು ವಕೀಲರು ಮತ್ತೆ ಕರೆದರು.


ಅವರು ತಮ್ಮ ಕಕ್ಷಿದಾರನ ಫೈಲ್ ತೆರೆದರು. ಕಕ್ಷಿದಾರನಿಂದ ಯಾವ ದಿನಾಂಕದಂದು ಎಷ್ಟು ಫೀಜ್ ಪಡೆದಿದ್ದರು, ಆ ಪೈಕಿ ಯಾವ ಯಾವ ಬಾಬತ್ತಿಗೆ ಎಷ್ಟು ಹಣ ಖರ್ಚಾಯಿತು ಹಾಗೂ ತಮ್ಮ ಫೀಜ್ ಎಷ್ಟು ಎನ್ನುವುದರ ವಿವರಗಳುಳ್ಳ ದಾಖಲೆಯ ನಕಲನ್ನು ತಮ್ಮ ಕಕ್ಷಿದಾರನಿಗೆ ನೀಡಿದರು. "ಆಯಿತು ಸರ್, ಧನ್ಯವಾದಗಳು. ಬರ್ತೀನ್ರಿ" ಎಂದರು ಕಕ್ಷಿದಾರರು. ಆ ವಕೀಲರು "ಲೆಕ್ಕ ನೀವು ನೋಡಲೇ ಇಲ್ಲ ಅಂತ ಕಾಣಿಸ್ತೈತಿ. ಕೂತಕೊಳ್ಳಿ. ನಾನೇ ನಿಮಗೆ ಇಷ್ಟು ಹಣ ವಾಪಸ್ ಕೊಡಬೇಕು. ತೆಗೆದುಕೊಳ್ಳಿ" ಎಂದು ಅವರು ಇನ್ನೂರು ರೂಪಾಯಿ ಮತ್ತು ಐವತ್ತು ಪೈಸೆ ಎಣಿಸಿ ನಮ್ಮ ಪ್ರಾಧ್ಯಾಪಕರ ಕೈಗಿತ್ತರಂತೆ.

ಈ ಪ್ರಸಂಗ ಕುರಿತು ಕೇಳುತ್ತಿದ್ದ ನನಗೆ ಬಲು ಅಚ್ಚರಿಯಾಯಿತು. ಗಾಂಧೀಜಿಯ ನಂತರ ಅಂತಹ ವಕೀಲರು ಯಾರೂ ಬರಲಿಕ್ಕಿಲ್ಲ ಎಂದು ನಾನು ಭಾವಿಸಿದ್ದೆ. ಆದರೆ ಅವರ ನಂತರ ನಮ್ಮ ಅಧ್ಯಾಪಕರಿಗೆ ಅಂತಹ ಒಬ್ಬ ವಕೀಲರು ಸಿಕ್ಕಿದ್ದರು. ಅಂತಹ ವಕೀಲರು ಇನ್ನೂ ಇದ್ದಾರೆಯೆ? ಇದ್ದರೆ ಅವರ ಸಂಖ್ಯೆ ಹೆಚ್ಚಲಿ. ಇಲ್ಲವಾದರೆ 'ಸತ್ಯ ಮೇವ ಜಯತೆ' ಬರೀ ಕೋರ್ಟ್ ಕಚೇರಿಗಳ ಗೋಡೆಗಳಿಗೆ ಅಲಂಕಾರ ಮಾತ್ರವಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ.

ಅದೇನೇ ಇರಲಿ, ನಮ್ಮ ಅಧ್ಯಾಪಕರಿಗೆ ಸಿಕ್ಕ ಆ ವಕೀಲರು ಯಾರೆನ್ನುವಿರಾ? ಅವರು ಕಯ್ಯೂರು ರೈತ ಹೋರಾಟದ ಆರೋಪಿಗಳ ಪರವಾಗಿ ವಕಾಲತ್ತು ವಹಿಸಿದ್ದ ಸುಪ್ರಸಿದ್ಧ ನ್ಯಾಯವಾದಿ ರಂಗನಾಥರಾವ್ ತರಬೇಲಕರ್!

■ ಹಸನ್ ನಯೀಂ ಸುರಕೋಡ

ಫುಜೂಲ್ ಮಾತಿನೊಳಗಿಂದ... ಒಂದು ಪೆಗ್ ಜ್ಞಾನ




ಕೆಲವರು ಏನಾದರು ವಿಷಯ ಹೇಳುವುದಕ್ಕಿದ್ರೆ ಮಾತ್ರ ಮಾತಾಡ್ತಾರೆ. ...ಲ್ ಮಾತು - ಅಂದ್ರೆ ಮಾತಿಗೆ ಅಂತ ಮಾತು- ಅವರಿಗೆ ಇಷ್ಟವಿರೋಲ್ಲ. ...ೋ ಏನೋ, ಬೆಂಗಳೂರಿನ ನನ್ನ ಫ್ರೆಂಡ್ಸ್ ಎಲ್ಲ ಇಂಥೋರೇ ಕಣ್ರಿ. ...ದ್ರೋ ವಿಷಯ ತಿಳಿಸಲಿಕ್ಕೆ ಫೋನು ಮಾಡ್ತೀನಿ. ತಿಳಿಸೋ ವಿಷಯ ಆ ಬಗ್ಗೆ ಮಾತುಕತೆ ಮುಗಿದ್ಮೇಲೆ, ಸ್ನೇಹಿತ್ರಲ್ಲಿ ಅಂತ ಒಂಚೂರು ...ಮು ಮಾತಿಗೆ ಇನ್ನೇನು ಇಳಿಬೇಕು ಅಷ್ಟರಲ್ಲಿ ಅವರೆಲ್ಲ ಹೊಡಿಯೋ ...ದ ಫೇವರೆಟ್ ಡೈಲಾಗ್ 'ಒಂದು ಐದು ನಿಮಿಷ ಬಿಟ್ಟು ಫೋನು ...ತ್ತೀನಿ'. ಹೇಳಿಕೇಳಿ ನಾನು ಟ್ಯುಬ್ ಲೈಟು ಸಾರ್, ಫೋನ್ ಮಾಡ್ತಾರೆ ಕಾಯ್ತ ಕೂರ್ತಿದ್ದೆ. ಕಾಲಾಂತರದ ಅನುಭವದೊಳ್ ಆ ಡೈಲಾಗಿನ ಗೊತ್ತಾಯ್ತು ಬುದ್ಧಿ: 'ಇಕ್ಕೋ ನನ್ಮಗನೆ ಫೋನು, ನಂಗೆ ಬೇರೆ ...ಯ್ತು' ಅಂತ! ಇದು ಮಾಮೂಲಿ ವರಸೆಯಾದ್ರೆ, ಕೆಲವರದ್ದು ಸ್ಪೆಷಲ್: ...ರೋ ಆಟೋ/ಕಾರು ಟರ್ನ್ ಆಗ್ತಿದೆ ಕಣ್ರಿ... ಸಿಗ್ನಲ್ ಇಲ್ಲ... ಮತ್ತೇ ...ಶ್...' (ಕಟ್). ಬಿಡಿ ಪಾಪ. ದೊಡ್ಡ ನಗರ. ಗಿಜಿಗಿಜಿ-ಗಜಿಬಿಜಿ ಅಂತ ನಾನೇ ಸಮಾಧಾನ ಮಾಡ್ಕೊಂಡು ಮಾಫ್ ಮಾಡೋದು ಅಭ್ಯಾಸ ...ಕ್ಕೊಂಡಿದೀನಿ. ಆದ್ರೆ ಜಗತ್ತಲ್ಲಿ ಎಲ್ರು ಹಂಗಿರಲ್ಲ ಕಣ್ರಿ. ನಮ್ಮ ಕುಂದಾಪುರದ ...ಸ್ತ್ ಶಶಿ ಬಾಯ್‌ನ ನೋಡಿ (ಭಾಯ್ ಅಲ್ಲ, ಬಾಯ್-ಹುಡುಗ, ...ನೆ, ಬಚ್ಚಾ). ವಟ ವಟ ಅನ್ನೋಲ್ಲ. ಆದ್ರೆ ಸುಮ್ಮನೆ ಇರದೆ ಏನಾದ್ರು ...ಮು ಎತ್ತಿ ಮಾತಾಡ್ತ ಕುತೂಹಲದ ಸಂಗತಿ ಬಿಚ್ಚೋ ವೆರಿ ಗುಡ್ ...ಟ್. ಶಶಿ ಗಂಗಾವತಿ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದು ಅಲ್ಲಿ ಬಾರೊಂದರಲ್ಲಿ ...ಕೊಂಡ ಮಾಮೂಲಿ ಮಾತಿನೊಳಗಿಂದ ಆ ಸಮ್ಮೇಳನದ ರೂಪ ...ಕೊಟ್ಟದ್ದು ಪತ್ರಿಕೆಯ ಜಾಣ-ಜಾಣೆಯರಿಗೆ ನೆನಪಿರಬಹುದು. ಹೇಳಲಿಕ್ಕೆ ...ಮ ನಿಗದಿತ ವಿಷಯ ಅರಿತಿಲ್ಲದೆ ಮಾತನಾಡೋದು, ಅಥವಾ ಅಂಥ ...ಕ್ಯ ಸಂಗತಿ ಇಲ್ಲದೆ ಮಾಮೂಲಿ ಅನಿಸೋ ವಿಷಯ ಮಾತನಾಡೋದನ್ನು ಕುಲಕೋಟಿ 'ಫುಜೂಲ್', 'ಫಾಲ್ತು', 'ಫುರ್ಕಟೆ', 'ಗ್ಯಾಸ್', 'ತೌಡು ...ಟ್ಟೋದು' ಇತ್ಯಾದಿಗಳಿಂದ ಬಣ್ಣಿಸುತ್ತೆ, ಮತ್ತು ಇದು ಮಾಡ್ಲಿಕ್ಕೆ ಕೆಲಸ ...ದ, ಯೋಚಿಸೋಷ್ಟು ಮೆದುಳಿಲ್ಲದ ಸೋಮಾರಿ ದಡ್ಡ ಮುಂಡೇವಕ್ಕೆ ...ಕ್ಕಾದ ಪ್ರಾಕಾರ ಅನ್ನೋ ಅಸಡ್ಡೆಯೂ ಇದೆ. ಇರಲಿ, ಸದರಿ ಬ್ಲಾಗಿಗನೂ ...ಬಗೆಯ ಫುಜೂಲ್ ದಡ್ಡಪಡೆಗೆ ಸೇರಿದೋನು. ಹಾಗಾಗಿ, ಫುರ್ಕಟೆ ...ತುಗಳು ಅಥವಾ ಮಾಮೂಲಿ ಸಂಗತಿಗಳ ಸಂದಿಯಿಂದ ಸೋಸಿಕೊಂಡು ...ಧಾರಣವಾದ ಸಂಗತಿಗಳು ಥಟ್ಟನೇ ಹೊರಬರುವ ಕೆಲವು ...ಉದಾಹರಣೆಗಳನ್ನು ಹೇಳುತ್ತೇನೆ.

...ಬಸ್ಸು, ರೈಲುಗಳ ಪ್ರಯಾಣದಲ್ಲಿ ಸುತ್ತಮುತ್ತಲಿನ ಅಪರಿಚಿತ ಪ್ರಯಾಣಿಕರ ...ತುಗಳಿಗೆ ನಮ್ಮ ಕಿವಿ ತೆರೆದುಕೊಂಡಿದ್ರೆ, ಅಥವಾ ಅಪರಿಚಿತ ...ಪ್ರಯಾಣಿಕರು ಮಾತಿಗೆಳೆದಾಗ ಸ್ವಲ್ಪ ಸಹನೆಯಿಂದ 'ಹುಂ..ಹುಂ..' ಅಂತ ...ತ್ರ ಸಾಕು, ಒಂದು ಬಗೆಯ ಲೋಕಜ್ಞಾನ ದಕ್ಕುತ್ತದೆ. ಹೊಟೇಲುಗಳಲ್ಲಿ ...ಮುತ್ತ ಕೂತವರ ಮಾತುಗಳಿಗೆ ಕಿವಿ ನೆಟ್ಟಗೆ ಮಾಡಿಕೊಂಡಿದ್ದರೆ ...ನಮೂನೆಯ ಲೋಕಾಭಿಪ್ರಾಯಗಳನ್ನು ನಾವು ಕೇಳಿಸಿಕೊಳ್ಳಬಹುದು. ...ೂಲ್ ಮಾತುಗಳ ನಡುವಿಂದ ಒಂದು ಪೆಗ್ ಜ್ಞಾನ ಅನಾಯಾಸವಾಗಿ ...ಬಹುದು.

...ನಿನ್ನೆ (16.12.2012) ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯದ ...ಸ್ಥಾನದಲ್ಲಿ ವಿವಾದಿತ 'ಮಡೆಸ್ನಾನ' ಶುರುವಾಗಿದೆ. ವಿವಾದ ಹೈಕೋರ್ಟ್ ...ನ್ನು ದಾಟಿ ಸುಪ್ರೀಂಕೋರ್ಟು ಕಟ್ಟೆ ಹತ್ತಿರೋದು, ಪ್ರಗತಿಪರ ಸಂಘಗಳ ...ರೋಧ, ವಿದ್ವಾಂಸರ ವಿಶ್ಲೇಷಣೆ, ಚೆಡ್ಡಿಗಳ ಕರಾಮತ್ತು ಈಗಾಗಲೇ ಖ್ಯಾತವಾಗಿದೆ. ...ಇರೋವಂಥ ಸಂದರ್ಭದೋಳ್ 'ಮಡೆಸ್ನಾನ' ಆಚರಣೆಯ ಫೋಟೋ ...ಮುಖಪುಟದಲ್ಲಿರೋ ಕನ್ನಡ ಪತ್ರಿಕೆಯನ್ನು ಹಿಡಿದು ಉಡುಪಿಯಿಂದ ...ಗಳೂರಿಗೆ ಹೋಗೋ ಕ.ರಾ.ರ.ಸಾ. ಬಸ್ಸು ಹತ್ತಿದೆ. ಕಂಡಕ್ಟರ್ ಟಿಕೆಟು ...ಟ್ಟ ಮೇಲೆ ಪೇಪರು ಬಿಚ್ಚಿ ಸುದ್ದಿ ಓದುತ್ತಿದ್ದೆ. ಕಂಡಕ್ಟರ್ ಎಲ್ಲಿದ್ದರೋ ...ನೋ, ನನ್ನ ಪಕ್ಕ ನಿಂತು 'ನೋಡ್ರಿ ಸಾರ್, ಅನ್ನಾನೇ ದೇವ್ರು ಅಂತಾರ, ...ದ ಮ್ಯಾಲೆ ಹೊಳ್ಯಾಡ್ತಾರ, ಏನನ್ನೇಕ್ರಿ ಸಾರ್' ಅಂದ್ರು. ಕಂಡಕ್ಟರುಗಳು ...ಯ ಅಭ್ಯಾಸದಲ್ಲಿ ವಾಚಾಳಿಗಳಾಗಿ ಇರಬಹುದೇನೋ, ಸರಿ. ಆದ್ರೆ ...ಬರಿ ಲೋಕಾಭಿರಾಮದ ಮಾತಲ್ಲ ತಾನೇ. ಅದು ಇಡಿ 'ಮಡೆಸ್ನಾನ' ...ತ ಒಂದು ಖಚಿತವಾದ ನಿಲುವು. ಅದನ್ನು ಆ ಹೊತ್ತಲ್ಲಿ, ಅಪರಿಚಿತ ...ಯಾಣಿಕನ ಜೊತೆ, ಅವನ ನಿಲುವೇನೋ ಯೋಚಿಸದೆ, ಅವರಿಗೆ ಹೇಳಬೇಕು ...ಕ ಯಾಕನ್ನಿಸಿತು ಅಂತ ನಂಗೆ ಆಶ್ಚರ್ಯ ಆಗ್ತದೆ. ಮಾತು ಮಾತಲ್ಲಿ ...ಟ್ಟೆಯಲ್ಲಿದ್ದದ್ದು ಹೀಗೆ ಬಂದುಬಿಡ್ತದೋ ಏನೋ. ಫುಜೂಲ್ ಮಾತಾಡೋ ...ಮಿಷ್ಯರೂ ಹೀಗೆ ಷಾಕ್ ಕೊಡಬಲ್ಲರು ಕಣ್ರಿ.


'ದಿ ಹಿಂದು' ಪತ್ರಿಕೆಯಲ್ಲಿ ಪ್ರತಿ ಆದಿತ್ಯವಾರ, ಮದುವೆಯಾಗಲು ಬಯಸುವ ...ಣ್ಣು-ಗಂಡುಗಳಿಗೆ, ಗಂಡು-ಹೆಣ್ಣುಗಳ ಮಾಹಿತಿ ಒದಗಿಸುವ ಎರಡು ಪುಟಗಳ ...ವಾಹ ಸಂಬಂಧಿ' ಜಾಹಿರಾತು (ಮ್ಯಾಟ್ರಿಮೋನಿಯಲ್) ಲಾಗಾಯ್ತಿನಿಂದಲೂ ...ಪ್ರಕಟವಾಗುತ್ತಿದೆ. ನಿಮಗೆ ಮದುವೆಯಾಗಿದ್ದರೂ, ಆಗದೇ ಇದ್ದರೂ, ಆಜನ್ಮ ...ಬ್ರಹ್ಮಚಾರಿಣಿ/ಚಾರಿ ಆಗಿ ಉಳಿಯುವ ಸಂಕಲ್ಪ ಮಾಡಿಕೊಂಡಿದ್ದರೂ, ಫುಜೂಲ್ ...ಕುತೂಹಲಕ್ಕಾದರೂ ಒಮ್ಮೆ ಈ ಎರಡು ಪುಟಗಳನ್ನು ಓದಿ ನೋಡಿ. ...ದರಲ್ಲಿ 'ವರ ಬೇಕು' ಮತ್ತು 'ವಧು ಬೇಕು' ಎಂಬ ಪ್ರತ್ಯೇಕ ವಿಭಾಗಗಳಿರುತ್ತವೆ. ...ಈ ಎರಡು ವಿಭಾಗಗಳ ಒಂದೊಂದು ಸ್ಯಾಂಪಲ್ ನೋಡಿದರೂ ಸಾಕು, ...ವರಗಳ ವರಸೆಯಲ್ಲಿರುವ ಗಜ್ಜಿನ ವ್ಯತ್ಯಾಸ ತಕ್ಷಣ ಗಮನಕ್ಕೆ ಬರುತ್ತದೆ. ...'ವರ ಬೇಕು' ವಿಭಾಗದಲ್ಲಿ ವಧುವಿನ ರೂಪ, ಗುಣ, ವಿದ್ಯಾರ್ಹತೆ, ಉದ್ಯೋಗ, ವರಮಾನದ ವಿವರಗಳಿರುವುದು ಸಾಮಾನ್ಯವಾಗಿರುತ್ತದೆ. ಆದರೆ 'ವಧು ಬೇಕು' ವಿಭಾಗದಲ್ಲಿ ವರನ ವಿದ್ಯಾರ್ಹತೆ, ಉದ್ಯೋಗ, ವರಮಾನಗಳು ಮಾತ್ರ ಇರುತ್ತವೆ-ಹುಡುಗನ ರೂಪ, ಗುಣ ಎಂತಿದ್ದರೂ ಅಂವ ಮದುವೆಗೆ ಅರ್ಹ ಅಲ್ಲ್ವಾ ಸಾರ್! ಇರಲಿ. ಎರಡೂ ಕಡೆ ಜಾತಿ, ಉಪಜಾತಿಗಳ ಖಚಿತ ವಿವರ ಸಾಮಾನ್ಯ. ಆದರೆ 'ವರ ಬೇಕು' ವಿಭಾಗದಲ್ಲಿ ಹಿಂದೂ ಹುಡುಗಿಯರ ಜಾತಕದ ವಿವರಗಳನ್ನು ವಿಸ್ತಾರವಾಗಿಯೇ ಕೊಡಲಾಗಿರುತ್ತದೆ, ಕೆಲವೊಂದರಲ್ಲಿ ಜಾತಕದಲ್ಲಿರುವ ದೋಷವನ್ನೂ ವಿಶೇಷವಾಗಿ ಕಾಣಿಸಲಾಗಿರುತ್ತದೆ! 'ಸಾವಿರ ಸುಳ್ಳು ಹೇಳಿ ಮದುವೆ ಮಾಡು' ಎಂಬ ಗಾದೆಮಾತನ್ನು ನಂಬಿಕೊಂಡು ಮಗಳ ವೈವಾಹಿಕ ಜೀವನವನ್ನು ನರಕ ಮಾಡಲು ಯಾವ ತಂದೆ, ತಾಯಿಯೂ ಬಯಸುವುದಿಲ್ಲ ಅಲ್ಲವಾ? ಅಂತರ್ಜಾತೀಯ ವಿವಾಹವಾದ ಹುಡುಗಿಯರ ತಂದೆ-ತಾಯಂದಿರು ತಮ್ಮ ಪ್ರತ್ಯೇಕ ಜಾತಿಯ ವಿವರಗಳನ್ನು ನೀಡಿ-ಈ ಎರಡರಲ್ಲಿ ಯಾವುದೇ ಒಂದು ಜಾತಿಯ ವರನಾದರೂ ಸೈ ಎಂದು ಬೇಡುವುದೂ ಸಾಮಾನ್ಯ: ಯಥಾಪ್ರಕಾರ 'ವಧು ಬೇಕು' ವಿಭಾಗದಲ್ಲಿ ಈ ವಿವರಗಳಿರುವುದಿಲ್ಲ ಎಂಬುದೂ ಸೋಜಿಗಲ್ಲವಾ. 'ಜಾತಿ ಯಾವುದಾದರೂ ಸೈ' ಎಂಬ ಆಹ್ವಾನವೂ 'ವರ ಬೇಕು' ವಿಭಾಗದಲ್ಲಿರುವುದೇ ಹೆಚ್ಚು! ಯಾಕೋ? ಆದರೆ ಎರಡೂ ವಿಭಾಗಗಳಲ್ಲೂ ವಧು/ವರನ ಕುಟುಂಬದವರು ಸ್ಥಿತಿವಂತರೂ, ಅಧಿಕಾರಸ್ಥರೂ ಆಗಿದ್ದರೆ ಅವರ ಬೇಡಿಕೆಯ ರಂಗೇ ಬೇರೆ ಬುದ್ಧಿ. ಕೆಲವರು ಹುಡುಗ ಐ.ಎ.ಎಸ್./ಐ.ಪಿ.ಎಸ್./ಐ.ಆರ್.ಎಸ್. ಆಗಿದ್ದರೆ ಮಾತ್ರ ಸಂಪರ್ಕಿಸಬಹುದು ಎಂದರೆ ಮತ್ತೆ ಕೆಲವರು ಇಷ್ಟಲ್ಲದೇ ಹುಡುಗ ದೇಶದ ವಿಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿತವನಾಗಿರಲೇ ಬೇಕು ಎಂಬ ಅಧಿಕ ಷರತ್ತನ್ನೂ ಹಾಕಿರುತ್ತಾರೆ! ಹುಡುಗನ ಕುಟುಂಬದವರು ಅನುಕೂಲಸ್ಥರಾಗಿದ್ದರಂತೂ, ಹುಡುಗಿ ಈಗ ಏನಾಗಿರಬೇಕು ಎನ್ನುವ ವಿವರಗಳ ಜೊತೆ ಮುಂದೆ ಏನಾಗಲು ತಯಾರಿರಬೇಕು ಎಂದೂ ತಿಳಿಸಿರುತ್ತಾರೆ! ಕುಟುಂಬ ಅನ್ನೋದು ಆಸ್ತಿ-ಅಧಿಕಾರ ಸಂಬಂಧಗಳನ್ನು ಕಟ್ಟುವ ಮತ್ತು ಜತನವಾಗಿಡುವ ಸಂಸ್ಥೆ ಅನ್ನೋದನ್ನು ಅರ್ಥ ಮಾಡಿಕೊಳ್ಳೋಕೆ ನೀವು ವಿದ್ವಾಂಸರೇ ಆಗಬೇಕಿಲ್ಲ, 'ದಿ ಹಿಂದು' ಮ್ಯಾಟ್ರಿಮೋನಿಯಲನ್ನು ಓದಿಕೊಂಡು ಒಂಚೂರಾದರೂ ಅರ್ಥ ಮಾಡಿಕೋಬಹುದು. ಜಾತಿಯಾಧಾರಿತ



ಜನಗಣತಿಗೆ ಈ ವಿಭಾಗಗಳು ಉಪಯುಕ್ತ ಪ್ರಾರಂಭ ಪಠ್ಯಗಳೂ ಆಗಬಹುದೋ ಏನೋ. ಒಂದು ಮಾತನ್ನಂತೂ ಗ್ಯಾರಂಟಿಯಾಗಿ ಹೇಳ್ತೀನಿ: ಚಿಡ್ಡಿ ಪಾಟಲಂಗಳ ಉಸ್ತುವಾರಿಯಲ್ಲಿ ರಚಿತವಾಗುವ 'ಸಮಾಜ ಶಾಸ್ತ್ರ' ಪಠ್ಯ ಪುಸ್ತಕಗಳನ್ನು ಓದಿ ಮಕ್ಕಳು ಹಾಳಾಗಿ ಹತ್ತಿ ಬಿತ್ತಿ ಹೋಗೋದಕ್ಕಿಂತ, ಇಂಥ ಮ್ಯಾಟ್ರಿಮೋನಿಯಲ್ ಅಂಕಣಗಳನ್ನು ಸಂಪಾದಿಸಿ ಕೊಟ್ಟು ಓದಿಸಿದರೆ 'ಸಮಾಜ ಜ್ಞಾನ'ವೂ ಉಳಿಯುತ್ತದೆ, ಲೋಕಜ್ಞಾನವೂ ಬೆಳೆಯುತ್ತದೆ. ಏನಂತೀರಾ ಬ್ರದರ್ಸ್ ಅಂಡ್ ಸಿಸ್ಟರ್ಸ್?

ನನ್ನ ಬೆಂಗಳೂರಿನ ಮಿತ್ರರ ಹಾಗೆ ನಿಮಗೆ ಫುಜೂಲ್ ಮಾತಿನ ಬಗ್ಗೆ ಅಸಹನೆ ಇಲ್ಲದಿದ್ದರೆ, ಈ ವಿಭಾಗವನ್ನು ಓದುತ್ತ ಒಂದು ರೀತಿಯ ಫುಜೂಲ್ ಚಿಂತಕರಾಗಬಹುದು ಸಾ! ನಾನಂತೂ 'ವರ ಬೇಕು' ವಿಭಾಗವನ್ನು ವಿಶೇಷ ಅಧ್ಯಯನ ಕ್ಷೇತ್ರವಾಗಿ ತಗೊಂಡಿದೀನಿ. ಎಷ್ಟೋ ಆದಿತ್ಯವಾರದ ಮಧ್ಯಾಹ್ನಗಳು ಆ ದಿನ ಓದಿದ 'ವರ ಬೇಕು' ವಿಭಾಗದ ಯಾವುದೋ ಒಂದು ಕೋರಿಕೆ ಮನಸ್ಸಲ್ಲಿ ಕೂತು, ಅದರ ಎಳೆ ಹಿಡಿದು ಒಂದು ಚಿತ್ರಕತೆ ಕಟ್ಟಿಕೊಂಡು, ಫುಜೂಲ್ ಮೆದುಳಿನ ಪರದೆಯ ಮೇಲೆ ಒಂದು ಸಿನಿಮಾ ನೋಡಿದ್ದು ಇದೆ; 'ಲೇಜಿ ಮೈಂಡ್ ಇಸ್ ಎ ಡೆವಿಲ್ಸ್ ವರ್ಕಶಾಪ್' ಅನ್ನೋದು ಸುಳ್ಳು ಸಾರೂ, ಅದನ್ನು ಬದಲಾಯಿಸಿ ನಾನು 'ಫುಜೂಲ್ ಮೈಂಡ್ ಇಸ್ ಎ ಗುಡ್ ಚಿತ್ರಕತೆ ವರ್ಕ್‌ಶಾಪ್' ಅಂತ ಮಾಡ್ಕೊಂಡೀನಿ! ನಿಜಕ್ಕೂ ಅಲ್ಲಿರುವ ವಿವರಗಳು ಒಂದು ದೊಡ್ಡ ಕತೆಯನ್ನು ರಹಸ್ಯ ಸಂದೇಶದ ಬಗೆಯಲ್ಲಿ ನಮಗೆ ದಾಟಿಸಲಾಗಿದೆ ಎನ್ನುವಂತಿರುತ್ತವೆ. ಉದಾಹರಣೆಗೆ: 'ವಯಸ್ಸು 38, ಗೋಧಿ ಬಣ್ಣ, ತೆಳುವಾಗಿ ಆಕರ್ಷಕ, ಎಂ.ಎ., 2 ಪಿಹೆಚ್.ಡಿ., ವಿದೇಶಾನುಭವ, ಪ್ರೊಫೆಸರ್/ 50,000'. ಅರೇ! ಇಸ್ಸಿ..! '2 ಪಿ.ಹೆಚ್.ಡಿ.' ಅಂತ ಬೊಟ್ಟು ಮಾಡಿ ಯಾಕೆ ತೋರ್ಸೋದು. ಸುಂದರಿ, ಬುದ್ಧಿವಂತೆ, ಒಳ್ಳೆ ಉದ್ಯೋಗಸ್ಥೆ. ಇಷ್ಟಿದ್ದೂ 38 ವರ್ಷವಾದ್ರೂ ಯಾಕೆ ಮದುವೆಗೆ ಗಂಡು ಸಿಗಲಿಲ್ಲ ಅನ್ನೋ ಕಡೆ ಫುಜೂಲ್ ಯೋಚನೆ ಹರಿಯದಂತೆ ಮಾಡೋಕ? ಯಾವ ಕೆ.ಬಾಲಚಂದರರ 'ಬೆಂಕಿಯಲ್ಲಿ ಅರಳಿದ ಹೂವು' ಸುಹಾಸಿನಿಯೋ..ಈ ಕನ್ಯೆ..ಅಂತ ಒಂದು ಪಿಕ್ಚರ್ ನಮ್ಮ ತಲೆಯಲ್ಲಿ ಕಟ್ಕೊಲ್ಲ್ವಾ ಸಾರ್?! ಹಾಗೆಯೇ ಮತ್ತೊಂದು ವಿವರ ಇಡಿ ಒಂದು ವಾರ ಸಂಶೋಧನೆಗೆ ಹಚ್ಚಿತು ಸಾ. ಅದೇನು ಅಂದ್ರೆ 'ಬಾರ್ನ್ ಅಗೇನ್ ಕ್ರಿಶ್ಚಿಯನ್ (ಗೋಲ್ಡ್ ವೇರಿಂಗ್)'. ಕ್ರಿಶ್ಚಿಯನ್ನರು ಅಂದ್ರೆ ಯಾವುದೇ ವೈವಿಧ್ಯತೆ ಇಲ್ಲದೆ ಜಗತ್ತಿನಾದ್ಯಂತ ಒಂದೇ ಬಗೆಯ ಮತಶ್ರದ್ಧೆಯುಳ್ಳ ಮತಾಂತರಿಗಳು ಅಂತ ಈ ಚೆಡ್ಡಿಗಳು ಪ್ಯಾಂಪ್ಲೆಟ್ ಹಂಚ್ತಾರೆ ಸಾರ್ ನಮ್ಮೂರುಗಳಲ್ಲಿ, ಹಾಗಾಗಿ, ಈ ಚೆಡ್ಡಿಗಳು ನನ್ನ ಬುದ್ಧಿಯನ್ನು ಸೋಪು ಹಾಕಿ ಸ್ವಚ್ಛ ಮಾಡದೆ ಇರ್ಲಿ ಅಂತ ನಮ್ಮೂರಲ್ಲಿರುವ ಕ್ರಿಶ್ಚಿಯನ್ನರ ವೈವಿಧ್ಯತೆ ಬಗ್ಗೆ ಅಷ್ಟೋ ಇಷ್ಟೋ ತಿಳ್ಕೊಂಡಿದ್ದೆ. ಆದ್ರೆ 'ದೇಹಕ್ಕೆ ಎರಡೆರಡು ಹುಟ್ಟು ಅಸಾಧ್ಯ.. ಆದರೆ ನಿನ್ನ ಮನದ ಸಕಲ ಪಾಪಗಳನ್ನು ಸಂಹರಿಸಿ... ಸಕಲ ಮಧ್ಯವರ್ತಿಗಳ ಭ್ರಾಮಕ ನಂಬಿಕೆ ತಿರಸ್ಕರಿಸಿ.. ದೇವರೊಂದಿಗೆ ನೇರ ಸಂಪರ್ಕ ಸಾಧಿಸುವ ಮಾರ್ಗವನ್ನು ಆಯ್ದುಕೊಳ್ಳುವ ಮೂಲಕ ಮರುಜನ್ಮ ಪಡೆ..' ಎಂದು ಬೋಧಿಸುವ ಈ ಪಂಥದ ವೈಶಿಷ್ಟ್ಯ ಗೊತ್ತಿರಲಿಲ್ಲ, ಮುಖ್ಯವಾಗಿ ರೋಮನ್ ಕ್ಯಾಥೋಲಿಕ್ ಕ್ರಿಶ್ಚಿಯನ್ನರ ನಡುವೆ ಜನಪ್ರಿಯವಾಗಿರುವ ಈ ಪಂಥದ ಬಗ್ಗೆ ತಿಳಿದುಕೊಳ್ಳೋಕೆ 'ವರ ಬೇಕು' ವಿಭಾಗವೂ ಬೋಧಕವಾಯ್ತಲ್ಲ! ಭಕ್ತಿಗೆ ಎಂತೋ ಅಂತೆಯೇ ಜ್ಞಾನಕ್ಕೂ ಅನೇಕಾನೇಕ ಮಾರ್ಗಗಳಲ್ಲವೆ ಆರ್ಯರೇ! ಒಂದು ವಾರ, ನೆಟ್ ಹುಡುಕಿ, ಬಲು ಶ್ಯಾಣೆಯಾದ ಗೆಳೆಯರೊಬ್ಬರನ್ನು ಪದೆಪದೆ ಪೀಡಿಸಿ, ನಮ್ಮೂರ ಚಳವಳಿಯಲ್ಲಿ ನಮಗೆ ಹಿರಿಯ ಸಂಗಾತಿಯಾಗಿರುವ ರೆ.ಫಾ.ವಿಲಿಯಂ ಮಾರ್ಟಿಸರ ಚರಣಕ್ಕೆ ಶರಣಾಗಿ 'ಬಾರ್ನ್ ಅಗೇನ್ ಕ್ರಿಶ್ಚಿಯನ್' ಅಂತ ಚೂರು ಚೂರು ತಿಳಿಯಿತು. ಆದರೆ, ಈ '(ಗೋಲ್ಡ್ ವೇರಿಂಗ್)' ಅನ್ನೋದ್ರ ಬಗ್ಗೆ ಯಾರಿಂದಲ್ಲೂ ಖಚಿತ ಮಾಹಿತಿ ದೊರಕಿಲ್ಲ, ನನ್ನ ಶ್ಯಾಣೆ ಗೆಳೆಯರು ತಿಳಿಸುವ ಆಶ್ವಾಸನೆ ಕೊಟ್ಟಿದ್ದಾರೆ...ಹಾಗೆಯೇ ಕಂನಾಡಿನ ಜಾಣಜಾಣೆಯರು ಹುಡುಕಿ... 'ಜ್ಞಾನ ಭಿಕ್ಷೆಯ ನೀಡಿ ದಯ ತೋರಿ.. ಗುರುವೇ..' ಅಂತ ಪಿ.ಬಿ.ಶ್ರೀನಿವಾಸ್ ಥರ ಹಾಡಿ ಬೇಡುವೆ.

ಈ ವೈವಾಹಿಕ ಜಾಹಿರಾತಿನಲ್ಲಿ ಓದಲು ಸಿಕ್ಕ ಹಾಗು ಇವತ್ತಿಗೂ ನನ್ನಲ್ಲಿ ಊರಿಕೊಂಡಿರುವ ಒಂದು 'ವರ ಬೇಕು' ಕೋರಿಕೆಯ ಸೋಜಿಗ ಹುಟ್ಟಿಸುವ ವಿವರ ಹೇಳಿ ಮುಗಿಸುವೆ. ಇದು ಸುಮಾರು ಎರಡು ತಿಂಗಳ ಹಿಂದೆ ಬಂದಿತ್ತು, ಮಗಳಿಗೆ ವರನನ್ನು ಕೋರಿ ತಂದೆ ನೀಡಿರುವ ಜಾಹಿರಾತು. '28 ವರ್ಷ. ವಿಧವೆ. ಒಳ್ಳೆ ವಿದ್ಯಾವಂತೆ. ಕೈತುಂಬ ಸಂಬಳ ಬರುವ ಕೆಲಸ. ರೂಪವತಿ, ಒಳ್ಳೆ ಸಂಸಾರಸ್ಥೆಯಾಗುವ ಮನೋಭಾವದವಳು'. ಇಷ್ಟು ವಿವರದ ಕೊನೆಯಲ್ಲಿ ದಂಗು ಹೊಡೆಸುವ ಒಂದು ವಿವರ ಹೀಗಿತ್ತು: 'ಮೊದಲ ಗಂಡ ಮದುವೆಯಾದ ಒಂದೇ ತಿಂಗಳ ಒಳಗೆ ಆಕಸ್ಮಿಕ ಅಪಘಾತದಲ್ಲಿ ಮೃತನಾಗಿರುವನು'. ಸನ್ನಿವೇಶಕ್ಕೆ ಸೂಕ್ತವಾದ ನಿಖರದ ವಿವರ ಕೊಟ್ಟ ನಂತರವೂ, ಮರೆತ ಯಾವುದೋ ಮಾತನ್ನು ಹೇಳಲೇಬೇಕಿತ್ತು ಎಂಬ ಜರೂರಲ್ಲಿ ಈ ವಿವರ ಸೇರಿಸಬೇಕು ಅಂತ ಆ ತಂದೆ-ತಾಯಂದಿರಿಗೆ ಯಾಕೆ ಅನಿಸಿತೋ - ಅದೂ 'ಒಂದೇ ತಿಂಗಳ ಒಳಗೆ' ಎಂಬ ಒತ್ತುಕೊಟ್ಟು!? ಆ ಕುಟುಂಬ ಈ ಒಂದು ವಿವರದ ಮೂಲಕ ನಮ್ಮ ಸಮಾಜದಲ್ಲಿ ಹೆಂಗಸರ ಕನ್ಯತ್ವ, ಶೀಲ, ಮದುವೆ-ವೈಧವ್ಯಗಳ ಕುರಿತು ಇರುವ ಅನೇಕಾನೇಕ ಪೂರ್ವಾಗ್ರಹಗಳಿಗೆ ಅಚಾನಕ್ ಆಗಿ ಒಂದು ಪ್ರತಿಮೆ ಕಟ್ಟಿಕೊಟ್ಟಂತೆ ಕಾಣಿಸುತ್ತದೆ. ಫುಜೂಲ್ ಸಂಗತಿಗಳು ಅಚಾನಕ್ಕಾಗಿ ತೆರೆದುಕೊಡುವ ಒಂದು ಬಡಾ ಪೆಗ್ ಅರಿವಿಗೆ ಚಿಯರ್ಸ್ ಹೇಳೋಣ. ನಮ್ಮಂಥ ಫುಜೂಲ್ ಮಾತುವಾಲಗಳನ್ನು ಸಹಿಸಿಕೊಳ್ಳುವ ತಾಳ್ಮೆಯನ್ನು ನಮ್ಮ ಸ್ನೇಹಿತರಿಗೆ ದೇವಧೂತನು ಕರುಣಿಸಲಿ. ಆಮೇನ್.



ಸೆರೆಮನೆ ಸಂವೇದನೆ ಮತ್ತು ಸಾಹಿತ್ಯ

ಐತಿಹಾಸಿಕವಾಗಿ ಪ್ರಭುತ್ವವೆಂಬ ಸಂಸ್ಥೆಯು ಬೆಳವಣಿಗೆಯಾಗುವುದರೊಂದಿಗೆ ಸೆರೆಮನೆಯೆಂಬ ರಚನೆಯು ಅದರ ಒಂದು ಉಪಕರಣವಾಗಿ ತಲೆಯೆತ್ತಿತು. ಪ್ರಭುತ್ವವು ಹೆಚ್ಚೆಚ್ಚು ದಮನಕಾರಿಯಾದಷ್ಟೂ ಸೆರೆಮನೆಗಳು ವಿಸ್ತಾರವಾಗುತ್ತಾ ಹೋದವು. ಅತೀವ ಪ್ರಮಾಣದ ಅಸಮಾನತೆ ಇರುವ ಮತ್ತು ಅಸಮಾನತೆ ಹೆಚ್ಚುತ್ತಾ ಹೋಗುತ್ತಿರುವ ಯಾವುದೇ ಸಮಾಜದಲ್ಲಿ ಪ್ರಭುತ್ವವು ಅಸಮಾನತೆಯ ಶ್ರೇಣಿಯ ಒಂದು ತುದಿಯಲ್ಲಿರುವವರ ಉಪಕರಣವೇ ಆಗಿದೆ. ಅಂಥಲ್ಲಿ ಪ್ರಭುತ್ವವು ಶೋಷಣಾ ವ್ಯವಸ್ಥೆಯನ್ನು ಬಲಪಡಿಸುತ್ತಾ ಹೋಗುವ ಎಲ್ಲಾ ಬಗೆಯ ಪ್ರತಿಗಾಮಿತನದ ಪ್ರತೀಕವೇ ಆಗಿರುತ್ತದೆ.

ರಾಮಮನೋಹರ ಲೋಹಿಯಾ ಅವರು ಸಾಮಾಜಿಕ ಬದಲಾವಣೆಯ ಅಸ್ತ್ರಗಳಾಗಿ ಓಟು, ಗುದ್ದಲಿ ಮತ್ತು ಸೆರೆಮನೆಗಳನ್ನು ಸೂಚಿಸಿದ್ದರು. ಸ್ವಾತಂತ್ರ್ಯ ಚಳವಳಿಯಿಂದ ಲಭ್ಯವಾದ ಓಟಿನ ಹಕ್ಕು ನಮಗೆ ಹೊಸದಾಗಿ ಸಿಕ್ಕ ರಾಜಕೀಯ ಅವಕಾಶವೆಂದು ಲೋಹಿಯಾ ಬಗೆದಿರಬಹುದು. ಗುದ್ದಲಿಯು ವಿಧಾಯಕ ಕಾರ್ಯಕ್ರಮದ ಸಂಕೇತವಾಗಿದ್ದರೆ ಸೆರೆಮನೆಯೆಂಬುದು 'ಸ್ವಾತಂತ್ರ್ಯೋತ್ತರ' ಕಾಲದಲ್ಲೂ ಮುಂದುವರೆಯಲೇಬೇಕಾಗಿದ್ದ ಹೋರಾಟದ ಸಂಕೇತವಾಗಿತ್ತು.

ಶಾಂತಿಯುತ ಹೋರಾಟದ ಮಾರ್ಗದಲ್ಲಿ ವಿಶ್ವಾಸ ಹೊಂದಿದ್ದ ಲೋಹಿಯಾ ಅವರು ಹೋರಾಟದ ಸಂಕೇತವಾಗಿ ಸೆರೆಮನೆಯನ್ನು ಆಯ್ದುಕೊಂಡಿರುವುದಕ್ಕೆ ಕಾರಣವಿದೆ. ಸಾಂಕೇತಿಕ ಹೋರಾಟವಲ್ಲದೇ ತಮಗೆ ವಿರೋಧಿಸಲೇಬೇಕೆನಿಸಿದ್ದನ್ನು ಅದರ ತಾರ್ಕಿಕ ಅಂತ್ಯದವರೆಗೆ ತೆಗೆದುಕೊಂಡು ಹೋಗುವ ಯಾರೇ ಆಗಲಿ ಸೆರೆಮನೆಯನ್ನು ತಲುಪಲೇಬೇಕಾಗುತ್ತದೆ. ಲೋಹಿಯಾರು ಬದುಕಿದ್ದ ಕಾಲದಲ್ಲೂ ಇಂದೂ ಅದೇ ವಾಸ್ತವ ಸತ್ಯವಾಗಿದೆ.


ಐತಿಹಾಸಿಕವಾಗಿ ಪ್ರಭುತ್ವವೆಂಬ ಸಂಸ್ಥೆಯು ಬೆಳವಣಿಗೆಯಾಗುವುದರೊಂದಿಗೆ ಸೆರೆಮನೆಯೆಂಬ ರಚನೆಯು ಅದರ ಒಂದು ಉಪಕರಣವಾಗಿ ತಲೆಯೆತ್ತಿತು. ಪ್ರಭುತ್ವವು ಹೆಚ್ಚೆಚ್ಚು ದಮನಕಾರಿಯಾದಷ್ಟೂ ಸೆರೆಮನೆಗಳು ವಿಸ್ತಾರವಾಗುತ್ತಾ ಹೋದವು. ಅತೀವ ಪ್ರಮಾಣದ ಅಸಮಾನತೆ ಇರುವ ಮತ್ತು ಅಸಮಾನತೆ ಹೆಚ್ಚುತ್ತಾ ಹೋಗುತ್ತಿರುವ ಯಾವುದೇ ಸಮಾಜದಲ್ಲಿ ಪ್ರಭುತ್ವವು ಅಸಮಾನತೆಯ ಶ್ರೇಣಿಯ ಒಂದು ತುದಿಯಲ್ಲಿರುವವರ ಉಪಕರಣವೇ ಆಗಿದೆ. ಅಂಥಲ್ಲಿ ಪ್ರಭುತ್ವವು ಶೋಷಣಾ ವ್ಯವಸ್ಥೆಯನ್ನು ಬಲಪಡಿಸುತ್ತಾ ಹೋಗುವ ಎಲ್ಲಾ ಬಗೆಯ ಪ್ರತಿಗಾಮಿತನದ ಪ್ರತೀಕವೇ ಆಗಿರುತ್ತದೆ.

ದಮನ ಹಾಗೂ ಅಸಮಾನತೆ ತೀವ್ರವಾಗುತ್ತಿರುವಾಗ ಅಂತಹ ಪ್ರಭುತ್ವದ ಕೈಯ್ಯಲ್ಲಿರುವ ಸೆರೆಮನೆಯೆಂಬ ಉಪಕರಣವು ಹೆಚ್ಚೆಚ್ಚು ಬಳಕೆಯಾಗಲೇಬೇಕಾಗುತ್ತದೆ. ಆಗ ಅದು ಕೈಯ್ಯಲ್ಲಿ ಅಸ್ತ್ರವನ್ನು ಹಿಡಿದವರನ್ನು ಮಾತ್ರ ಹಿಡಿದು ಹಾಕುವುದಿಲ್ಲ; ಲೇಖನಿಯನ್ನು ಝಳಪಿಸುವ ಲೇಖಕರನ್ನೂ ಒಳಗೆ ಹಾಕುತ್ತದೆ. ಏಕೆಂದರೆ ಬರಹವೆನ್ನುವುದು ಕೇವಲ ಆತ್ಮಸಂತೋಷದ ಗೀಳಾಗಿರದೆ ಸಾಮಾಜಿಕ ಕ್ರಿಯೆಯಾಗಿದೆ. ಜನರೆಡೆಗಿನ ಬದ್ಧತೆ, ಸಮಾಜದಲ್ಲಿ ಏನು ನಡೆಯುತ್ತಿದೆಯೋ ಆ ಬಾಹ್ಯದ ಸತ್ಯಕ್ಕೆ ಬದ್ಧತೆಯು ಬರಹಗಾರರನ್ನು ತೀವ್ರವಾಗಿ ಕಾಡುತ್ತದೆ. 'ಬಾಹ್ಯದ ಸತ್ಯವು ಆತ್ಮದ ಒಡಲಲ್ಲಿ ಹುಟ್ಟಿದಾಗ' ಅರಳಿಕೊಳ್ಳುವ ಕಲೆಯಲ್ಲಿ ಪ್ರಭುತ್ವವೂ ಬೆತ್ತಲಾಗುತ್ತದೆ. ಆ ರೀತಿ ತನ್ನನ್ನು ಬೆತ್ತಲು ಮಾಡಿದ ಸಾಹಿತಿಯನ್ನು ಅಪಾಯಕಾರಿಯೆಂದು ಆಳುವವರು ಪರಿಗಣಿಸುತ್ತಾರೆ.

ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದ ಸರ್ಕಾರಗಳು ವೊಲೆ ಸೊಯೆಂಕಾ (ನೈಜೀರಿಯಾ), ಗೂಗಿ ವಾ ಥಿಯಾಂಗೋ (ಕೀನ್ಯಾ), ಕೆನ್ ಸಾರೋ ವಿವಾ (ನೈಜೀರಿಯಾ), ನೆರೂಡ (ಚಿಲಿ) ಇವರೆಲ್ಲರನ್ನು ಅಪಾಯಕಾರಿಯೆಂದು ಪರಿಗಣಿಸಿದ್ದು ಹಾಗೆಯೇ. ಅವರೆಲ್ಲರಿಗೆ ಸೆರೆಮನೆ, ಗಡೀಪಾರು, ನೇಣುಗಂಬಗಳು ಕೇವಲ ರೂಪಕಗಳಾಗಿರಲಿಲ್ಲ. ಸೆರೆಮನೆಯೊಳಗೂ ಅದಮ್ಯ ಜೀವನ ಪ್ರೀತಿಯನ್ನು ತೋರುವ ಅತ್ಯುತ್ತಮ ಕವಿತೆಗಳನ್ನು ಬರೆದ ಟರ್ಕಿ ದೇಶದ ಹಿಕ್ಮತ್‌ಗೆ, ಮತ್ತು ನಮ್ಮದೇ ದೇಶದ (ಅವಿಭಜಿತ ಭಾರತ) ಫೈಜ್ ಅಹ್ಮದ್ ಫೈಜ್‌ಗೆ, ಆಂಧ್ರದ ಕ್ರಾಂತಿಕಾರಿ ಕವಿ ಚೆರಬಂಡರಾಜುವಿಗೆ ಸೆರೆಮನೆಯೆಂದರೆ ಸೆರೆಮನೆಯೇ ಆಗಿತ್ತು.

ಬರಹಗಾರರು ಚಳವಳಿಯೊಂದರಲ್ಲಿ ಪಾಲ್ಗೊಳ್ಳುವುದೆಂದರೆ ಕಡ್ಡಾಯವಾಗಿ ಬೀದಿಯಲ್ಲಿ ಘೋಷಣೆ ಕೂಗಬೇಕು, ಪ್ರತಿನಿತ್ಯ ಹೋರಾಟನಿರತ ಜನರೊಂದಿಗೆ ಮೆರವಣಿಗೆಯಲ್ಲಿ ಹೆಜ್ಜೆ ಹಾಕಲೇಬೇಕು, ಘೋಷಣೆಗಳನ್ನು ಹಾಗೂ ಹೋರಾಟದ ಗೀತೆಗಳನ್ನು ಹೊಸೆದು ಕೊಡಬೇಕು, ಪ್ರತೀಬಾರೀ ಲಾಠಿಚಾರ್ಜ್ ನಡೆದಾಗಲೂ ಒಂದು ಪೆಟ್ಟಾದರೂ ತಿನ್ನಲೇಬೇಕು ಅಥವಾ ಲಾಠಿಚಾರ್ಜ್ ನಡೆದ ಮರುದಿನ ಅದರ ವಿರುದ್ಧದ ಪ್ರತಿಭಟನೆಯಲ್ಲಿ ದೊಡ್ಡ ಗಂಟಲಲ್ಲಿ ಭಾಷಣ ಮಾಡಲೇಬೇಕು ಎಂದು ನಿಗದಿಪಡಿಸಿ, ಅವರವರ ಪಾಲ್ಗೊಳ್ಳುವಿಕೆಗೆ ತಕ್ಕಂತೆ ಅಂಕಗಳನ್ನು ನೀಡಿ ಅಳೆಯಲಾಗುತ್ತದೆಯೇ? ನಿರ್ದಿಷ್ಟ ಸಂಘಟನೆಯೊಂದರ ಅಧಿಕೃತ ಸದಸ್ಯರಾಗಿಯೇ ತನ್ನ ಬರಹವನ್ನೂ ಸಾಗಿಸಬೇಕು (ಫೈಜ್‌ರಂತೆ, ಪಾಬ್ಲೋ ನೆರೂಡರಂತೆ) ಎಂದು ಹೇಳಲಾಗುತ್ತದೆಯೇ? ಖಂಡಿತಾ ಇಲ್ಲ, ಆ ರೀತಿಯೂ ಪಾಲ್ಗೊಳ್ಳುವುದು ಚಳವಳಿಗೆ ದೊಡ್ಡ ಕೊಡುಗೆಯೇ ಆಗುತ್ತದೆ. ಆದರೆ ತನ್ನ ಬರಹದ ಮೂಲಕವೇ ನಿರ್ಣಾಯಕವಾಗಿ, ಪರಿಣಾಮಕಾರಿಯಾಗಿ ಮತ್ತು ನಿರಂತರವಾಗಿ ಜನರ ಬವಣೆಗಳು ಹಾಗೂ ಪ್ರತಿರೋಧದ ಭಾಗವಾಗುವುದು ಸಾಧ್ಯವೆನ್ನುವುದಕ್ಕೆ ಜಗತ್ತಿನ ಸಾಹಿತ್ಯ ಕ್ಷೇತ್ರದಲ್ಲಿ ಅದೆಷ್ಟೋ ಉದಾಹರಣೆಗಳಿವೆ. ಈ ರೀತಿಯ ಪಾಲುದಾರಿಕೆಯಲ್ಲದೇ ಕೇವಲ ಸಾಂಕೇತಿಕವಾಗಿ, ಕಂಫರ್ಟ್ ಜೋನಿನಿಂದ ಆಗಾಗ್ಗೆ ಅತಿಥಿ ನಟರಾಗಿ ಪಾಲ್ಗೊಂಡು ಹೋಗುವುದಷ್ಟೇ ಆದರೆ ಆಗ ಸೆರೆಮನೆಯು ನಿಜದ ಸೆರೆಯೂ ಆಗಿರುವುದಿಲ್ಲ; ರೂಪಕಾರ್ಥದಲ್ಲೂ ಅದಕ್ಕೊಂದು ಅರ್ಥ ದಕ್ಕುವುದಿಲ್ಲ.


ನಮ್ಮ ಪಕ್ಕದ ಆಂಧ್ರದ ಪ್ರಸಿದ್ಧ ಕ್ರಾಂತಿಕಾರಿ ಕವಿ ವರವರರಾವ್ ಅವರೊಡನೆ ನಾವು ನಡೆಸಿದ ಸಂವಾದವೊಂದರಲ್ಲಿ ಇದಕ್ಕೆ ಸಂಬಂಧಿಸಿದ ಸಂಗತಿಯೊಂದು ಸುಳಿದಿತ್ತು. ಅದು 12 ವರ್ಷಗಳ ಹಿಂದೆ ನಡೆದ ಮಾತುಕತೆ. ನರ್ಮದಾ ಬಚಾವೋ ಆಂದೋಲನದ ಚಳವಳಿ ತೀವ್ರವಾಗಿ ನಡೆಯುತ್ತಿದ್ದ ಕಾಲವದು. ಹೋರಾಟದ ಮಾರ್ಗದ ಕುರಿತ ಚರ್ಚೆಯಲ್ಲಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವ ಕರ್ನಾಟಕದ ಸಾಹಿತಿಯೊಬ್ಬರು ಒಂದು ಮಾತು ಹೇಳಿದ್ದರು.



'ಇಂದು ಮಿಕ್ಕೆಲ್ಲಾ ಹೋರಾಟದ ಮಾರ್ಗಗಳ ಬಗ್ಗೆ ನನಗೆ ವಿಶ್ವಾಸವಿಲ್ಲ; ಮೇಧಾ ಮತ್ತು ಸಂಗಡಿಗರು ನರ್ಮದಾ ಕಣಿವೆಯಲ್ಲಿ ನಡೆಸುತ್ತಿರುವ ಹೋರಾಟದ ವಿಧಾನ ಮಾತ್ರವೇ ಏಕೈಕ ದಾರಿ ಎಂದು ನನ್ನ ಖಚಿತ ಅಭಿಪ್ರಾಯ' ಎಂಬುದು ಅವರ ಮಾತಾಗಿತ್ತು. ಈ ಹೇಳಿಕೆ ಪತ್ರಿಕೆಗಳಲ್ಲಿ ಪ್ರಕಟವಾದ ದಿನವೇ ನಾನು ಮತ್ತು ಇನ್ನೊಬ್ಬ ಗೆಳೆಯರು ಒಂದು ಪತ್ರಿಕೆಗೆ ವರವರರಾವ್‌ರನ್ನು ಸಂದರ್ಶಿಸಲು ಹೋಗಿದ್ದೆವು. ಸಹಜವಾಗಿ ಕನ್ನಡದ ಸಾಹಿತಿಯೊಬ್ಬರ ಈ ಹೇಳಿಕೆಯನ್ನು ಅವರ ಮುಂದಿಟ್ಟು ಅಭಿಪ್ರಾಯವನ್ನು ಕೇಳಿದೆವು. ಅವರು ಅಂಥ ಸಹಜವಾದ ಮಾತನ್ನು ಹೇಳಿದರು 'ಅವರ ಮಾತಿನಲ್ಲಿ ತಪ್ಪೇನಿಲ್ಲ, ಆದರಲ್ಲೂ ಲೇಖಕರೊಬ್ಬರು ಚಳವಳಿಯಲ್ಲಿ ಯಾವ ರೀತಿಯಲ್ಲಿ ಭಾಗವಹಿಸಬೇಕೆಂದು ನಿರ್ದೇಶನ ನೀಡುವುದೂ ಸಾಧ್ಯವಿಲ್ಲ. ಆದರೆ ಅವರಲ್ಲಿ ನನ್ನ ಮನವಿ ಏನೆಂದರೆ - ಅವರು ನರ್ಮದಾ ಕಣಿವೆಯ ಆದಿವಾಸಿಗಳಿಗೆ ನ್ಯಾಯ ಸಿಗುವವರೆಗೂ, ಅದರ ತಾರ್ಕಿಕ ಅಂತ್ಯದವರೆಗೂ ಆ ಚಳವಳಿಯ ಜೊತೆ ಗುರುತಿಸಿಕೊಂಡು ಅದರಲ್ಲಿ ಭಾಗವಹಿಸಬೇಕು. ತಾನು ಅಷ್ಟೊಂದು ಅಭಿಮಾನಿಸುವ ಚಳವಳಿಯ ಆಗುಹೋಗುಗಳನ್ನು ಹತ್ತಿರದಿಂದ ಗಮನಿಸಬೇಕು. ತನ್ನ ಬರಹದ ಮೂಲಕ ಅದಕ್ಕೆ ನಿರಂತರವಾಗಿ ಸ್ಪಂದಿಸಬೇಕು. ಅಷ್ಟು ಸಾಕು. ಆದರಿಂದ ಅವರಿಗೆ ಈ ದೇಶದ ದಮನಿತರ ಚಳವಳಿಯ ಪರಿಸ್ಥಿತಿ ಅರ್ಥವಾಗುತ್ತದೆ.'

ವರವರರಾವ್ ಅವರ ಮಾತಿನ ಪೂರ್ಣ ಅರ್ಥ ಆಗ ನಮಗೆ ಆಗಿರಲಿಲ್ಲ. ಆದರೆ ಸುಪ್ರೀಂಕೋರ್ಟ್ ಒಳಗೊಂಡಂತೆ ಈ ದೇಶದ ಎಲ್ಲಾ ಸಾಂವಿಧಾನಿಕ ಸಂಸ್ಥೆಗಳೂ ನರ್ಮದಾ ಕಣಿವೆಯ ಜನರಿಗೆ ನ್ಯಾಯ ಒದಗಿಸಲು ವಿಫಲವಾದವು. ವರವರರಾವ್ ಅವರು ಹೇಳಿದ ರೀತಿಯಲ್ಲೇ ಬರಹಗಾರ್ತಿ ಅರುಂಧತಿ ರಾಯ್ ಅಲ್ಲಿನ ಜನರ ಬದುಕಿನ ಚಳವಳಿಯ ಜೊತೆ ತಮ್ಮ ಬರಹಗಳ ಮೂಲಕ ಪಾಲ್ಗೊಂಡಿದ್ದರು. ಅವರ ಆ ಪಾಲ್ಗೊಳ್ಳುವಿಕೆ ಅದುವರೆಗಿನ ಅರುಂಧತಿ ರಾಯ್‌ರನ್ನೇ ಬದಲಿಸಿಬಿಟ್ಟಿತು. ನಮ್ಮ ರಾಜಕೀಯ ವ್ಯವಸ್ಥೆಯ ಕುರಿತಾದ ಅರುಂಧತಿಯವರ ನೋಟ ತೀಕ್ಷ್ಣಗೊಂಡಿತು. ನರ್ಮದಾ ಅಣೆಕಟ್ಟೆಯ ಕುರಿತಾದ ಸುಪ್ರೀಂಕೋರ್ಟಿನ ತೀರ್ಪಿನ ಬಗ್ಗೆ ಏನು ಹೇಳಬೇಕಿತ್ತೋ ಅದನ್ನು ಅವರು ಬರೆದರು. ಅದರ ಫಲವಾಗಿ ಒಂದು ದಿನದ ಮಟ್ಟಿಗೆ ಜೈಲಿಗೆ ಹೋಗಬೇಕಾಗಿ ಬಂದಿತು. ಸ್ವತಃ ಮೇಧಾ ಪಾಟ್ಕರ್ 'ನಮ್ಮ ದೇಶದ ಎಲ್ಲಾ ಸರ್ಕಾರಗಳು ಕೇವಲ ಕಾರ್ಪೋರೇಟ್ ಏಜೆಂಟರಾಗಿ ಪರಿವರ್ತನೆ ಹೊಂದಿವೆ' ಎಂದು ಹೇಳುತ್ತಾ ಇದ್ದಾರೆ.

ಇದು ಏಕೆ ಮುಖ್ಯವಾಗುತ್ತದೆ ಎಂದರೆ, ಜನಸಾಮಾನ್ಯರ ತಿಳಿವಳಿಕೆಗೆ ಗೋಚರವಾಗದ ಒಳನೋಟಗಳು ಬರಹಗಾರರ ಚಿಂತನೆಗಳ ಮೂಲಕ ಚಳವಳಿಗೆ ದಾರಿದೀಪವಾಗಬೇಕು. ನಮ್ಮ ಇವತ್ತಿನ ಪ್ರಭುತ್ವದ ಸ್ವರೂಪದ ಬಗ್ಗೆ, ಇಂದು ಅದು ಅನುಸರಿಸುತ್ತಿರುವ ನೀತಿಗಳು ನಮ್ಮನ್ನು ಎಲ್ಲಿಗೆ ಕೊಂಡೊಯ್ಯಬಹುದೆಂಬುದರ ಬಗ್ಗೆ, ಮಾನವೀಯ ಸಮಾಜವೊಂದರ ಬಯಕೆ ಮತ್ತು ಬದಲಾವಣೆಯ ತುಡಿತ




ಆತ್ಮದೊಳಗಿಂದ ತೀವ್ರವಾಗಿ ಕಾಡಲೇಬೇಕಾದ್ದರ ಬಗ್ಗೆ ಬರಹಗಾರರು ಸಮಾಜದ ಅಂತಃಸಾಕ್ಷಿಗಳಾಗಿ ಬೆಳಕು ತೋರಬೇಕು.

ಜಗತ್ತಿನ ಬೇರೆ ಬೇರೆ ಭಾಷೆಗಳ ಕವಿಗಳು, ಬರಹಗಾರರು ಸೆರೆಮನೆಗೆ ಹೋದಷ್ಟು ನಮ್ಮಲ್ಲಿ ಇಲ್ಲ. ಕನ್ನಡದಲ್ಲಂತೂ ಅದರ ಎದ್ದು ಕಾಣುವ ಗೈರುಹಾಜರಿ ಇದೆ. ಸೆರೆಮನೆಯು ನಿಜದ ಸೆರೆಮನೆಯಾಗಲ್ಲದೇ, ರೂಪಕಾರ್ಥದಲ್ಲೇ ಹೆಚ್ಚು ಬಳಕೆಯಾಗಿರುವುದಕ್ಕೆ ಕಾರಣವೇನಿರಬಹುದು? ಅಸಮಾನತೆ ಹೆಚ್ಚುತ್ತಲೇ ಹೋಗುತ್ತಿರುವ ದೇಶದಲ್ಲಿ ಪ್ರಭುತ್ವವು ಸ್ನೇಹಿತನಲ್ಲ ಬದಲಿಗೆ ಜನರ ಶತ್ರು ಮಾತ್ರ ಆಗಿರಲಿಕ್ಕೆ ಸಾಧ್ಯ. ಆದರೆ ಈ ಪ್ರಭುತ್ವದ ಮೂಲಕವೂ ನಾವು ಸಮಾಜವನ್ನು ಬದಲಾಯಿಸಬಹುದು ಎಂಬಂತಹ ನಿಲುವು ನಮ್ಮನ್ನು ಸೆರೆಮನೆಯ ಸಮೀಪ ಸುಳಿಯಲು ಬಿಡುವುದಿಲ್ಲ.

ಇದನ್ನೆಲ್ಲಾ ಯೋಚಿಸುವಂತೆ ಮಾಡಿದ್ದು 'ಹರಸ್ವರ' ಮತ್ತು 'ಗೌರಿ ಲಂಕೇಶ್ ಪತ್ರಿಕೆ'ಯ ಬಳಗದವರು ಈಚೆಗೆ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ 'ಸೆರೆಮನೆ ಸಂವೇದನೆ ಮತ್ತು ಸಾಹಿತ್ಯ' ಕಾರ್ಯಕ್ರಮ. ಫೈಜ್ ಅಹ್ಮದ್ ಫೈಜ್‌ರ ನೆನಪಿನ ನಿಮಿತ್ತದಲ್ಲಿ ನಡೆದ ಆ ಕಾರ್ಯಕ್ರಮದಲ್ಲಿ ಸಾಮಾಜಿಕ ಬದ್ಧತೆ ಹೊಂದಿರುವ ಹಲವಾರು ಬರಹಗಾರರು ಭಾಗಿಯಾಗಿದ್ದರು. ಆದರೆ ಅವರಲ್ಲಿ ಹೆಚ್ಚಿನವರು "ನಾವಿರುವುದೇ ಒಂದು ಸೆರೆಮನೆ, ಗೋಡೆಗಳ ಒಳಗಿನ ಸೆರೆಮನೆಯಂತೆಯೇ ಗೋಡೆಗಳ ಹೊರಗಿನ ಸೆರೆಮನೆಯೂ ಇದೆ. ಜಾತಿ ಒಂದು ಸೆರೆಮನೆ. ಪರ್ದಾ ಒಂದು ಸೆರೆಮನೆ. ಮಹಿಳೆಯಂತೂ ಸದಾ ಸೆರೆಮನೆಯಲ್ಲೇ ಇದ್ದಾಳೆ' ಎಂದು ಸೆರೆಮನೆಯ ಕಲ್ಪನೆಯನ್ನು ವಿಸ್ತರಿಸಿದ್ದು ನಿರಾಶೆ ಮೂಡಿಸಿತು.

ಮಹಿಳೆಯರು, ದಲಿತರು, ಲೈಂಗಿಕ ಅಲ್ಪಸಂಖ್ಯಾತರು, ಅಸಂಘಟಿತ ವಲಯದ ಕಾರ್ಮಿಕರು, ರೈತರು ಎಲ್ಲರೂ ಒಂದಲ್ಲಾ ಒಂದು ಬಗೆಯ ಸೆರೆಮನೆಯಲ್ಲಿ ಇರುವುದು ನಿಜ. ಭಾರತದಲ್ಲಿ ಕೋಮುವಾದಿಗಳ ಅಬ್ಬರ ಹೆಚ್ಚಾದಂತೆಲ್ಲಾ ಮುಸ್ಲಿಮರಿಗೆ ತಾವೊಂದು ಸೆರೆಮನೆಯಲ್ಲಿದ್ದೇವೆ ಎಂಬ ಭಾವನೆ ಹೆಚ್ಚೆಚ್ಚಾಗುತ್ತಾ ಹೋಗುತ್ತದೆ. ಆದರೆ ಅಷ್ಟು ಮಾತ್ರವೇ? ಖಂಡಿತಾ ಅಲ್ಲ. ಇವತ್ತು ಭಾರತದ ಅದೆಷ್ಟೋ ಮುಸ್ಲಿಮರಿಗೆ ಬಂಧನ, ಸೆರೆಮನೆಗಳೆಂಬುದು ಕೇವಲ ರೂಪಕಾರ್ಥದಲ್ಲಿ ಇಲ್ಲ, ಅವರು ನಿಜವಾದ ಸೆರೆಮನೆಗಳಲ್ಲೇ ಇದ್ದಾರೆ. ಕನಿಷ್ಠ ಕೂಲಿಯ ಹೋರಾಟವನ್ನು ನಿರ್ಣಾಯಕವಾಗಿ ಮಾಡಬೇಕೆಂದು ತೀರ್ಮಾನಿಸುವ ಎಲ್ಲಾ ಅಸಂಘಟಿತ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ಹೋರಾಟ ಇನ್ನೂ ಮುಂದುವರೆದರೆ ಜೈಲಿಗೇ ಹೋಗಬೇಕಾಗುತ್ತದೆ. ಕಳೆದೊಂದು ವರ್ಷದಲ್ಲಿ ಬೆಂಗಳೂರಿನ



ರೇಸ್‌ಕೋರ್ಸ್‌ನಲ್ಲಿ ಜೀತ ಮಾಡುತ್ತಿರುವ ಕಾರ್ಮಿಕರು, ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಕಸ ಗುಡಿಸುವ ಮಹಿಳಾ ಕಾರ್ಮಿಕರು, ಮೊನ್ನೆ ಸುವರ್ಣಸೌಧದ ಮುಂದೆ ಒಳ ಮೀಸಲಾತಿ ಕೇಳಿದ ಮಾದಿಗರು ಹೀಗೆ ಇನ್ನೆಷ್ಟೋ ಜನರೆಲ್ಲರೂ ಜೈಲು ಕಂಡು ಬಂದರು. ಬಿಪಿಎಲ್ ಫ್ಯಾಕ್ಟರಿಯ ಕಾರ್ಮಿಕರಿಗಾಗಿ ಹೋರಾಡಿದ ಸಂಗಾತಿಗಳು ಜೀವಾವಧಿ ಶಿಕ್ಷೆಗೊಳಗಾಗಿ ಪರಪ್ಪನ ಅಗ್ರಹಾರದ ಜೈಲಿನಲ್ಲಿದ್ದಾರೆ.

'ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರು ಯಾವುದೇ ರಾಜಕೀಯ ಪಕ್ಷದ ಪರ ಅಥವಾ ವಿರೋಧವಾಗಿ ಮಾತಾಡುವಂತಿಲ್ಲ' ಎಂದು ಅಲ್ಲಿನ ಸೆನೆಟ್ ನಿರ್ಣಯ ಮಾಡಿದೆ. ಇದು ತಾನೊಂದು ಸೆರೆಮನೆಯಲ್ಲಿದ್ದೇನೆ ಎಂದು ಅನ್ನಿಸುವಂತೆ ಮಾಡುತ್ತದೆನ್ನುವುದರಲ್ಲಿ ಸಂದೇಹವೇ ಇಲ್ಲ. ಆದರೆ ಇದನ್ನು ದಮನಿತ ಸಮುದಾಯಗಳು ಇರುವ ನಿರ್ಬಂಧದ ಜೊತೆ ಹೋಲಿಸುವುದು, ಪ್ರಜಾತಂತ್ರದ ವಿಸ್ತರಣೆಯ ದೃಷ್ಟಿಯಿಂದ ಅಪಾಯಕಾರಿಯಾದದ್ದು. ಹಾಗಾದರೆ ಸುಶಿಕ್ಷಿತ, ಪ್ರಜ್ಞಾವಂತ ಸಮುದಾಯವು ತಾನು ಅಸಹಾಯಕವೆಂದು ಹೇಳಿಕೊಂಡು ಸುಮ್ಮನಿದ್ದುಬಿಡಬಹುದಲ್ಲವೇ? ಪ್ರಜಾತಂತ್ರವನ್ನು ಸೀಮಿತಗೊಳಿಸಲು ಪ್ರಯತ್ನಪಡುವ ಪ್ರಭುತ್ವದ ಜೊತೆ ಗುದ್ದಾಡಿ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವಿಸ್ತರಿಸುವ ಜವಾಬ್ದಾರಿಯನ್ನು ಅಸಂಘಟಿತ ಕಾರ್ಮಿಕರು, ರೈತರು, ಮಹಿಳೆಯರು, ಮುಸ್ಲಿಮರು ತೆಗೆದುಕೊಳ್ಳಬೇಕೇ? ಈ ಅಸಹಾಯಕ ಸಮುದಾಯಗಳ ಪರವಾಗಿ ಅವರ ಹಕ್ಕುಗಳ ನಿರ್ವಚನಕ್ಕೆ, ಅದರ ವಿಸ್ತರಣೆಗೆ ಲೇಖಕರು, ಬರಹಗಾರರು ಕೆಲಸ ಮಾಡಬೇಕು; ಮಾರ್ಗದರ್ಶನ ಮಾಡಬೇಕಲ್ಲವೇ?

ಹೆಚ್ಚಿನ ಬರಹಗಾರರು ಪಾಠ ಮಾಡುವ ಕಸುಬಿನವರಾಗಿದ್ದಾರೆ. ಕಾಲೇಜುಗಳಲ್ಲಿ ಪಾಠ ಮಾಡುವವರಲ್ಲಿ ಈಗ ಎರಡು ವರ್ಗಗಳನ್ನು ಸೃಷ್ಟಿ ಮಾಡಲಾಗಿದೆ. ಒಂದು, ದೊಡ್ಡ ಮೊತ್ತದ ಸಂಬಳ ಪಡೆಯುವ ಖಾಯಂ ಶಿಕ್ಷಕರು. ಎರಡು, ಸದಾ ಅತಂತ್ರ ಸ್ಥಿತಿಯಲ್ಲಿರುವ ಅತಿಥಿ ಉಪನ್ಯಾಸಕರು. ಮೊದಲನೇ ಗುಂಪಿಗೆ ಸರ್ಕಾರವನ್ನು ವಿರೋಧಿಸುವ ಅಗತ್ಯವಿಲ್ಲವೆನಿಸಿದರೆ, ಎರಡನೇ ಗುಂಪಿನವರಿಗೆ ಕೆಲಸ ಕಳೆದುಕೊಳ್ಳುವ ಭಯ. ಈ ದೇಶದ ಎಲ್ಲಾ ಉದ್ದಿಮೆಗಳಲ್ಲಿ ಮತ್ತು ಸರ್ಕಾರೀ ಇಲಾಖೆಗಳಲ್ಲೂ ಖಾಯಂ ನೌಕರರು ಮತ್ತು ಗುತ್ತಿಗೆ ಕಾರ್ಮಿಕರೆಂಬ ಎರಡು ಸ್ತರಗಳಿದ್ದು, ಖಾಯಂ ನೌಕರರ ಸಂಖ್ಯೆ ಕಡಿಮೆಯಾಗುತ್ತಾ ಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಾ ಇದೆ. ಆದರೆ ಗುತ್ತಿಗೆ ಕಾರ್ಮಿಕರು ಮತ್ತು ಅಸಂಘಟಿತ ವಲಯದ ಇತರ ಕೂಲಿ ಕಾರ್ಮಿಕರಲ್ಲಿ ಸಂಘಟಿತರಾಗಿ ಹಕ್ಕು ಕೇಳುವ ಮನೋಭಾವ ಹೆಚ್ಚುತ್ತಿದೆ. ಆದರೆ ಶಿಕ್ಷಕರಲ್ಲಿ ಕಡಿಮೆಯಾಗುತ್ತಿದೆ.

ಆದರೆ ಪರಿಸ್ಥಿತಿ ನಿರಾಶಾದಾಯಕವಾಗಿಲ್ಲ. ಹೊಸ ತಲೆಮಾರಿನ ಬರಹಗಾರರ ದೊಡ್ಡ ಪಡೆಯೊಂದು ಭಿನ್ನವಾಗಿ ಆಲೋಚಿಸಲು ತಯಾರಾಗಿ ನಿಂತಿದೆ. ಹೆಚ್ಚು ಕಡಿಮೆ ಈ ರಾಜ್ಯದ ಪ್ರತೀ ಜಿಲ್ಲೆಯಲ್ಲೂ ಅಂತಹವರ ಒಂದೊಂದು ಸಣ್ಣ ಗುಂಪಾದರೂ ಇದೆ. ಬಿಜೆಪಿ ಸರ್ಕಾರದ, ಸಂಘಪರಿವಾರದ ಹದ್ದಿನ ಕಣ್ಣಿನ ನಡುವೆಯೂ ಶಾಲಾ-ಕಾಲೇಜುಗಳಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿರುವವರಿದ್ದಾರೆ. ಅಂತಹ ಬಳಗಗಳೇ ಪ್ರತೀ ವರ್ಷ ಚಳವಳಿಗಳೊಂದಿಗೆ ಸಂವಾದ ನಡೆಸುವ ಭಿನ್ನ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಈ ನಾಡಿಗೆ ಅಗತ್ಯವಿರುವ ಹೊಸ ಚಳವಳಿ, ಅದರೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಬರಹಗಾರರು ಇದರೊಳಗೆ ಹುಟ್ಟಿ ಬರುವ ಸಾಧ್ಯತೆಯ ಕುರಿತು ಆಶೆಗಣ್ಣಿನಿಂದ ನೋಡುತ್ತಿದ್ದೇವೆ. ●

ನಮ್ಮ ಭಾಗಕ್ಕೆ ಚತುಸ್ಪತ ರಸ್ತೆನೇ ಪ್ರಳಯ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಕೊರೆ ಬಿಸಿಲು ಹಿತವಾಗಿತ್ತು, ಎಂತಹ ಬಿಸಿ ಕಾಫಿ ...ಡಿದು, ಎಷ್ಟು ಬೀಡಿ ಸೇದಿದರೂ ಸಮಾಧಾನವಾಗು ...ರಲಿಲ್ಲ. ಆಗಿ ರಪ್ಪನೆ ಬೀಡಿ ತುಂಡು ಎಸೆದ ಸೀರ,

"ಥೂ ಇವನಮ್ಮನ್ ಬೀಡಿನ್ನಾಡ. ಯರಡು ದಮ್ ...ಳಿಯದ್ರಲ್ಲಿ ಗೆಡ್ಡೆ ಬತ್ತದೆ. ಏನು ಬೀಡಿನೋ ಏನೊ" ...ಂದ.

"ಅದೇನು ಸೇತ್ತಿರಪ್ಪ ಪಾಸನೇ ಅಂದ್ರೆ ಪಾಸನೆ" ಎಂದಳು ...ಮ್ಮಿ.

"ಮದ್ಲಿಗೆ ಗಣೇಶ್ ಬೀಡಿ ಸೇತ್ತ ಇದ್ರೆ ಈಸಗಂಡು ...ರಡು ದಮ್ಮು ಸೇದನ ಅನ್ನಸ್ತಿತ್ತು, ವಗೆ ಕಮ್ಮಗಿತ್ತು, ...ತ ಬೀಡಿನೆ ಇಲ್ಲ ಈಗ" ಎಂದು ಉಗ್ರಿ ಹೇಳುವಾಗ ...ಟಿಸ್ಸೆ ಕಾಣಿಸಿಕೊಂಡು,

"ನನಿಗೆ ಬೀಡಿ ಹ್ಯಾಬಿಟ್ ಬರಲೇಯಿಲ್ಲ ಕಣೊ ಉಗ್ರಿ" ...ಂದ.

"ಆಗ ಶರಾಪಿನ ಚಟಿತ್ತು. ಈಗ ರಾಜಾ ವಿಸ್ಕಿ. ಅದರ ...ಬಂದೆ ನಿನಿಗೆ ಬೀಡಿ ಯಾಕೆ ಬುಡೊ" ಎಂದ ಉಗ್ರಿ.

"ಆಗಿನ ಕಾಲಕೆ ನಮ್ಮವ್ವ ಗಂಡಸು ಅಂದಮ್ಯಾಲೆ ...ವುದಾರ ತೆವಲು ಇರಬೇಕು ಅಂತ ಬೀಡಿ ತಗಳಕ್ಕೆ ...ಡ್ಡು ಕೊಡೋಳು ಕಂಡ್ಯ. ಮನುಸುನಿಗೆ ಒಂದು ಚಟ ...ರಬೇಕಂತೆ" ಎಂದ ಕಾಳಮಾವ.

"ಸರಿ ದೊಡಪ್ಪ, ನಿನಿಗೇನೊ ನಿಮ್ಮವ್ವ ಒಂದು ಚಟ ...ಡಿಕಳಕ್ಕೇಳಿದ್ಲು. ಹೆಂಗಸುರು ಯಾವ ಚಟ ...ಳಿಸಿಕೊಬೇಕಂತೆ?"

"ಹೆಂಗಸರು ಚಟ ಕಲ್ತರೆ ದೇಸ ಬದಿಕ್ಯತೇನ್ಲ? ...ವುಳು ಮಗ ಹೆರಬೇಕು, ಸಾಕಬೇಕು, ಹಾಲು ...ಡುಸಬೇಕು, ಅದ್ಕೆ ಅವುರೇನೂ ಚಟ ಕಲಿಯದಿಲ್ಲ, ...ದ್ರು ಯಲೆ ಅಡಕೆ, ಕಡ್ಡಿಪುಡಿ ತಿಂತವೆ."

"ಈಚೆಗೆ ಪಾನ್ ಪರಾಗನೂ ತಿಂತರೆ ದೊಡಪ್ಪ, ...ಟಲಿರೊ ಹೆಂಗಸುರ್ಳು ಸಿಗರೇಟನೂ ಸೇತ್ತರೆ. ...ಕ್ಸ್‌ನೂ ಮಾಡ್ತರೆ ನೋಡಿದ್ದಿಯಾ."

"ಮಾಡ್ಲಿ ಬುಡ್ಯ ನಿನಿಗೇನಾಯ್ತು" ಎಂದಳು ...ಮ್ಮಿ.

"ಓಹೊ, ನಮ್ಮ ಜುಮ್ಮಕ್ಕ ಮನೇಲಿ ಸ್ಪೆಶಲ್ ...ಡಿದಾಗ ರಾಜಾ ವಿಸ್ಕಿ ತಗಳದ್ರಿಂದ ಲೇಡೀಸ್ ...ಕ ಮಾತಾಡ್ತಳೆ. ಅದು ಸಹಜ."

"ಯಾವ ಚಟನೂ ಮಾಡದೆಯಿರೂ ಗಂಡಸಿನ ಮಕ ...ಡಬಾರದು ಅಂತಾರಲ್ಲ ನಿಜವೆ ಮಾವ?" ಎಂದಳು ...ಮ್ಮಿ. ಕಾಳಮಾವ ಏನೋ ಹೇಳಬೇಕು ಅನ್ನುವಷ್ಟರಲ್ಲಿ ...ಟಿಸ್ಸೆ,

"ಅದು ಚಟಗಾರ್ರು ಹಬ್ಬಿಸಿರೊ ಸುದ್ದಿ ಕಣಕ್ಕ. ಅಂಗೆ ...ಡಿದ್ರೆ ನಮ್ಮ ಕಾಳ ದೊಡಪ್ಪಾರ ಗುರು ದ್ಯಾವೇಗೌಡ್ರಿಗೇ ...ವ ಕೆಟ್ಟ ಅಭ್ಯಾಸನೂ ಇಲ್ಲ, ಅದ್ರು ಜೆ.ಡಿ.ಎಸ್‌ನೋರು ...ಕ ಅವುರ ಮಕ ನೋಡದಿಲವೆ."

"ಯಾವ ಕೆಟ್ಟ ಅಭ್ಯಾಸನೂ ಇಲ್ಲದೋರಿಗೆ ಅಂತ ...ಸ್ತ್ರಿ ಅಭ್ಯಾಸನೂ ಇರದಿಲ್ಲವಂತೆ ಕಣೊ."

"ಕರಟ್ಟಾಗಿ ಹೇಳಿದೆ ಕಣೊ ಉಗ್ರಿ. ಆದ್ರು ಈ ಮಾತು ನಿಂದಲ್ಲ. ಯಾರೋ ದೊಡ್ಡ ಮನುಸ್ರು ಹೇಳಿದ್ದ ತಂದು ಇಲ್ಲೇಳಿದ್ದಿ. ಅಂಗೆ ನೋಡಿದ್ರೆ ನಾವಾಡುವ ಮಾತು ನಮ್ಮವಲ್ಲ. ಅನುಭವ ಅಷ್ಟೆ ನಮ್ಮದು."

"ಮಾತುಗ್ಗಾರ ಮಲ್ಲಕ್ಕನ ಮನೇಲಿ ಬ್ಯಾಸಗೆಲೂ ಹುರುದ ರಾಗಿ ಹಿಟ್ಟಂತೆ ಕಂಡ್ಯ. ಅಂಗೆ ಮಾತಾಡಿಕಂಡು ವಲ ಕೂದಿದ್ದಿಯೋ ಇಲ್ಲವ್ರೊ" ಎಂದಳು ಜುಮ್ಮಿ.

"ಅಕ್ಕಾ, ವಲ ಕುಯ್ಯಕ್ಕೆ ಒಂದು ಮುಂಬಿಗೆ ಮುನ್ನೂರುರೂಪಾಯಿ ಕೇಳ್ತರೆ. ಊಟ ತಿಂಡಿ ಕೊಡದಾದ್ರೆ ಇನ್ನೂರೈವತ್ತು ರೂಪಾಯಿ. ಎಲ್ಲಿಂದ ತಂದು ಕೊಡನಕ್ಕ. ಅದ್ಕೆ ನಮ್ಮನಿಯೋಳು ಮುಯ್ಯಾಳಿಗೋಗಿದ್ಲು. ಅವುರು ಬಂದ್ರೆ ಸಾಕು ಮೂರು ತುಂಡು ಹೊಲ ಕೂದಾಕ್ತರೆ."


"ಎಷ್ಟು ದಿನ ಹೋಗಿದ್ಲು?"

"ಅಯ್ಯೋ ಅವುಳ ಕತೆಬ್ಯಾಡ. ಒಂದು ವಾರದಿಂದ ಹೋಗ್ಯವುಳೆ. ಅವುರ್ಯಲ್ಲ ಬಂದ್ರೆ ವಪ್ಪೊತ್ತಿಗೇ ಮುಗಿತದೆ."

"ನೀನು ವಲ ಕುಯ್ಯಕ್ಕೆ ಹೋಗಿರಲಿಲ್ವೆ?"

"ನಾವು ವಲಕುಯ್ಯದು ಬುಟ್ಟು ಯಾವ ಕಾಲಾಯ್ತಕ್ಕ. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾದರಲ್ಲಾ, ಆಗ್ಲೆ ಬುಟ್ಟಬುಟ್ಪೊ ಕಣಕ್ಕ."

"ರಾಮಕಿಸ್ನ ಯಗಡೆ ವಲ ಕುಯ್ಯ ಬ್ಯಾಡ ಅಂತ ಹೇಳಿದ್ರೆ."



"ಹೇಳಿರಲಿಲ್ಲ, ಆದ್ರೆ ಕುಯ್ಯದಂಗೆ ಇನ್‌ಫ್ಲುಯೆನ್ಸ್ ಮಾಡಿದ್ರು. ಯಂಗವ್ವಾ ಅಂದ್ರೆ, ಅವುರು ಸರಕಾರ ನ್ಯಡಸಕ್ಕೆ ಜಾಸ್ತಿ ದುಡ್ಡು ಬೇಕು ಅಂತವಾ ಶರಾಪಿನಂಗಡಿ ಓಪನ್ ಮಾಡಿದ್ರು. ಆಗ ಹಳ್ಳಿ ಕಡಿಕೂ ಅಂಗಡಿ ಬಂದೊ. ಸರಕಾರನೆ ಲಿಕ್ಕರ್ ಆದಾಯ ನಚ್ಚಗಂಡಿದ್ರಿಂದ ಊರ್ಯಲ್ಲ ಕುಡಿಯಕ್ಕೆ ಸುರು ಮಾಡಿದ್ರು. ಆಗ್ಲೆ ನಾವ್ಯಲ್ಲ ವಲ ಕುಯ್ಯದ ಬುಟ್ಟಿದ್ದು."

"ವಲ ಕುಯ್ಯದು ಅಂದ್ರೆ ಸುಮ್ಮನಾಯ್ತೆ, ಮಂಡೀಲಿ, ತೋಳಲ್ಲಿ ಸಗತಿ ಬೇಕು. ಜನ ಆದ್ನೆ ಕಳಕಂಡವುರೆ. ಆದ್ರೆ ಹೆಂಗಸರಂಗಲ್ಲ, ಅವುರಿವತ್ತಿಗೂ ಗಟ್ಟಿಯಾಗ್ಯವುರೆ. ಕುಯ್ತರೆ ಕಣೊ."

"ಅಂಗೆ ನೋಡಿದ್ರೆ ಉಗ್ರಿ, ಹಳೆ ಕಾಲ ತಿರಗ ವಾಪಸ್ ಬತ್ತಾ ಅದೆ ಕಣೋ."

"ಅದ್ಯಂಗೊ?"

"ಯಂಗೆ ಅಂದ್ರೆ, ಆಗಿನ ಕಾಲದಲ್ಲಿ ದುಡ್ಡಿಲ್ದೆ ಯವಾರ ನ್ಯಡಿಯವು. ನಿನಿಗೆ ಒಂದು ಎತ್ತ ಬೇಕು. ನನಿಗೆ ಒಂದು ಯಮ್ಮೆ ಬೇಕು ಅಂತ ಇಟ್ಗೊ, ಆಗ ಯಮ್ಮೆ ಕೊಟ್ಟು ಎತ್ತಿಡಕಳರು. ಕೋಳಿ ಕೊಟ್ಟು ಆಡುಮರಿ ಹಿಡಕಳರು. ದುಡ್ಡಿನ ಚರ್ಚೆನೆ ಬತ್ತಿರಲಿಲ್ಲ. ಆದ್ರೆ ಈಗ ನಮ್ಮನೆ ವಲ ಕುಯ್ಯಕ್ಕೆ ನಾವು ದುಡ್ಡು ಕೊಡ್ತಯಿಲ್ಲ, ನಾವೇ ಹೋಗಿ ಕೂದಿರೋರ ಮನೆಯೋರು ಬಂದು ಕುಯ್ತರೆ. ಅಂದ್ರೆ ಮುಯ್ಯಾಳಿನ ವ್ಯವಾರದಲ್ಲಿ ದುಡ್ಡಿನ ಬಟಾವಾಡೆನೆ ಇಲ್ಲಾ. ಆದ್ರಿಂದ ಹಳೆಕಾಲ ತಿರಗ ಬತ್ತಾ ಅದೆ."

"ಯಾವುದೊ ವಲಕುಯ್ಯೊ ಸುದ್ದಿ ತಗಂಡು ಹಳೆ ಕಾಲ ಬತ್ತು ಅಂತಿ. ಕಾಲ ನೋಡಿದ್ರೆ ಕಲ್ಲಾಸಾಗಿ ಮುಗಿಯಕ್ಕೆ ಒತ್ತಾ ಅದೆ."

"ಅದೇನೊ ಪ್ರಳಯ ಆಯ್ತಾದೆ ಅಂದ್ರಲ್ಲ ಎಲ್ಯಾಯ್ತಲ."

"ಪ್ರಳಯ ಪುರೋಹಿತರ ಪಿಂಡದಲ್ಲಾಯ್ತು ಕಣಕ್ಕ. ಸೂಳೆ ಮಕ್ಕಳು ಸುಳ್ಳ ಸುದ್ದಿ ಹಬ್ಬಿಸಿ ಯಜ್ಞ, ಹೋಮ, ಗಣಪತಿ ಯಾಗ ಅಂತ ಸಾಮಾನ್ಯ ಜನಗಳ ಸುಲ್ದಾಕಿಬುಟ್ರು. ಯಾವ ಪ್ರಳಯನೂ ಇಲ್ಲ. ನನಿಗನ್ನಿಸಿದಂಗೆ ನಮ್ಮ ಭಾಗಕ್ಕೆ ಚತುಸ್ಪತ ರಸ್ತೆನೆ ಪ್ರಳಯ ಕಣಕ್ಕ."

"ರಸ್ತೆ ಯಂಗೆ ಪ್ರಳಯಾಯ್ತದ್ಲ."

"ದೊಡಪ್ಪ ನೀನೆಲ್ಲೂ ಹೋಗಿಲ್ಲ. ಆದ್ರಿಂದ ನಿನಿಗೆ ಗೊತ್ತಾಯ್ತಾ ಇಲ್ಲ. ಒಂದು ಸ್ವಲುಪ ಊರು ಬುಟ್ಟು ವರಿಕೋಗಿ ನೋಡು. ಪ್ರಳಯ ಯಂಗಾಗ್ಯದೆ ಅಂತ ಗೊತ್ತಾಯ್ತದೆ. ಬೆಂಗಳೂರಿಂದ ಹಾಸನದವರಿಗೂ ಚತುಸ್ಪತ ರಸ್ತೆ ಆಯ್ತಾ ಅದೆ. ಚತುಸ್ಪತ ಅಂದ್ರೇ ನಾಲ್ಕು ಜೋಡಿ ರಸ್ತೆ ಹೋಯ್ತವೆ. ಮಧ್ಯದಲ್ಲಿ ಒಂದು ರಸ್ತೆ ಅಗಲ ದಿಂಡೂ ಬ್ಯಾರೆ ಇರತದೆ. ಈ ರಸ್ತೆ ಮಾಡಬೇಕಾದ್ರೆ ಬೆಂಗಳೂರಿಂದ ಹಾಸನಗಂಟ ರಸ್ತೆ ಬದಿಲಿದ್ದ ಆಲ, ಬಸರಿ, ಗೋಣಿ, ಇಪ್ಪೆ, ಬೇವು, ಹುಣಸೆ ಮರವೆ ಕಡದಾಕಿದ್ರು."

"ಭಾಳ ಹಳೆ ಮರಕಂಡ್ಯ ಅವು. ಮೈಸೂರು ಮಾರಾಜರು ನೆಟ್ಟಿದ್ದವು."

"ಯಾರು ನೆಟ್ರೇನು ದೊಡಪ್ಪ, ಚತುಸ್ಪತ ರಸ್ತೆ ಮುಖ್ಯ. ಅಂಥ ಸಾವುರಾರು ಮರಗಳಲ್ಲಿ ಸಕಲಿಸ್ಟು ಪಕ್ಷಿನೂ ಗೂಡು ಕಟಿಗಂಡಿದ್ವೊ. ಗರುಡ ಪಕ್ಷಿಯಿಂದ ಹಿಡಿದು ಉನ್ನಿಗೊರವುನಗಂಟ ಆ ಮರದಲ್ಲಿದ್ವೊ. ಅವ್ಯತ್ಲಗೋದವ್ರೊ ಏನೊ. ಇದು ಮನುಷ್ಯ ಮಾಡಿದ ಪ್ರಳಯ ಅಲವೆ ಪಕ್ಷಿಗಳ ಭಾಗಕ್ಕೆ?"

"ಅದೇನೊ ನಿಜ ಬುಡು. ಪಾಪ ಅವ್ರು ಕತಿಯೇನಾಯ್ತೋ ಏನೊ."

"ಇನ್ನ ಬೆಂಗಳೂರಿಂದ ಬತ್ತ ರಸ್ತೆಗೆ ಸಿಕ್ಕಿದ ಯಲ್ಲಾ ಊರು ಗುಡಿಸಿಗಂಡೋದೊ. ನಾಗ್ತಳ್ಳಿ, ಕದಬಳ್ಳಿ, ಹಿರಿಸ್ಯಾವೆ, ಈ ಊರು ಮುಂಭಾಗ ಅಡ್ರಸ್ಸಿಲ್ಲದಂಗಾದೊ ದೊಡಪ್ಪ ಆಕಡಿಕೊಂದೂರು, ಈ ಕಡಿಕೊಂದೂರು, ಮದ್ಯ ಚತುಸ್ಪತ ರಸ್ತೆ. ಇದಂತೂ ಆ ಊರು ಭಾಗಕ್ಕೆ ಪ್ರಳಯನೆ."

"ಅಂತ ರಸ್ತೆಯ ಊರಿಂದ ವರಿಕಾಕ ಬೇಕಾಗಿತ್ತು ಕಂಡ್ಯ."

"ಹಾಕ ಬೇಕಾಗಿತ್ತು ದೊಡಪ್ಪ, ಈಗ ಯಲ್ಲಾರಿಗೂ ಅಂಗನ್ನುಸ್ತಾ ಅದೆ. ಯಾಕಂದ್ರೆ ಈ ಕಡಿಂದ ಆ ಕಡಿಕೆ ದನ, ಕರ, ಆಡು, ಕುರಿಯ ವಡಕಂಡೋಗಬೇಕಾದ್ರೆ, ಜೀವ ಕೈಲಿಡಕಂಡು ಹೋಗಬೇಕು. ಇಲ್ಲಾ ಅಂದ್ರೆ ಚತುಸ್ಪಥಕ್ಕೆ ಬಲಿಯಾಗಬೇಕಾಯ್ತದೆ. ಹೊನ್ನೆನಳ್ಳಿ, ನವುಲೆ, ಹೆಗ್ಗಡ ಜನಗಳಂತೂ ಬಾಳ ಹೆದ್ರಿಕಂಡು ಕಾಲಹಾಕ್ತ ಅವುರೆ. ಯಾವ ಕೇಡಿಗೆ ಬತ್ತಪ್ಪ ಇಂತ ರಸ್ತೆ. ರಸ್ತೆ ಬುಟ್ಟು ದೂರದಲ್ಲಿರೊ ಊರಿನೋರೆಯಾ ಪುಣ್ಯ ಮಾಡಿದೋರು ಅಂತಾ ಅವುರೆ."

"ನಿಜ ಕಣೊ ವಾಟಿಸ್ಸೆ. ಆ ದೇವಳ್ಳಿತ ಪಾಪ ಯಾರದೊ ಯಮ್ಮೆ ಕರ ರಸ್ತಿಗೆ ಬಂದಿತ್ತೇನೊ, ಅದರ ಮ್ಯಾಲೆ ಎಷ್ಟು ವೆಯಿಕಲ್ ಹೋಗಿದ್ದವ್ರೊ ಏನೊ. ಇಡೀ ರಸ್ತೆನೆ ಬಾಡಾಗಿತ್ತು ಅತ್ತಗೆ."

"ಯಮ್ಮೆ ಕರಿಗೋದೆ, ನೀನು. ಇನ್ನೊಸಿ ದಿನಕೆ ಮನುಸುರನೆ ಆತರ ನೋಡ್ತಿವಿರು. ಇಂತ ಅಭಿವೃದ್ಧಿ ನಮಿಗೆ ಬೇಕಾಗಿತ್ತೆ. ನನಗನ್ನುಸ್ತದೆ ದೊಡಪ್ಪ, ನಮ್ಮ ಭಾಗಕ್ಕೆ ಈ ಚತುಸ್ಪತನೇ ಪ್ರಳಯ."

"ನೀನೇಳ್ತಯಿರದ ನೋಡಿದ್ರೆ ನಿಜ ಅನ್ನುಸ್ತದಪ್ಪ."

"ನಾವು ಗಾಂಧಿ ಮಾರ್ಗ ಬುಟ್ಟು ಬಾಳ ದೂರ ಬಂದಿದ್ದೀವಿ ದೊಡಪ್ಪ."

"ಗಾಂಧಿ ಮಾರ್ಗ ಯಾವುದ್ಲ?"

"ಗಾಂಧಿಮಾರ್ಗ ಯಾವುದು ಅಂದ್ರೆ, ಅಭಿವೃದ್ಧಿ ಎಷ್ಟು ಬೇಕು, ಅದು ಯಂಗೆ ಆಗಬೇಕು, ಜನ ಎಷ್ಟಿರಬೇಕು, ಯಲ್ಲಾರು ಆರೋಗ್ಯವಂತರಾಗಿದ್ರೆ ದಾಗುಟ್ರೆ ಬ್ಯಾಡ, ಜಗಳ ಜೂಟ ಇಲ್ದೆ ಊರ ನ್ಯಾಯ ಮಾಡಿಕಂಡ್ರೆ ಪೊಲಿಟೇಶನ್ನ, ಲಾಯರ್ರು, ಕೋರ್ಟು ಕಛೇರಿನೆ ಬ್ಯಾಡ. ಗೋ ಸಂಪತ್ತಿದ್ರೆ ಕರಾವಿರತದೆ. ಹತ್ತಿ ಬ್ಯಳದ್ರೆ ಬಟ್ಟೆ ಮಾಡಿಕಬಹುದು. ಇಂಗೆ, ಏನೇನೋ ಹೇಳಿದ್ರು. ಆದ್ರೆ ಆ ದಾರಿ ಬುಟ್ಟು ನೆಹರು ಮಾರ್ಗದಲ್ಲಿ ಬಂದು ಚತುಸ್ಪತ ರಸ್ತೇಲಿ ಹ್ಯಣಾಗೋಯ್ತಿವಿ ದೊಡಪ್ಪ. ಅಂತೂ ನಮ್ಮಂಥೋರಿಗೆ ಫ್ಯೂಚಾರಿಲ್ಲ ದೊಡಪ್ಪ ನಮ್ಮ ಕತೆ ಮುಗಿತು!!"

ಶಾಂತಿನಾಥನೊಂದಿಗೆ ಕೊನೇ ಮಾತುಗಳು

(ಬಹುವಚನ, ಏಕವಚನ ಎಲ್ಲವನ್ನು ಒಳಗೊಂಡು ಸಾಗುತ್ತಿದ್ದ ನಮ್ಮ ಗೆಳೆತನದ ಮೂರು ಕಾಗದಗಳನ್ನು ಇಲ್ಲಿ ...ಡುತ್ತಿದ್ದೇನೆ.)

27.1.98

ಪ್ರಿಯ ಲಂಕೇಶ್,

ಪತ್ರಿಕೆ ಬರೋದು ನಿಂತು ಸುಮಾರು ಎರಡು ತಿಂಗಳಾಗಿವೆ.

ಆಗಲೇ ಚಂದಾ ಕಳಿಸಬೇಕಿತ್ತು, ಈಗ ರೂ. 300ರ ಕ್ರಾಸ್ಡ್ ಚೆಕ್ ಕಳಿಸುತ್ತಿರುವೆ. ಮತ್ತೆ ಕಳಿಸಲು ಶುರು ...ಮಾಡಲು ನಿಮ್ಮ ಆಫೀಸಿಗೆ ಹೇಳಿ.

ನಿಮ್ಮ ಆತ್ಮಚರಿತ್ರೆ ಬಂದಿದೆಯಂತೆ. ನಾ ಓದಬೇಕಲ್ಲ, ದಯವಿಟ್ಟು ಕಳಿಸ್ತೀರಾ?

ನಾನೀಗ ಇಂದು ಬೆಡ್‌ರೂಮ್- ಬಂದಿ. ಬೆನ್ನಿಗೆ oxygen cylinder. ಏನೋ ಎಲ್ಲ ಡಾಕ್ಟರರ ಕಣ್ತಪ್ಪಿಸಿ ...ದೇನೋ ಒಂದು ರೀತಿಯ Fibrosis of Lung ಆಗಿ, ಇಂದು ಪುಪ್ಪುಸ ಕಾಲುಭಾಗ ಆಗಿ ಇನ್ನೊಂದರಲ್ಲಿ ...ಡುವೆಂತೋ ಬೆಳೆದುನಿಂತಿದೆ. ಉಪಚಾರ ನಡೆ...ದೆ. ಮೂರು ನಾಲ್ಕು ತಿಂಗಳಲ್ಲಿ ಆಕ್ಸಿಜನ್ನಿನಿಂದ ಸ್ವಲ್ಪ ಬಿಡುಗಡೆ ...ಡೆಯಬಹುದು. ಚಮತ್ಕಾರವಾಗಿ ಪೂರ್ಣ ಗುಣಮುಖವಾಗಬಹುದು- ಗೊತ್ತಿಲ್ಲ...

ಮುಖ್ಯ, ನನಗೆ ಓದಲು ಏನಾದರೂ ಹತ್ತಿರವಿರಬೇಕು....

ಹೇಗಿದ್ದೀರಿ?


ಸದ್ಯ ನೆನಪುಗಳೂ

ಒಂದು ಆಕಾರ ಕೊಡ್ತವೆ!

ಪ್ರೀತಿಯಿಂದ

ನಿಮ್ಮ

ಶಾಂತಿನಾಥ



ಸುಮಾರು ಈ ರೀತಿಯ ಕಾಗದ ಬರೆದೆ. (ಈ ನನ್ನ ಕಾಗದ ನನ್ನಲ್ಲಿಲ್ಲ)

ಪ್ರೀತಿಯ ಶಾಂತಿನಾಥ,

ನಿಮ್ಮ ಕಾಗದ ನೋಡಿ ಭೂಮಿಗಿಳಿದು ಹೋದೆ. ಪುಸ್ತಕ ಕಳಿಸುತ್ತಿದ್ದೇನೆ. ಸಾಧ್ಯವಾದರೆ ಓದಿ ...ಮೇಲೆ ಬರೆಯಿರಿ.

ನೀವು ಬಹುಬೇಗ ಮುಂಚಿನ ಶಾಂತಿನಾಥ ಆಗಿ ನಗುವಂತಾಗಬೇಕು. ನಮ್ಮೆಲ್ಲರ ಬದುಕಿಗೆ ಗೆಲುವು ತರಬಲ್ಲ ...ನೀವು ಹಾಸಿಗೆ ಹಿಡಿದಿರುವುದು ಅತ್ಯಂತ ಅಸಂಗತ ವಿಷಯ.

ಇತಿ,

ಪಿ. ಲಂಕೇಶ್

21.2.98

ಪ್ರಿಯ ಲಂಕೇಶ್,

ನಿಮ್ಮ ಆತ್ಮಕಥನ ಮತ್ತು ಪತ್ರ. ತುಂಬ ಥ್ಯಾಂಕ್ಸ್. ಈಗ ಪತ್ರಿಕೆಯೂ ಬರ್‍ತಾ ಇದೆ.

ನಿಮ್ಮ ಆತ್ಮಕಥನ ಮತ್ತು ನನಗೆ ... ಅತ್ಯಂತ ಆತ್ಮೀಯತೆಯಿಂದ, ಪ್ರೀತಿಯಿಂದ ಓದಿದೆ. ವಿಮರ್ಶಕನ ಹುಳಿಮಾವಿನ ಮರವನ್ನು 3 ದಿನಗಳ ಕಾಲ ಅತ್ಯಂತ ... ದೃಷ್ಟಿ ಬಿಟ್ಟು ಬರೇ ರಸಿಕನಾಗಿ ಓದಿದೆ, ಸದ್ಯದ house-arrestದ ಸ್ಥಿತಿಯಲ್ಲಿ ನಿಮ್ಮ ಆತ್ಮಕಥನ ಏಕಾಗ್ರತೆಯ ಜೊತೆಗೆ ಸಾಹಿತ್ಯಿಕ ಖುಷಿಕೊಟ್ಟಿದೆ.

ಇದೇನು dry, well- documented ಆತ್ಮಕಥನವಲ್ಲ- ಒಂದು ರೀತಿ impressionistic ಅಂತ ಹೇಳಬಹುದಾದ, ಕೆಲವು dominant ಸ್ಥಾಯೀಭಾವಗಳ ಸುತ್ತ ತಿರುಗುವ ಈ ಆತ್ಮಕಥನ ಒಂದು ಸಫಲ ಸಾಹಿತ್ಯ ಕೃತಿಯಾಗಿದೆ.

ಮೊದಲ ಅಧ್ಯಾಯದಲ್ಲಿ ನೆನಪುಗಳು ಸಾಕಾರಗೊಳ್ಳುವ ರೀತಿ, ಯಾವುದೇ ಒಣ ಸೆಂಟಿಮೆಂಟಾಲಿಟಿ ಇಲ್ಲದೆ ಅವು ಬಿಚ್ಚಿಗೊಳ್ಳುವ ರೀತಿ ಅತ್ಯಂತ ಆಪ್ಯಾಯಮಾನವಾಗಿವೆ. ಬಾಲ್ಯದ ಕುತೂಹಲಗಳು, ಕಾತರಗಳು ತುಂಬ ಚೆನ್ನಾಗಿ ಮೂಡಿಬಂದಿವೆ.

ಮುಂದೆ ನವತಾರುಣ್ಯದ ದಿಗ್ಭ್ರಮೆಗಳನ್ನೂ, ದ್ವಂದ್ವಗಳನ್ನೂ ಪ್ರಾಮಾಣಿಕವಾಗಿ ರೂಪುಗೊಳಿಸಿ, ವರ್ತಮಾನಕ್ಕೆ ಸಮೀಪ ಬಂದಂತೆ 'ಸಂಗ್ರಹವಾಗಿ' ನಿವೇದಿಸುವ strategyಯನ್ನು ಅನಿವಾರ್ಯವಾಗಿಯೇ ಉಪಯೋಗಿಸಿದ್ದೀರಿ. ಇದರಿಂದ ಕೆಲವು ಓದುಗರು ಬೇಸರ ಪಟ್ಟುಕೊಂಡಿರಬೇಕು. (ಚಂಪಾ ಹೇಳುವ ಕೊಚ್ಚು, ಮುಚ್ಚು ನನಗೆಲ್ಲಿಯೂ ಕಾಣಲಿಲ್ಲ) ಇಷ್ಟೇ ಪತ್ರಿಕೆಯಲ್ಲಿ ಬಂದದ್ದರಿಂದ ಇಲ್ಲಿ ಸಂಗ್ರಹವಾಗಿ ಹೇಳ್ತೇನೆ ಅಂತ ಹೇಳಿದಲ್ಲಿ you have taken too much for granted. ಪತ್ರಿಕೆಯಲ್ಲಿ ಬಂದದ್ದನ್ನೂ ಇಲ್ಲಿ ಸಂಗ್ರಹಿಸಬಹುದಿತ್ತು.

'ಮರ' ಅಧ್ಯಾಯ ನಿಮ್ಮ ನಿಕಟವರ್ತಿ ಓದುಗರ ಅಪೇಕ್ಷಾಭಂಗಕ್ಕೆ ಕಾರಣವಾಗಿರಲು ಸಾಕು. ಆದರೆ ಏನನ್ನೂ ಅಪೇಕ್ಷಿಸದೆ, ಕೃತಿಗೆ ಮನಸ್ಸನ್ನೊಡ್ಡಿ ಓದಿದರೆ ಎಷ್ಟೊಂದು ಮಹತ್ವದ ಸಂಗತಿಗಳು ಅಲ್ಲಿ ಕಾಣಸಿಗುವವು: ನಿಮ್ಮ ಸಿನೇಮಾ ಅನುಭವ, ಲೈಂಗಿಕ ಅನುಭವ, ಹಲವಾರು ವ್ಯಕ್ತಿಚಿತ್ರಗಳು, ನಿಮ್ಮ ವ್ಯಕ್ತಿತ್ವದ multiplicityಯ ಪ್ರತಿಮೆಗಳು, ನಿಮ್ಮ ವೈಯಕ್ತಿಕ ತತ್ವಜ್ಞಾನ ಇತ್ಯಾದಿ. ಇವೆಲ್ಲ ಒಂದರೊಳಗೊಂದು ಅನಾಯಾಸವಾಗಿ, ಪಾರದರ್ಶಕವಾಗಿ ಹೆಣೆದುಕೊಂಡ ರೀತಿ ನಿಮ್ಮ ಗದ್ಯಶೈಲಿಯ ಪರಿಪಕ್ವತೆಯನ್ನು (The style is the man) ಸೂಚಿಸುತ್ತದೆ.

I love the book.

Probably in due course of time it will need a sequel.

Wish you a long and healthy life which gets creative as ever.

ಇಂತಿ ವಂದನೆಗಳೊಂದಿಗೆ-

ನಿಮ್ಮ

ಶಾಂತಿನಾಥ



ಎಲ್ಲ ಪಾಪಕೃತ್ಯಗಳಿಗೂ ಪರಿಹಾರ ಉಂಟು!

ಸ್ನೇಕ್ ಶ್ಯಾಮ್ ಚಿರಪರಿಚಿತರು. ಅವರ ಉರಗ ಪ್ರೀತಿ ಜನಜನಿತವಾದದ್ದು. ಅವರಷ್ಟು ಪರಿಣಿತಿ ಇಲ್ಲದಿರಬಹುದು. ಆದರೆ ಉರುಗ ಪ್ರೀತಿಗಂತೂ ಕೊರತೆ ಇಲ್ಲ, ಇಂತಹ ನೂರಾರು ಸ್ನೇಕ್ ಶ್ಯಾಮ್‌ಗಳು ಹಳ್ಳಿ, ನಗರ, ಪಟ್ಟಣಗಳಲ್ಲಿದ್ದಾರೆ. ಇದಕ್ಕೆ ಸ್ನೇಕ್ ಶ್ಯಾಮ್ ಅವರ ಪ್ರಭಾವವೂ ಪರೋಕ್ಷ ಕಾರಣವಿರಬಹುದು. ಇಂತಹ ಇಬ್ಬರು ಸ್ನೇಕ್ ಶ್ಯಾಮ್‌ರನ್ನು ಡಾ. ಅರ್ಜುನಪುರಿ ಅಪ್ಪಾಜಿಗೌಡರು ತಮ್ಮ 'ಮನಕಲಕಿದವರು' ಪುಸ್ತಕದಲ್ಲಿ ಪರಿಚಯಿಸಿದ್ದಾರೆ. ಅದರಲ್ಲಿ ಕೀಲಾರದ ದೇವರಾಜು ಒಬ್ಬರು. ಇವರು ವಿಷಾದದಿಂದ ನೆನೆಯುವ ಘಟನೆ ಹೀಗಿದೆ:

ಮಂಡ್ಯದಿಂದ ನಾಗಮಂಗಲಕ್ಕೆ ಲಾರಿಯಲ್ಲಿ ಹೋಗುತ್ತಿದ್ದೆ. ದಾರಿ ಮಧ್ಯೆ ಗರುಡನಹಳ್ಳಿ ಸಿಕ್ಕಿತು. ಟೀ ಕುಡಿಯಲು ಲಾರಿ ನಿಲ್ಲಿಸಿದರು. ನಾನೂ ಇಳಿದೆ. ಟೀ ಕುಡಿಯುತ್ತಾ ಇದ್ದೆ. ಅನತಿ ದೂರದಲ್ಲೇ ಏನೋ ಗೌಜು ಗದ್ದಲ ಇರುವಂತೆ ತೋರಿತು. ಜನರ ಗುಂಪು ಸೇರಿತ್ತು. ಕುತೂಹಲದಿಂದ ನಾನು ಅಲ್ಲಿಗೆ ಹೋದೆ. ವಿಷಯ ಏನೆಂದು ಗ್ರಹಿಸಿದೆ. ಅಲ್ಲೇ ಇದ್ದ ಚರಂಡಿಯ ಚಪ್ಪಡಿ ಕೆಳಗೆ ಹಾವು ಸೇರಿಕೊಂಡಿತ್ತು. ಅದಕ್ಕೆ ಕಡ್ಡಿಯಿಂದ ಎಷ್ಟು ಚುಚ್ಚಿದರೂ ಅದು ಹೊರಕ್ಕೆ ಬರುತ್ತಿಲ್ಲ ಎಂಬುದು ತಿಳಿಯಿತು. ಅಮಾಯಕ ಪ್ರಾಣಿಗೆ ನೀಡುತ್ತಿರುವ ಶಿಕ್ಷೆ ಕಂಡು ನನ್ನ ಮನಸ್ಸು ಕರಗಿತು. ನಾನು ಅಲ್ಲಿದ್ದವರಿಗೆ ಹೇಳಿದೆ: 'ನಾನು ಹಾವನ್ನು ಹಿಡಿಯುತ್ತೇನೆ. ಆದರೆ ಆ ಹಾವನ್ನು ನನಗೆ ನೀವು ಬಿಟ್ಟುಕೊಡಬೇಕು.'

ಎಷ್ಟು ಪ್ರಯತ್ನಿಸಿದರೂ ಸಿಗದ ಹಾವು. ಯಾವ ಮಾಯೆದಲ್ಲಿ ಹೊರಗೆ ಬಂದು ಯಾರಿಗೆ ಏನು ಅಪಾಯ ಮಾಡುತ್ತದೆಯೋ ಎಂಬ ಭಯದಲ್ಲಿದ್ದವರಿಗೆ ಸದ್ಯ ಈ ಪೀಡೆಯನ್ನು ಹಿಡಿದು ಇಲ್ಲಿಂದ ತೊಲಗಿಸಿದರೆ ಸಾಕು ಎನ್ನಿಸಿತ್ತು. ಹಿಡಿದ ನಂತರ ಏನು ಮಾಡುತ್ತಾನೆ? ಹಲ್ಲು ಕಿತ್ತು ಮಾರುತ್ತಾನೊ? ಚರ್ಮ ಸುಲಿದು ಹಣ ಮಾಡುತ್ತಾನೊ? ಎಂದೆಲ್ಲ ಯೋಚಿಸುವ ವ್ಯವಧಾನ ಇರಲಿಲ್ಲ. 'ಅಯ್ಯೋ ಮಾರಾಯ, ನಂಗೆ ಹಿಡ್ಕಂಡು ಹೋಗಪ್ಪ' ಎಂದು ಧಾರಾಳವಾಗಿ ಒಪ್ಪಿಗೆ ನೀಡಿದರು. ಹಾವು ಹಿಡಿಯುವುದರಲ್ಲಿ ನೈಪುಣ್ಯತೆ ಇತ್ತು, ಹಾವು ಹಿಡಿದೆ. ಅದನ್ನು ಗೋಣಿ ಚೀಲದ ಒಳಕ್ಕೆ ಹಾಕಿ ತೆಗೆದುಕೊಂಡು ಹೋಗಲು ಹೊರಟೆ.

ಆಗ ನೋಡಿ. ಊರಿನ ಒಬ್ಬ ಬುದ್ಧಿವಂತ ಮಧ್ಯ ತಲೆ ಹಾಕಿದ.

'ಅದ ನೀನು ತಗೊಂಡೋಗೋ ಹಂಗಿಲ್ಲ, ಅದು ನಮ್ಮ ಆಸ್ತಿ' ಅಂದ!

ಪರಿಪರಿಯಾಗಿ ಬೇಡಿಕೊಂಡೆ.

'ಇದ ತಗೊಂಡೋಗಿ ಏನ್ಮಾಡ್ತೀಯೆ?'

'ಯಾವುದಾದರೂ ತಿಟ್ಟನಲ್ಲಿ ಬುಡ್ತೀನಿ.'

'ಅದ್ಕೇ ಬ್ಯಾಡ ಅನ್ನೋದು.'

'ಇದೇನು ಯಜಮಾನ್ರೆ ಹಿಂಗತೀರಿ?'

'ಸರಿಯಾಗೇ ಹೇಳ್ತಿದೀನಿ ಕಣಯ್ಯ ಇದ ತಗೊಂಡೋಗಿ ತಿಟ್ನಲ್ಲಿ ಬುಡ್ತೀನಿ ಅಂದೆ. ಆಗ ನಾಗರಾಜ ಏನು ಮಾಡ್ತಾನೆ. ಅವನ ರೋಷ ಹನ್ನೆರಡು ವರ್ಷ ಆದರೂ ಹಂಗೇ ಇರ್ತದಂತೆ. ನನ್ನ ಸ್ವಂತ ಮನೆಯಿಂದ ತಂದು ಈ ಬಯಲಲ್ಲೆಲ್ಲೋ ಬುಡ್ತನ್ವಲ್ಲಾ ಅಂತ ಊರಿನ ಮೇಲೆ ರೋಷ ಇದ್ದೇ ಇರ್ತದೆ. ಮತ್ತೆ ಅದು ಊರಿಗೆ ಬಂದು ಬಲಿ ತಗೊಂಡೇ ತಗಂತದೆ.'

'ಆಯಿತರಪ್ಪ. ಈಗೇನು ಮಾಡು ಅಂತೀರಿ.'

'ಮರ್ಯಾದೆಯಿಂದ ನಮ್ಮ ಆಸ್ತಿ ನಮಗೆ ಕೊಟ್ಟುಬಿಡು.'



'ನೀವೇನು ಮಾಡ್ತೀರಿ?'

'ಸಾಯಿಸ್ತೀವಿ!'

ಹಾಗೆ ಮಾಡಿದರೂ ಕೂಡಾ!

ಹಾವಿನ ರೋಷ ಹನ್ನೆರಡು ವರುಷದಿಂದ ಏನೋ ಪಾರಾದರು. ಆದರೆ ಸರ್ಪದೋಷ ಅವರನ್ನು ಕಾಡದೆ?

ಅದರ ನಿವಾರಣೆಗೂ ಮಾರ್ಗ ಇದೆ.

ಕುಕ್ಕೆ ಸುಬ್ರಹ್ಮಣ್ಯನಲ್ಲಿ ಅದಕ್ಕಿದೆ ಪರಿಹಾರ!

ಎಲ್ಲ ಪಾಪಕೃತ್ಯಗಳಿಗೂ ಪರಿಹಾರ ಉಂಟಲ್ಲಾ!

ಅಣಕ



• ಎಚ್.ಎಲ್.ಕೇಶವಮೂರ್ತಿ

ಇವರು ಸೀನಲಿಲ್ಲ ಅವರು ಹುರಿಯಲಿಲ್ಲ!

ಹಾವೇರಿ ಸಮಾವೇಶಕ್ಕೆ ಹೋದ ಭಾಜಪ ಶಾಸಕರನ್ನ ಬಾಣಲಿಗೆ ಹಾಕಿ ಹುರೀತೀವಿ ಎಂದಿದ್ದರು ಸದಾನಂದಗೌಡರು. ಅಲ್ಲಿಗೆ ಹೋಗಿದ್ದರಲ್ಲ ಶಾಸಕರು ಅವರನ್ನ ಇವತ್ತು ಹುರೀತಾರೇನೋ ನಾಳೆ ಹುರೀತಾರೇನೋ ಅಂತೆಲ್ಲ ಕುತೂಹಲದಿಂದ ಕಾಯುತ್ತಿದ್ದವರಿಗೇನೂ ಕೊರತೆ ಇರಲಿಲ್ಲ, ಹಾಗೇನೂ ಆಗಲೇ ಇಲ್ಲ, ಹುರಿಯೋಕೆ ಬಾಣಲೇನೇ ಸಿಗಲಿಲ್ಲವಂತೆ ಅಂತ ಕೆಲವರು, ಇಲ್ಲ ಕಣ್ರಿ ಗ್ಯಾಸ್ ಸಿಲಿಂಡರ್‌ನಲ್ಲಿ ಗ್ಯಾಸೇ ಖಾಲಿ ಆಗಿತ್ತಂತೆ ಅಂತ ಇನ್ನೂ ಕೆಲವರು ಹಾಸ್ಯ ಮಾಡುತ್ತಿದ್ದಾರೆ. ಹಂಗೇನೂ ಆಗಿಲ್ಲವಂತೆ ಕಣ್ರಿ. ಅವರ ಹತ್ತಿರ ಭರ್ಜರಿ ಬಾಣಲೇನೂ ಇದೆಯಂತೆ; ಭರ್ತಿ ಗ್ಯಾಸೂ ಇದೆಯಂತೆ. ಅವುಗಳ ಕೊರತೆಯಿಂದ ಅಲ್ವಂತೆ ಹಿಂಗಾಗಿರೋದು. ಹೋಗಿದ್ದವರಲ್ಲಿ ಕೆಲವರು ಈಗಾಗಲೇ ಬಂದು 'ನಾವು ಹೋಗ್ತಿರಲಿಲ್ಲ ಸ್ವಾಮಿಯೋರೆ. ಒಂದು ಪಕ್ಷದಿಂದ ಗೆದ್ದು ಬಂದು ಇನ್ನೊಂದು ಪಕ್ಷಕ್ಕೆ ಹಾರೋಕೆ ನೀತಿಗೆಟ್ಟವರು ನಾವಲ್ಲ, ಆ ಯಡ್ಯೂರಪ್ಪ ಫೋನಿನ ಮೇಲೆ ಫೋನು ಹಾಕ್ತಾ ಇದ್ದ. ಜನರನ್ನೂ ಕಾಯೋಕೆ ಬಿಟ್ಟಿದ್ದ. ಹಿಂಗಾಗಿ ಹೋಗಬೇಕಾಯಿತು. ಇದು ಬಲವಂತದ ಮಾಘಸ್ನಾನ' ಅಂತೆಲ್ಲ ಹೇಳುತ್ತಾ 'ನಮ್ಮ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಡಿ. ನಾವು ತಪ್ಪೇ ಮಾಡಿಲ್ಲ' ಅಂತ ಬೇಡಿಕೊಂಡಿದ್ದಾರಂತೆ. ಉಳಿದವರ ಮೇಲಾದರೂ ಕ್ರಮ ಜರುಗಿಸಬಹುದಾಗಿತ್ತಲ್ಲಾ ಅಂದ್ರೆ ಅವ್ರೂ ಇವರಂಗೇಯ. ಏನೋ ಬಲವಂತಕ್ಕೆ ಹೋಗಿದ್ರಂತೆ. ಅವರ ಮನ ಒಲಿಸಿ ಭಾಜಪದಲ್ಲೇ ಉಳಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆಯಂತೆ. ಸಂಧಾನ ಪ್ರಕ್ರಿಯೆ ಜಾರಿಯಲ್ಲಿರುವಾಗಲೇ ಶಿಸ್ತಿನ ಕ್ರಮ ಜರುಗಿಸುವುದು ನ್ಯಾಯ ಅಲ್ಲ ಅಲ್ಲವಾ. ಸಂಧಾನ ವಿಫಲ ಆದ ತಕ್ಷಣ ಕ್ರಮ ಕೈಗೊಳ್ಳುತ್ತಾರಂತೆ!

ಇವರ ಕತೆ ಹಿಂಗಾಯಿತಲ್ಲ! ಅವರು ಹುರಿಯೋತನಕ ನಾವೇಕೆ ಕಾಯಬೇಕು? ಹುರಿಸಿಕೊಂಡು ಹೊರಗೆ ಹೋಗುವುದರ ಬದಲು ಈಗಲೆ ಪಕ್ಷಕ್ಕೆ ರಾಜೀನಾಮೆ ನೀಡ್ತೀವಿ ಅಂತ ಇವರಾದರೂ ಮುಂದಾಗ್ತಾರಾ ಅದೂ ಇಲ್ಲ. ಹಾಳಾಗಿಹೋಗಲಿ ತಮ್ಮ ತಮ್ಮ ಮಿತಿ ಅರಿತು ಹಾಗಾದರೂ ಇರುತ್ತಾರೊ? 'ನಮ್ಮ ಸರ್ಕಾರ ಸುಭದ್ರ' ಅಂತಾ ಒಬ್ಬರು ಅಂದರೆ 'ನಾವು ಸೀತರೆ ನಿಮ್ಮ ಸರ್ಕಾರ ನೆಗೆದುಬೀಳ್ತದೆ' ಅಂತ ಇನ್ನೊಬ್ಬರು ಹಾರಾಡ್ತಾರೆ. ಯಾರೂ ಸೀನಲೂ ಇಲ್ಲ, ಯಾರೂ ಹುರಿಯಲೂ ಇಲ್ಲ. ಹಂಗನ್ನುವುದನ್ನ ಮಾತ್ರ ನಿಲ್ಲಿಸುತ್ತಲೇ ಇಲ್ಲ, ಇಂತಹವುದಕ್ಕೆ ಮ್ಯಾಚ್‌ಫಿಕ್ಸಿಂಗ್ ಅನ್ನೋದು!


* * *

ಹಾವೇರಿ ಸಮಾರಂಭವೇನೋ ಭರ್ಜರಿಯಾಗೇ ನಡೀತು. ಯಡ್ಯೂರಪ್ಪನವರು ಅಲ್ಲಿಗೆ ಬರುವವರಿಗೆ ಕಾಸು ಕರೀಮಣಿ ಕೊಡೋಲ್ಲ, ಊಟಾನೂ ಹಾಕಿಸೋಲ್ಲ, ಈ ಯಡ್ಯೂರಪ್ಪನ ಮೇಲೆ ಅಭಿಮಾನ ಇಟ್ಟು ರೊಟ್ಟಿ ಬುತ್ತಿ ಕಟ್ಟಿಕೊಂಡು ಬನ್ನಿ ಎಂದೆಲ್ಲ ಪದೇಪದೇ ಹೇಳಿದ್ದರು: ಆದರೆ ಯಾರೂ ಬುತ್ತಿ ಕಟ್ಟಿಕೊಂಡು ಬಂದದ್ದು ಕಾಣಲಿಲ್ಲ. ನಾಲ್ಕು ಐದು ಕಡೆ ಊಟಕ್ಕೆ ವ್ಯವಸ್ಥೆಯಾಗಿತ್ತಂತೆ. ಅದರ ಜೊತೆಗೆ ಯಡ್ಯೂರಪ್ಪನವರ ಪಟ್ಟಾಭಿಷೇಕ ಮಹೋತ್ಸವದಲ್ಲಿ ಪಾಲ್ಗೊಂಡಿದ್ದವರಿಗೆ ಇಂತಿಷ್ಟು ಹಣ ಎಂಬುದೂ ನಿಗದಿಯಾಗಿತ್ತಂತೆ. ಅದು ಎಷ್ಟು ಅಂದರೆ ಸಾವಿರದಿಂದ ಎರಡು ಸಾವಿರದವರೆಗೂ ಹರಿದಾಡುತ್ತಿತ್ತಂತೆ. ಇದರಲ್ಲಿ ಏನೂ ವಿಶೇಷ ಇಲ್ಲ ಬಿಡಿ. ಯಡ್ಯೂರಪ್ಪನವರ ಜಾಯಮಾನವೇ ಹಾಗೆ. ಬಾಯಲ್ಲಿ ಹೇಳುವುದು ಒಂದು ಮಾಡುವುದು ಮತ್ತೊಂದು. ಅದಲ್ಲ ವಿಷಯ, ಹಾವೇರಿ ಸಮಾರಂಭಕ್ಕೆ, ಯಾವ ಕಾವೀಧಾರಿಗಳೂ, ಶ್ರೀ ಮದ್ಗಾಂಭೀರ್ಯದ ಸ್ವಾಮಿಗಳೂ ಅಂತಿರಲಿ, ಉಡಿಪಡಿ ಸ್ವಾಮಿಗಳೂ ಹಾಜರಿದ್ದು ಆಶೀರ್ವದಿಸದಿದ್ದುದು ಯಾಕೆ ಅಂತ. ■

ಅರ್ಚಕರೇ ನಿಜವಾದ ನಾಸ್ತಿಕರು

ದೊಡ್ಡ ದೊಡ್ಡ ಕ್ಷೇತ್ರಗಳೆನಿಸಿರುವ ದೇವಾಲಯಗಳಿಗೆ ಭಕ್ತರು ದೇವರ ಭಯಕ್ಕೋ ಇಲ್ಲಾ ಭಕ್ತಿಯ ಪರವಶತೆಗೋ ಬಂದರೆ ಆ ಕ್ಷೇತ್ರದ ದೇವ ದಲ್ಲಾಳಿಗಳಾದ ಅರ್ಚಕರಿಗೆ ಮಾತ್ರ ದೈವಭಕ್ತಿ ಮತ್ತು ಆಧ್ಯಾತ್ಮಗಳಿಗಿಂತ ಭಕ್ತರ ಜೇಬಿನ ಮೇಲೆಯೇ ಕಣ್ಣು. ನಾಸ್ತಿಕನೆಂದರೆ ದೇವರ ಅಸ್ತಿತ್ವದ ಬಗ್ಗೆ ನಂಬಿಕೆಯಿರದವನ. ಆದರೆ ನಿಜವಾಗಿಯೂ ಸೋಕಾಲ್ಡ್ ನಾಸ್ತಿಕರಿಗಿಂತ ಇಂಥಾ ದೇವ ದಲ್ಲಾಳಿಗಳೇ ನಾಸ್ತಿಕರಾಗಿರುತ್ತಾರೆ. ಯಾಕೆಂದರೆ ಜನರು ನಂಬಿಕೊಂಡು ಬರುವ ಈ ದೇವಾಲಯದಲ್ಲಾಗಲೀ, ಎಲ್ಲೇ ಆಗಲೀ ದೇವರೆಂಬುವವನು ಖಂಡಿತ ಇಲ್ಲ ಎಂಬುದು ಇವರುಗಳ ಬಲವಾದ ನಂಬಿಕೆ. ಇಲ್ಲವಾದಲ್ಲಿ ದೇವಾಲಯದಂತಹ ಪವಿತ್ರ ಪರಿಸರದಲ್ಲೇ ವಂಚನೆಗೆ ಇವರು ಕೈಹಾಕಬಲ್ಲರೇ? ಖಂಡಿತ ಇಲ್ಲ, ದೇವರೇ ಇಲ್ಲ, ಎಲ್ಲಾ ಬರೀ ಬೊಗಳೇ ಎಂಬ ಬಲವಾದ ನಂಬಿಕೆಯ ಕಾರಣಕ್ಕೇ ಅವರೆಲ್ಲರೂ ಅಮಾಯಕ ಭಕ್ತರನ್ನು ವಂಚಿಸುತ್ತಾರೆ.

ಚಳಿಗಾಲದಲ್ಲಿ ಪ್ರಾಕೃತಿಕವಾಗಿ ಗುಡ್ಡೆಯಂತೆ ಸಂಗ್ರಹವಾಗುವ ಮಂಜನ್ನು ಅಮರನಾಥ ಲಿಂಗವೆಂದರು. ಅದು ಅವರವರ ಭಾವಕ್ಕೆ ಎನ್ನೋಣ. ಆದರೆ ವಾತಾವರಣದ ಏರುಪೇರಿನಿಂದ ಹಿಮವು ಗುಡ್ಡೆಯಂತೆ ಸಂಗ್ರಹವಾಗದಿದ್ದಾಗ ಮಂಜನ್ನು ಎಲ್ಲಿಂದಲೋ ಹೊತ್ತುತಂದು ಕೃತಕವಾಗಿ ಗುಡ್ಡೆ ಮಾಡಿದ್ದು ಹೋದ ವರ್ಷ ದೊಡ್ಡ ಚರ್ಚೆಗೆ ಕಾರಣವಾಗಿತ್ತು. ಇದೇ ರೀತಿ ಶಬರಿಮಲೆಯ 'ಮಕರ ವಿಳಕ್ಕು' ಕೃತಕ ಎಂಬುದನ್ನು ದೇವಾಲಯವೇ ಕಳೆದ ವರ್ಷ ಒಪ್ಪಿಕೊಂಡಿತಾದರೂ ಅದು ತಮಗೆ ಗೊತ್ತಿಲ್ಲದ ಆದಿವಾಸಿಗಳ ಹುಬ್ಬಾಚರಣೆ ಎಂದು ತಿಪ್ಪೆ ಸಾರಿಸಿತ್ತು. ಶಬರಿ ಮಲೆಗೆ ಹೊರ ರಾಜ್ಯಗಳಿಂದ ಬರುವ ಅಸಂಖ್ಯಾತ ಭಕ್ತರ ದುಡ್ಡು ಕೈತಪ್ಪಬಹುದೆಂಬ ಭಯಕ್ಕೆ ಬಿದ್ದು ಕೇರಳ ಸರಕಾರವೂ



ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು


ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ತನಿಖೆ ಮತ್ತು ಧರ್ಮಸ್ಥಳ ಹಾಗು ಉಜಿರೆಯಲ್ಲಿ ಕಳೆದ 11 ವರ್ಷದಲ್ಲಾದ 434 ಅತ್ಮಹತ್ಯೆ ಹಾಗೂ 16 ಕೊಲೆ ಪ್ರಕರಣಗಳ ಮರುತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದೂ, ಈ ಕುರಿತು ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸುವುದಲ್ಲದೆ ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವುದೆಂದೂ ಗುರುವಾಯನಕೆರೆ ನಾಗರಿಕ ಸೇವಾಟ್ರಸ್ಟ್‌ನಲ್ಲಿ ನಡೆದ ತಾಲೂಕಿನ ವಿವಿಧ ಸಂಘಸಂಸ್ಥೆಗಳ ಮತ್ತು ಜನಪ್ರತಿನಿಧಿಗಳ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ಕೆ.ಸೋಮನಾಥ ನಾಯಕ್ ವಿರುದ್ಧ ದುರುದ್ದೇಶದಿಂದ ನೀಡಲಾದ ದೂರಿನ ಪ್ರಾಥಮಿಕ ತನಿಖೆಯನ್ನು ನಡೆಸದೆ ನೇರವಾಗಿ ಎಫ್‌ಐಆರ್ ಹಾಕಿದ ಬೆಳ್ತಂಗಡಿ ಠಾಣಾಧಿಕಾರಿಯ ಕ್ರಮವನ್ನು ಹಾಗೂ ಠಾಣಾಧಿಕಾರಿಯ ಈ ತಪ್ಪು ಕ್ರಮಕ್ಕೆ ಕಾರಣವಾಗಿರುವ ಕಾಣದ ಕೈಗಳ ಪ್ರಭಾವವನ್ನು ಖಂಡಿಸಲಾಯಿತು.

ಕೊಲೆ ಪ್ರಕರಣದ ಬಳಿಕ ನಡೆದ ಸಾರ್ವಜನಿಕ ಪ್ರತಿಭಟನೆಯಲ್ಲಿ ಪಾಲ್ಗೊಂಡ ತಾಲೂಕು ಪಂಚಾಯತ್ ಅಧ್ಯಕ್ಷ ಕೇಶವ.ಯಂ, ಉಜಿರೆಯ ಮಹೇಶ ತಿಮರೋಡಿ ಮತ್ತಿತರರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯುವಂತೆ ಸರಕಾರವನ್ನು ಒತ್ತಾಯಿಸಲು ನಿರ್ಣಯಿಸಲಾಯಿತು.

ಸೌಜನ್ಯ ಪ್ರಕರಣದಲ್ಲಿ ವಸ್ತುನಿಷ್ಠ ವರದಿಗಳನ್ನು ಪ್ರಕಟಿಸಿದ ಪತ್ರಿಕಾ ಸ್ವಾತಂತ್ರ್ಯವನ್ನು ಅದುಮಿ ದಮನಿಸುವ ಪ್ರಯತ್ನವನ್ನು ಖಂಡಿಸಲಾಯಿತು. ಜನಸಮುದಾಯದ ನಡುವೆ ನಡೆಯುವ ಸಂವಹನ ಪ್ರಕ್ರಿಯೆಯಲ್ಲಿ (SMS, ಇಂಟರ್‌ನೆಟ್, ಇತ್ಯಾದಿ) ಸೌಜನ್ಯ ಕೊಲೆ ಪ್ರಕರಣದ ಪ್ರಸ್ತುತತೆಯು ಮಹತ್ವದ್ದಾಗಿರುವಾಗ ಅದನ್ನು ಯಾವುದೇ ಸಂಸ್ಥೆಯ, ವ್ಯಕ್ತಿಯ ಅವಹೇಳನವೆಂದು ದೂರಿ, ದಮನಿಸುವ ಚಟುವಟಿಕೆಯನ್ನೂ ಖಂಡಿಸಲಾಯಿತು.

ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ಹಿಸುಕುವ ವ್ಯವಸ್ಥಿತ ಪ್ರಯತ್ನವನ್ನು ಖಂಡಿಸುವುದರೊಂದಿಗೆ ಈ ಸ್ವಾತಂತ್ರ್ಯದ ಕುರಿತು ಜನಜಾಗೃತಿ ಮೂಡಿಸಲು ನಿರ್ಣಯಿಸಲಾಯಿತು.



ಸೌಜನ್ಯ ಕುಟುಂಬದವರಿಗೆ ಸಾಂತ್ವನ - ನ್ಯಾಯ ನೀಡಲು ಧಾವಿಸಿ, ಕಾವಿಧಾರಿಗಳಿಗೆ ಮೇಲ್ಪಂಕ್ತಿಯಾದ ಶ್ರೀ ಕೇಮಾರು ಶ್ರೀಗಳ ವಿರುದ್ಧ ನಿಂದನಾತ್ಮಕವಾಗಿ ಮಾತನಾಡಿದ ಶ್ರೀ ಕೇಶವ ಬೆಳಾಲು ಇವರ ಮಾತುಗಳನ್ನು ಖಂಡಿಸಲಾಯಿತು.


ಸಭಾಧ್ಯಕ್ಷತೆ ವಹಿಸಿದ್ದ ಸಾಹಿತಿ, ಚಿಂತಕ ಶ್ರೀ ಲಕ್ಷ್ಮೀಶ ತೋಳ್ಪಾಡಿಯವರು ಮಾತಾಡುತ್ತಾ "ಇದೊಂದು ಪರೀಕ್ಷಾ ಕಾಲ. ಮಾನವತೆ ಉದ್ದೀಪಿಸುವ ಕಾಲ. ಸೌಜನ್ಯ ಅತ್ಯಾಚಾರ-ಕೊಲೆ ಮಾಡಿರುವ ನಿಜವಾದ ಅಪರಾಧಿಗಳಿಗೆ ಶಿಕ್ಷೆ ಆಗಬೇಕು. ಧರ್ಮ ಎಂದರೆ ಸಜ್ಜನರ ರಕ್ಷಣೆ, ದುಷ್ಟರ ಶಿಕ್ಷೆ. ಆದರೆ ಇಲ್ಲಿ ಇದರ ಉಲ್ಟಾ ಆಗುತ್ತಿದೆ. ನಿಜವಾದ ತಪ್ಪಿತಸ್ಥರು ಕಾಣ್ತಾ ಇಲ್ಲ. ಸಿಬಿಐ ತನಿಖೆಯಿಂದ ಪತ್ತೆಯಾದಾರು ಎಂದು ವಿಶ್ವಾಸ. 11 ವರ್ಷದಲ್ಲಿ ಧರ್ಮಸ್ಥಳ-ಉಜಿರೆಯಲ್ಲಿ 434 ಆತ್ಮಹತ್ಯೆ, 16 ಕೊಲೆ ಆಗಿರುವುದು ಕ್ಷೇತ್ರಕ್ಕೆ ಭೂಷಣ ಅಲ್ಲ" ಎನ್ನುತ್ತಾ "ಸೋಮನಾಥ ನಾಯಕ್‌ರು ನೇರನಡೆನುಡಿಯ ಹೋರಾಟಗಾರ. ಅವರನ್ನಾಗಲೀ, ಟ್ರಸ್ಟನ್ನಾಗಲೀ ಬಗ್ಗುಬಡಿಯಲು ಯಾರಿಂದಲೂ ಸಾಧ್ಯವಿಲ್ಲ" ಎಂದು ಎಚ್ಚರಿಸಿದರು.


ಸಭೆಯಲ್ಲಿ ಟ್ರಸ್ಟ್ ಅಧ್ಯಕ್ಷ ಕೆ.ಸೋಮನಾಥ ನಾಯಕ್, ಕಾರ್ಯದರ್ಶಿ ಜಯಪ್ರಕಾಶ್ ಭಟ್, ಉಪಾಧ್ಯಕ್ಷ ಕೆ.ರಮಾನಂದ ಸಾಲಿಯಾನ್ ಮತ್ತು ವಿದ್ಯಾ ನಾಯಕ್, ತಾಲೂಕು ಪಂಚಾಯತ್ ಅಧ್ಯಕ್ಷ ಕೇಶವ, ಮತ್ತಿತರರು ಭಾಗವಹಿಸಿದ್ದರು.

ಪತ್ರಕರ್ತರ ಸಂಘದ ಪ್ರತಿನಿಧಿ ದೇವಿಪ್ರಸಾದ್, ಜಿ.ಪಂ. ಸದಸ್ಯೆ ಸಿ.ಕೆ. ಚಂದ್ರಕಲಾ, ಮಾಜಿ ಜಿ.ಪಂ.ಸದಸ್ಯ ಸುಂದರ ಸಾಲಿಯಾನ್, ಆದಿದ್ರಾವಿಡ ಸಮಾಜಸೇವಾ ಸಂಘದ ಕೆ. ಸೋಮ, ಸಮಾಜ ಪರಿವರ್ತನಾ ವೇದಿಕೆಯ ಅತ್ರಾಡಿ ಅಮೃತಾ ಶೆಟ್ಟಿ, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ)ಯ ಚಂದು ಎಲ್, ಮಾಜಿ ತಾ.ಪಂ.ಸದಸ್ಯ, ಯುವಜನ ಒಕ್ಕೂಟದ ಪ್ರಭಾಕರ ಶೆಟ್ಟಿ ಉಪ್ಪಡ್ಕ, ಹಿಂದೂ ಹಿತರಕ್ಷಣಾ ಸಮಿತಿಯ ವಸಂತರಾಣಿ, ಅಂಡಿಂಜೆ ಹೋರಾಟ ಸಮಿತಿಯ ಅಶೋಕ ದೇವಾಡಿಗ, ಸೋಮಶೇಖರ ದೇವಸ್ಯ, ಕೃಷಿಕರ ವೇದಿಕೆಯ ಮಾಧವ ಗೌಡ, ಏನೇಕಲ್ ಪಿ.ಆರ್.ಯಶೋಚಂದ್ರ, ಸತ್ಯಸಾರ ಮುಪ್ಪಣ್ಯ ಸಂಘದ ಸುಗುಣ, ಕರಾವಳಿ ಮಹಿಳಾ ಜಾಗೃತಿ ವೇದಿಕೆಯ ಶುಭವಾಣಿ, ಡಾ. ಕೃಷ್ಣಮೂರ್ತಿ, ತಾ.ಪಂ.ಸದಸ್ಯ ಮಂಜುನಾಥ ಸಾಲಿಯಾನ್, ಕು. ಚೈತನ್ಯ ಮತ್ತಿತರರು ತಮ್ಮ ಅಭಿಪ್ರಾಯ ಮಂಡಿಸಿದರು.

27ಕ್ಕೂ ಹೆಚ್ಚು ಸಂಘಟನೆಗಳು ಹಾಗೂ ಜನಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

-ಪ್ರಜಾಧಿಕಾರ ವೇದಿಕೆ, ಗುರುವಾಯನಕೆರೆ











...ಜಿಸ್ಟಾರ್ ಸಂಭ್ರಮ

...ಮುಂದಿನ ವರ್ಷ ರವಿಚಂದ್ರನ್ ಅಭಿಮಾನಿಗಳಿಗೆ ಸಿಹಿ ಸುದ್ದಿ ...ದೆ.

...ಆದೇನೆಂದರೆ ಕಳೆದ ಹಲವಾರು ವರ್ಷಗಳಿಂದ ರವಿಚಂದ್ರನ್ ತಮ್ಮ ...ಟ್ಟುಹಬ್ಬವನ್ನು ತುಂಬಾ ಸಿಂಪಲ್ ಆಗಿ ಆಚರಿಸುತ್ತಿದ್ದದ್ದು ಅವರ ...ಮಾನಿಗಳಿಗೆ ನಿರಾಶೆ ತಂದಿತ್ತು. ಇಂತಹ ಸಿಂಪಲ್ ಆಚರಣೆಗೆ ...ಖ್ಯ ಕಾರಣ ರವಿಚಂದ್ರನ್ ಅವರ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ...ತಾ ಹೊಡೆಯುತ್ತಿದ್ದದ್ದು. "ನಮ್ಮ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ...ಗ ಮಾತ್ರ ಅಭಿಮಾನಿಗಳೊಂದಿಗೆ ಬರ್ತ್‌ಡೇ ಆಚರಿಸುವುದರಲ್ಲಿ ...ವಿದೆ" ಎನ್ನುವುದು ರವಿಚಂದ್ರನ್ ಅವರ ವಾದ.

ಬರುವ 2013ರಲ್ಲಿ ರವಿಚಂದ್ರನ್ ಅವರ ಮಹತ್ವಾಕಾಂಕ್ಷೆಯ ಎರಡು ಚಿತ್ರಗಳಲ್ಲಿ ಒಂದಾದ 'ಕ್ರೇಜಿಸ್ಟಾರ್' ಸಂಕ್ರಾಂತಿಯಂದು ಬಿಡುಗಡೆಯಾಗಲಿದೆ. ಈ ಚಿತ್ರದ ಬಗ್ಗೆ ಈಗಾಗಲೇ ಒಳ್ಳೆಯ ಅಭಿಪ್ರಾಯಗಳು ಕೇಳಿಬರುತ್ತಿವೆ. ಅದು ಗೆಲುವನ್ನು ತಂದು ಕೊಟ್ಟರೆ ಕನಸುಗಾರ ಸೋಲಿನ ಸರಪಳಿಯಿಂದ ಹೊರಬರಬಹುದು.

ಅಷ್ಟೇ ಅಲ್ಲ, ಯುಗಾದಿ ಹಬ್ಬದ ಸಂದರ್ಭದಲ್ಲಿ ರವಿಚಂದ್ರನ್ ಅವರ ಜೀವನದ ಅತ್ಯಂತ ಆದ್ದೂರಿ ಮತ್ತು ಕಳೆದ ನಾಲ್ಕು ವರುಷಗಳಿಂದ ಚಿತ್ರೀಕರಿಸಲ್ಪಡುತ್ತಿರುವ 'ಮಂಜಿನ ಹನಿ' ಚಿತ್ರ ಬಿಡುಗಡೆಯಾಗಲಿದೆ. ಈ ಚಿತ್ರಕ್ಕಾಗಿ ರವಿಚಂದ್ರನ್ ತಮ್ಮ ಸರ್ವ ಹಣವನ್ನು ಸುರಿದಿರುವುದು ಎಲ್ಲರಿಗೂ ಗೊತ್ತೇ ಇದೆ. ತನ್ನ ಜೀವವನ್ನೇ ಒತ್ತೆ ಇಟ್ಟು ಮಾಡಲಾಗಿರುವ ಈ ಸಿನಿಮಾ ಖಂಡಿತವಾಗಿಯೂ ಹಿಟ್ ಆಗುತ್ತದೆ ಎಂಬುದು ರವಿಚಂದ್ರನ್ ನಂಬಿಕೆ.

ಈ ಚಿತ್ರ ಬಿಡುಗಡೆಯಾದ ನಂತರ ತಮ್ಮ ಪುತ್ರ ಮನೋರಂಜನ್‌ನನ್ನು ಬೆಳ್ಳಿತೆರೆಗೆ ನಾಯಕನಾಗಿ ಪರಿಚಯಿಸುವ ಕೆಲಸವನ್ನು ರವಿಚಂದ್ರನ್ ಕೈಗೆತ್ತಿಕೊಳ್ಳಲಿದ್ದಾರೆ. "ನಾನು 24ನೇ ವಯಸ್ಸಿಗೆ ನಿರ್ದೇಶಕನಾಗಿದ್ದೆ ನನ್ನ ಮಗನನ್ನೂ ಆತನ 24ನೆ ವಯಸ್ಸಿಗೆ ಹೀರೋ ಮಾಡುತ್ತಿದ್ದೇನೆ" ಎನ್ನುತ್ತಾರೆ ರವಿಚಂದ್ರನ್.

'ಕ್ರೇಜಿಸ್ಟಾರ್', 'ಮಂಜಿನ ಹನಿ' ಮತ್ತು ಮಗನನ್ನು ಹೀರೋ ಮಾಡುವ ಸಂಭ್ರಮದಲ್ಲಿರುವ ರವಿಚಂದ್ರನ್ ತಮ್ಮ ಹುಟ್ಟುಹಬ್ಬವನ್ನು ಇದೇ ಸಂಭ್ರಮದ ಮೂಡಿನಲ್ಲಿ ತಮ್ಮ ಅಭಿಮಾನಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆಚರಿಸುವ ಸಾಧ್ಯತೆಯೂ ಇದೆ ಎಂದು ಕೇಳಿಬರುತ್ತಿದೆ.


● ಶೆಣೈ



ತೆಲುಗಿನ ಬೃಂದಾವನಂ ಕನ್ನಡದಲ್ಲಿ ನಂದಗೋಕುಲ

ದರ್ಶನ್ ನಟಿಸಿದ ಹಿಟ್ ಚಿತ್ರಗಳಲ್ಲಿ 'ಗಜ' ಕೂಡ ಒಂದು. ಇದರ ನಿರ್ದೇಶಕರು ಮಾದೇಶ್. ಅದನ್ನು ನಿರ್ಮಿಸಿದವರು ಸುರೇಶ್ ಗೌಡರು ಮತ್ತು ಶ್ರೀನಿವಾಸ ಮೂರ್ತಿ. ಈಗ ಇದೇ ತಂಡ ಮತ್ತೆ ಇನ್ನೊಂದು ಚಿತ್ರ ಮಾಡಲು ಹೊರಟಿದೆ.

ತೆಲುಗಿನ ಸೂಪರ್ ಹಿಟ್ ಚಿತ್ರ 'ಬೃಂದಾವನಂ' ಕನ್ನಡದಲ್ಲಿ ದರ್ಶನ್‌ಗಾಗಿ 'ನಂದಗೋಕುಲ' ಎಂದಾಗುತ್ತಿದೆ. 'ಗಜ' ಚಿತ್ರದಲ್ಲಿ ಮ್ಯಾಜಿಕ್ ಮಾಡಿದ್ದ ಮಾದೇಶ್, ನಿರ್ಮಾಪಕರಾದ ಸುರೇಶ್ ಗೌಡ ಮತ್ತು ಶ್ರೀನಿವಾಸ ಮೂರ್ತಿ ಹಾಗು ನಟ ದರ್ಶನ್ 'ನಂದಗೋಕುಲ'ದಲ್ಲೂ ಮ್ಯಾಜಿಕ್ ಮಾಡುತ್ತಾರಾ ನೋಡಬೇಕು.



...ಕುರಿತು ಬಹುತೇಕ ಮೌನಕ್ಕೇ ಶರಣಾಗಿತ್ತು. ಭಕ್ತಿ ...ದ ಬದಲು ಜನರ ಆಧ್ಯಾತ್ಮಿಕ ದೌರ್ಬಲ್ಯವನ್ನು ಈ ... ದುಡ್ಡು ದೋಚುವ ದಂಧೆಯನ್ನಾಗಿಸಿಕೊಳ್ಳುವ ...ಕ್ಕಾಗಿ ಘಾಟಿ ಸುಬ್ರಹ್ಮಣ್ಯದಲ್ಲೂ ಸಿಮೆಂಟ್ ಹುತ್ತ ...ಯೂದದ್ದನ್ನು ನೋಡಿ ಜನ ಮರುಳೋ ಜಾತ್ರೆ ...ಳೋ ಎಂಬ ಮಾತು ನೆನಪಾಯಿತು.

- ರವಿ ಪುತ್ತೂರ, ದಕ

...ನುಡಿಸಿರಿಯ ನೆಪದಲ್ಲಿ...' ಲೇಖನದಲ್ಲಿ ಡಾ.ಹೆಚ್.ಎಸ್. ...ಪಮಾ ಅವರು 'ಅಳ್ವಾಸ್ ನುಡಿಸಿರಿ'ಯ ಪರದೆಯ ...ನ ಸ್ಪಷ್ಟ ಚಿತ್ರಣವನ್ನು ನೀಡಿದ್ದಾರೆ. ಕೇವಲ ಆಡಂಬರದ, ...ಲ್ಲದ ಕಲೆ, ಸಾಹಿತ್ಯ ಕಾರ್ಯಕ್ರಮಗಳ ಮೂಲಕ ... ವ್ಯಾಪಾರಿ ಹಿತಾಸಕ್ತಿಯನ್ನು ಸಂಘಟಕರು ಬಹಳ ...ಕಾಗಿ ಈಡೇರಿಸಿಕೊಳ್ಳುತ್ತಿದ್ದಾರೆ. ಕರಾವಳಿಯ ಜ್ವಲಂತ ಸಮಸ್ಯೆಗಳಿಗೆ ಇದುವರೆಗೂ ಸ್ಪಂದಿಸದ 'ನುಡಿಸಿರಿ' ಜನರ ಮೂಲ ಉದ್ದೇಶವನ್ನು ಯಾವುದೇ ಮುಲಾಜಿಲ್ಲದೆ ಪ್ರಶ್ನಿಸಬೇಕಾಗುತ್ತದೆ. ಇಂತಹ 'ಫೈವ್‌ಸ್ಟಾರ್' ಕಾರ್ಯಕ್ರಮಗಳಲ್ಲಿ ಸಂವೇದನಾಶೀಲ ಸಾಹಿತಿಗಳೂ ಭಾವುಕರಾಗಿ ಭಾಗವಹಿಸಿ ಸಂಘಟಕರ 'ಬಂಡವಾಳ'ವನ್ನು, ಮೌಲ್ಯವನ್ನು ಹೆಚ್ಚಿಸುತ್ತಿದ್ದಾರೆ.

ಇದು ಕಲೆ, ಸಾಹಿತ್ಯ ಮತ್ತು ಸಾಹಿತಿಗಳ ದುರಂತವಲ್ಲವೆ?

- ರವಿ, ಮೂಡಬಿದರೆ

ಕೆನ್ನೆತ್ ಆ್ಯಂಡರ್ಸನ್ ಮತ್ತು ಜಿಮ್ ಕಾರ್ಬೆಟ್‌ನ ಎಲ್ಲಾ ಸಾಹಿತ್ಯವನ್ನು ಮುಗಿಬಿದ್ದು ಓದಿರುವವನು ನಾನು. ಡೊನಾಲ್ಡ್ ಆ್ಯಂಡರ್ಸನ್ ಬಗ್ಗೆ ಪತ್ರಿಕೆಯಲ್ಲಿ ಬರುತ್ತಿರುವ ಲೇಖನಗಳು ಖುಷಿ ಕೊಟ್ಟಿವೆ. ಈ ಕುರಿತು ಬರಲಿರುವ ಪುಸ್ತಕಕ್ಕಾಗಿ ಕಾಯುತ್ತಿದ್ದೇನೆ. ಎಲ್ಲಾ ಪುಸ್ತಕಗಳು ಕೂಡಲೆ ಪ್ರಕಟವಾಗಲಿ.

- ಮನೋಜ್, ಮಂಗಳೂರು

ಧರ್ಮಾಧಿಕಾರಿಗಳು, ಜಗದ್ಗುರುಗಳು ದೇವರ ಹೆಸರಲ್ಲಿ ಮಾಡುವ ನೀಚ ಕೆಲಸಗಳೆಲ್ಲ ಸಮಾಜ ಸೇವೆ ಎನಿಸಿಕೊಳ್ಳುತ್ತವೆ. ಇಂತಹ ಸಮಾಜ ಸೇವೆಗಳೆಲ್ಲ ಭವ್ಯ ಭಾರತದ ಸಂಸ್ಕೃತಿ ಬೆಳೆಸುತ್ತವೆ ಎಂದು ಇವರ ಅನುಯಾಯಿಗಳು ನಂಬುತ್ತಾರೆ. ನಮ್ಮ ಸಮಾಜದ ವ್ಯಾಧಿ ಇದು.

- ರವಿಕುಮಾರ್, ಹಾಸನ

ತಿಂದು ಹೊಟ್ಟೆ ಬೆಳೆಸುವ ಜ್ಯೋತಿಷಿರೂಪಿ ಮಾಡರ್ನ್ ಭಿಕ್ಷುಕರ 'ಪ್ರಳಯಾವತಾರದ' ಬಗ್ಗೆ 'ಕಂಡಹಾಗೆ' ಅಂಕಣದಲ್ಲಿ ಗೌರಿ ಲಂಕೇಶ್ ಅವರು ವೈಜ್ಞಾನಿಕ ವಾಸ್ತವದೊಂದಿಗೆ "ಅಮಲೇರಿದ ಚಂಡಿಗಳು" ಎಂದು ಹಾಸ್ಯಮಯವಾಗಿ ವ್ಯಾಖ್ಯಾನಿಸಿದ್ದು ಅವರ ಹಾಸ್ಯ ಹಾಗು ತಾಂತ್ರಿಕ ವಿಸ್ತಾರತೆಯನ್ನು ತಿಳಿಸಿತು.

'ಮರೆಯುವ ಮುನ್ನ'ದಲ್ಲಿ ಪ್ರಕಟಗೊಂಡ ಪಿ.ಲಂಕೇಶರ 'ಕಲಿತವನು- ಅರಿತವನು' ನನಗೆ ಸ್ಫೂರ್ತಿ ನೀಡಿತು. ಬರಹದ ಬಗ್ಗೆ ಮಾನ್ಯ ಲಂಕೇಶ್ ಸಾರ್ ಹೇಳಿದ್ದು 'experimentally true'. ಮೌನದ ಮಹತ್ವ ಅರಿತೆ.

ಅಂದಹಾಗೆ, ಪ್ರಳಯದಲ್ಲಿ ನಂಬಿಕೆ ಇಟ್ಟಿರುವ 'ಆಸ್ತಿ'ಕರು ಬರೆದು ಕೊಟ್ಟ ಆಸ್ತಿ ಪಾಸ್ತಿಗಳಲ್ಲಿ ನನಗೂ ಸ್ವಲ್ಪ ಕೊಡಿ. ನಾನು ಬೇರೆ ಗ್ರಹದಲ್ಲೊಂದು ಟ್ಯೂಷನ್ ತೆರೆಯುತ್ತೇನೆ.

- ಅಭಿನಂದನ ಬಳ್ಳಾರಿ, ಬೆಂಗಳೂರು

ಡಿಸೆಂಬರ್ 21ರಂದು ಪ್ರಳಯ ಸಂಭವಿಸುತ್ತದೆ ಎಂದು ನಂಬಿರುವ ಯಾರಾದರೂ ನಿಮಗೆ ತಮ್ಮ ಆಸ್ತಿ, ಹಣ, ಇತ್ಯಾದಿಯನ್ನು ಕೊಟ್ಟಿದ್ದಾರಾ? ಕೊಟ್ಟಿದ್ದರೆ ನನ್ನ ಹೆಸರನ್ನೂ ನಿಮ್ಮ ಪಟ್ಟಿಯಲ್ಲಿ ಸೇರಿಸಿಕೊಳ್ಳಿ. ಯಾಕೆಂದರೆ ನನಗೂ ಹಣದ ಅಗತ್ಯವಿದೆ!

- ಎಸ್. ಕಾರ್ಕಳ, ಮಂಗಳೂರು



ಮಾರಾಯರೆ, 'ಆಸ್ತಿಕರು' ನನಗೆ ಕೊಟ್ಟಿರಬಹುದಾದ ಆಸ್ತಿಪಾಸ್ತಿಯಲ್ಲಿ ಪಾಲು ಕೇಳುವವರು ದೊಡ್ಡ ಸಂಖ್ಯೆಯಲ್ಲಿ ಈಮೇಲ್ ಮತ್ತು ಎಸ್‌ಎಂಎಸ್‌ಗಳನ್ನು ಕಳುಹಿಸಿದ್ದಾರೆಯೇ ಹೊರತು ಯಾವ 'ಪ್ರಳಯ ಭಯಪೀಡಿತ ಪಿಳ್ಳೆಯೂ' ನನಗೆ ಒಂದೇ ಒಂದು ನಯಾ ಪೈಸೆ ಕೊಟ್ಟಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ!

- ಸಂ

ಹೊಗಳಿಕೆ ತೆಗಳಿಕೆ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 02-01-2013 RNI No. KARKAN2005/14648



ಕನ್ನಡ ಚಿತ್ರರಂಗದ ಸಾಹಸ ಮತ್ತು ದುಸ್ಸಾಹಸ

• ಶೆಣೈ

ಇನ್ನೇನು ಕೆಲವೇ ದಿನಗಳಲ್ಲಿ ಹಳೆ ವರ್ಷ ಜಾರಿ ಹೊಸ ವರ್ಷ ಆರಂಭವಾಗಲಿದೆ. 2012ರಲ್ಲಿ ಕನ್ನಡ ಚಿತ್ರರಂಗದ ಸಾಹಸ ಮತ್ತು ದುಸ್ಸಾಹಸ ಕುರಿತು ಒಂದು ಪುಟ್ಟ ಝಲಕ್ ನೋಡಬಹುದು.

2012ರಲ್ಲಿ ಸುಮಾರು 105 ಚಿತ್ರಗಳು ಬಿಡುಗಡೆಯಾದವು. ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ ಒಂದು ಸೆಂಚುರಿಗಿಂತ ಹೆಚ್ಚು. ಆದರೆ ಈ ಸೆಂಚುರಿಯಲ್ಲಿ-ಬೌಂಡರಿ ಮತ್ತು ಸಿಕ್ಸರ್‌ಗಳ ಆರ್ಭಟವಿರಲಿಲ್ಲ. ಒಬ್ಬ ಬ್ಯಾಟ್ಸ್‌ಮನ್ ಹೇಗೆ ಒಂದೊಂದೇ ರನ್ ಹೊಡೆದು ಕೊನೆಗೂ ಹೇಗೆ ಒಂದು ಸೆಂಚುರಿ ಪೂರೈಸುತ್ತಾನೋ ಹಾಗೆಯೇ ನಮ್ಮ ಗಾಂಧಿನಗರದ ಜನರು ಒಟ್ಟು ಸೇರಿ ಒಂದು ಸೆಂಚುರಿ ಬಾರಿಸಿದರು ಅಷ್ಟೇ.

ಬಿಡುಗಡೆಯಾದ 105 ಸಿನಿಮಾಗಳಲ್ಲಿ ದೊಡ್ಡ ಸಾಧನೆ ಮಾಡಿದ ಚಿತ್ರವೆಂದರೆ ದರ್ಶನ್ ಅಭಿನಯಿಸಿದ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ'. ಸುಮಾರು 30 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡ ಈ ಐತಿಹಾಸಿಕ ಚಿತ್ರ ಈಗ ನೂರು ದಿನಗಳತ್ತ ಸಾಗುತ್ತಿದೆ. ನಿರ್ಮಾಪಕ ಆನಂದ ಅಪ್ಪುಗೋಳ್ ಅವರು ಈ ಚಿತ್ರಕ್ಕೆ ಸುರಿದ ಹಣ ಅವರಿಗೆ ವಾಪಸ್ ಬಂದು ಅವರು ಈಗ ಲಾಭ ಕಾಣುತ್ತಿದ್ದಾರೆ.

ಉಳಿದಂತೆ ಬಾಕ್ಸ್ ಆಫೀಸ್‌ನಲ್ಲಿ ಲಾಭ ತಂದುಕೊಟ್ಟ ಚಿತ್ರಗಳೆಂದರೆ 'ಅಣ್ಣಾ ಬಾಂಡ್', 'ಅದ್ದೂರಿ', 'ದಂಡುಪಾಳ್ಯ' ಮತ್ತು 'ಗೋವಿಂದಾಯ ನಮಃ'. ವರ್ಷದ ಕೊನೆಯಲ್ಲಿ ಯೋಗರಾಜ್ ಭಟ್ ನಿರ್ದೇಶನದ 'ಡ್ರಾಮ' ಚಿತ್ರವೂ ಬಾಕ್ಸ್ ಆಫೀಸ್‌ನಲ್ಲಿ ಜಯಗಳಿಸಿದೆ. ಹಾಸ್ಯ ನಟ ಶರತ್ ನಟಿಸಿದ್ದ 'ರ್‍ಯಾಂಬೋ' ಚಿತ್ರ ಕೂಡ ಜಯಭೇರಿ ಬಾರಿಸಿದೆ ಎಂದು ಗಾಂಧಿನಗರದವರು ಘೋಷಿಸುತ್ತಿದ್ದಾರೆ.

ರಮ್ಯಾ-ಯೋಗಿ ಜೋಡಿಯ 'ಸಿದ್ಲಿಂಗು', ಯೋಗಿ ಮತ್ತು ರಾಧಿಕಾ ಪಂಡಿ... ನಟಿಸಿದ 'ಆಲೆಮಾರಿ', ದರ್ಶನ್‌ರ 'ಚಿಂಗಾರಿ', ಉಪೇಂದ್ರರ 'ಕಲ್ಪನ', ಯಶ್... 'ಜಾನು', ಮಾಲಾಶ್ರೀ ಅವರ 'ಶಕ್ತಿ', ಬಾಲ ನಟ ಸ್ನೇಹಿತ್ ನಟಿಸಿದ 'ಸ್ನೇಹಿತರು'... ಇವುಗಳು ನಿರ್ಮಾಪಕರ ಪಾಲಿಗೆ ಅಷ್ಟೇನು ಲಾಭವನ್ನು ತಂದುಕೊಡದಿದ್ದರೂ ದೊಡ್ಡ ನಷ್ಟವನ್ನಂತೂ ಉಂಟುಮಾಡಲಿಲ್ಲ ಎನ್ನಬಹುದು.

ಈ ವರ್ಷ ಕೆಲವು ಭಾರೀ ನಿರೀಕ್ಷೆಯ ಚಿತ್ರಗಳು ಬಾಕ್ಸ್ ಆಫೀಸಿನ... ಮುಗ್ಗರಿಸಿದವು. ಉಪೇಂದ್ರರ 'ಆರಕ್ಷಕ', 'ಗಾಡ್‌ಫಾದರ್' ಮತ್ತು 'ಕಠಾರಿ ವೀ... ಸುರಸುಂದರಾಗಿ', ರವಿಚಂದ್ರನ್‌ರ 'ದಶಮುಖ' ಮತ್ತು 'ನರಸಿಂಹ', ಶ್ರೀನಗ... ಕಿಟ್ಟಿಯ 'ಖೋ ಖೋ', ಪ್ರಿಯಾಮಣಿ ದ್ವಿಪಾತ್ರದಲ್ಲಿ ನಟಿಸಿದ 'ಚಾರುಲತ'... ಮತ್ತು ಶಿವರಾಜ್‌ಕುಮಾರ್ ಅಭಿನಯದ 'ಶಿವ', ರಮ್ಯ ಮತ್ತು ಯಶ್ ಜೋಡಿಯಾ... ಕಾಣಿಸಿಕೊಂಡ 'ಲಕ್ಕಿ', ಮಮ್ಮುಟಿ ನಟಿಸಿದ 'ಶಿಕಾರಿ', ಜಗ್ಗೇಶ್ ನಿರ್ದೇಶನ... 'ಗುರು' ಬಾಕ್ಸ್ ಆಫೀಸ್‌ನಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಗಳಿಸದ ಚಿತ್ರಗಳು.

ಹೀಗೆ ಕನ್ನಡ ಸಿನಿಮಾಗಳು ಮುಗ್ಗರಿಸುತ್ತಿದ್ದರೂ ವರ್ಷವಿಡೀ ಕನ್ನಡ ಚಿತ್ರರಂ... ಮಾತ್ರ ವಾದ-ವಿವಾದಗಳಿಂದಾಗಿ ಸುದ್ದಿಯಲ್ಲಿ ಇದ್ದದ್ದು ನಿಜಕ್ಕೂ ಅತ್ಯಂತ ಖೇದ... ವಿಷಯ. ಚಿತ್ರಗಳ ಬಿಡುಗಡೆ ವಿಷಯದಲ್ಲಿ ಪ್ರತಿ ವಾರ ಎರಡು ಚಿತ್ರಗ... ನಿರ್ಮಾಪಕರ ನಡುವೆ ಸಣ್ಣದೊಂದು ಮನಸ್ತಾಪ ತಲೆದೋರುತ್ತಿತ್ತು, ಅದನ್ನು ಛೇಂಬರ್‌ನಲ್ಲಿ ಬಗೆಹರಿಸುವ ಬದಲು ಎಲ್ಲ ನಿರ್ಮಾಪಕರು ಟಿ.ವಿ. ಚಾನಲ್‌ಗಳಿ... ಹೋಗಿ ಜಗಳವಾಡುತ್ತಿದ್ದದ್ದು ಸಾಮಾನ್ಯವಾಗಿತ್ತು, ಅದರಲ್ಲೂ 'ಗಾಡ್‌ಫಾದರ್' ಚಿತ್ರದ ನಿರ್ಮಾಪಕ ಕೆ. ಮಂಜು ಮತ್ತು 'ಕಠಾರಿವೀರ ಸುರಸುಂದರಾಗಿ' ಚಿತ್ರದ ನಿರ್ಮಾಪಕ ಮುನಿರತ್ನ ನಾಯ್ದು ಟಿ.ವಿ. ಸ್ಟುಡಿಯೋದಲ್ಲಿ ಕೂತು ಪರಸ್ಪರ ದೋಷಾರೋಪಣೆ ಮಾಡಿದ್ದು ವೀಕ್ಷಕರಿಗೆ ಪುಕ್ಕಟೆ ಮನರಂಜನೆ ನೀಡಿತೆ ಹೊರತು ಎರಡೂ ಸಿನಿಮಾಗಳಿಗೆ ಯಾವ ಉಪಕಾರವನ್ನೂ ಮಾಡಲಿಲ್ಲ ಎಂದರೆ ತಪ್ಪಾಗಲಾರದು.

ಇಂತಹ ಜಗಳಗಳ ಮಧ್ಯೆ ಮದನ್ ಪಟೇಲ್ ನಿರ್ಮಾಣದ



'ಸತ್ಯಾನಂದ' ಎಂಬ ಸಿನಿಮಾ ನಿತ್ಯಾನಂದ ಸ್ವಾಮಿಯ ಭಕ್ತರ ಆಕ್ರೋಶಕ್ಕೆ ತುತ್ತಾಗಿ ಕೋರ್ಟ್ ಮೆಟ್ಟಿಲೇರಿತು. ಅದು ಸಾಲದೆಂಬಂತೆ ಮದನ್ ಪಟೇಲ್ ಸೆನ್ಸಾರ್ ಆಫೀಸರ್ ನಾಗರಾಜ್ ವಿರುದ್ಧ ಲಂಚ ಆರೋಪ ಮಾಡಿದರು. ಯಶ್ ವಿರುದ್ಧ ಚೀಟಿ ಹಗರಣ ಭುಗಿಲೆದ್ದಿತು. ನಯನಕೃಷ್ಣ ಎಂಬ ನಟಿ ಪತ್ರಿಕಾಗೋಷ್ಠಿಯಲ್ಲಿ ತನ್ನ ಚಿತ್ರದ ನಿರ್ದೇಶಕ ಋಷಿ ಎಂಬಾತನಿಗೆ 'ಚಪ್ಪಲಿ ಸೇವೆ' ಮಾಡಿದಳು. ಕಿರುತೆರೆಯ ನಟ... ಹೇಮಶ್ರೀ ಸಾವು ಮೆಗಾಸೀರಿಯಲ್‌ನಂತೆ ಇವತ್ತಿಗೂ ಚರ್ಚೆಯಾಗುತ್ತಿದೆ. ನಿರ್ಮಾಪ... ಸಂಘದ ಪ್ರಧಾನ ಕಾರ್ಯದರ್ಶಿ ಸೂರಪ್ಪ ಬಾಬು ಎಂದೋ ಮಾತನಾಡಿದ ವಿಷಯಕ್ಕೆ ಸಂಬಂಧಿಸಿದಂತೆ ಮೀನಾ ತೂಗುದೀಪ್ ಶ್ರೀನಿವಾಸ್ ಅವರ ಕ್ಷಮೆಯಾಚ... ಮಾಡಬೇಕಾಯಿತು... ಹೀಗೆ ಇನ್ನೂ ಹತ್ತಾರು ವಿವಾದಗಳು ಕನ್ನಡ ಚಿತ್ರರಂಗವನ್ನು ಆವರಿಸಿದ್ದವು. ಈಗ ವರ್ಷದ ಕೊನೆಯಲ್ಲಿ ಡಬ್ಬಿಂಗ್ ಎಂಬ ಪೆಡಂಭೂತ ತಲೆಎತ್ತಿ ನಿಂತಿದೆ.

ಇದೆಲ್ಲದರ ಮಧ್ಯೆ 'ದಂಡುಪಾಳ್ಯ' ಎಂಬ ಚಿತ್ರ ಹಿಟ್ ಆದನಂತರ ಅದರ ಕಥಾವಸ್ತುವಿನ ಬಗ್ಗೆ ಚರ್ಚೆ ಆರಂಭವಾಯಿತು. ಹಾಗೆಯೇ ಕಥಾವಸ್ತುವಿನ ಕಾರಣಕ್ಕಾಗಿ ವಿವಾದಕ್ಕೆ ಒಳಗಾದ ಮತ್ತೊಂದು ಚಿತ್ರವೆಂದರೆ ವೀರಪ್ಪನ್ ಪ್ರಕರಣದ 'ಅಟ್ಟಹಾಸ'. ಈ ವರ್ಷ 'ಮುಸ್ಸಂಜೆ ಗೆಳತಿ' ಚಿತ್ರದ ನಾಯಕ ಶ್ರೀನಿವಾಸ ಮತ್ತು 'ಮೆಂಟಲ್ ಮಂಜ' ಚಿತ್ರದ ನಾಯಕ ಅರ್ಜುನ್ ಪೊಲೀಸರಿಂದ ಬಂಧಿತರಾಗಿದ್ದು ಕೂಡ ಕನ್ನಡ ಚಿತ್ರರಂಗದ ಕಪ್ಪು ಚುಕ್ಕಿ. ಶಿವರಾಮ್ ನೇತೃತ್ವದ ಸಬ್ಸಿಡಿ ಕಮಿಟಿಯ ಸದಸ್ಯರಾ... ಸುರೇಶ್ ಮಂಗಳೂರು ವಿರುದ್ಧ ಲಂಚದ ಆರೋಪವನ್ನು ನಿರ್ದೇಶಕ ಕೂಡ್ಲು ರಾಮಕೃ... ಮಾಡಿದ್ದು ಕನ್ನಡ ಚಿತ್ರರಂಗಕ್ಕೆ ನಾಚಿಕೆಯ ವಿಷಯ.

ಒಟ್ಟಾರೆ ಈ ವರ್ಷ ಕನ್ನಡ ಚಿತ್ರರಂಗವನ್ನು ಗಮನಿಸಿದರೆ ಇಲ್ಲಿ ಜೊಳ್ಳೆ ಜಾ... ಕಾಣಿಸುತ್ತದೆ. ಆದರೂ 'ರಾಯಣ್ಣ' ಗೆದ್ದಿದ್ದು, ಪುನೀತ್ ರಾಜ್‌ಕುಮಾರ್ ನಡೆಸಿಕೊ... 'ಕನ್ನಡದ ಕೋಟ್ಯಾಧಿಪತಿ' ಟಿ.ವಿ. ಕಾರ್ಯಕ್ರಮ ಜನಪ್ರಿಯತೆ ಗಳಿಸಿದ್ದು, ಸುದೀಪ್ ತೆಲುಗಿನಲ್ಲಿ ಖಳನಾಯಕನಾಗಿ ನಟಿಸಿ ಗೆದ್ದ 'ಈಗ' ಚಿತ್ರ ಒಂದಷ್ಟು ಸಂತಸವನ್ನು ತರುತ್ತ...



ಚಾರ್ ಮಿನಾರ್
ಮೇಘನಾ ಗಾಂವಂಕರ್
ಪ್ರೇಮ್

ದೇಸಾಯಿ ಅಜ್ಞಾತವಾಸ ಮುಕ್ತಾಯ?

'ನಮ್ಮೂರ ಮಂದಾರ ಹೂವೆ' ಎಂಬ ಸದಭಿರುಚಿಯ ಚಿತ್ರವನ್ನು ನೀಡಿದ್ದ ನಿರ್ದೇಶಕ ಸುನಿಲ್‌ಕುಮಾರ್ ದೇಸಾಯಿ ಕಳೆದ ಎರಡು ಮೂರು ವರ್ಷಗಳಿಂದ ಅಜ್ಞಾತವಾಸದಲ್ಲಿದ್ದಾರೆ. ಒಂದು ಕಾಲದಲ್ಲಿ ಎಲ್ಲ ನಾಯಕ-ನಾಯಕಿಯರು ಈ ದೇಸಾಯಿ ನಿರ್ದೇಶನದ ಚಿತ್ರದಲ್ಲಿ ನಟಿಸಬೇಕೆಂದು ಕನಸು ಕಾಣುತ್ತಿದ್ದರು. ಅಂತಹ ದೇಸಾಯಿ ದಿಢೀರನೆ ತೆರೆಮರೆಗೆ ಸರಿದದ್ದು ಅವರ ಅಭಿಮಾನಿಗಳಲ್ಲಿ ನಿರಾಶೆ ಮೂಡಿಸಿತ್ತು.



ಈಗ ದೇಸಾಯಿ ಧೂಳಿನಿಂದ ಮೇಲೆದ್ದ ಫೀನಿಕ್ಸ್ ಹಕ್ಕಿಯಂತೆ ಮೈಕೊಡವಿಕೊಂಡು ಮತ್ತೆ ಸಿನಿಮಾ ನಿರ್ದೇಶಿಸಲು ಸಜ್ಜಾಗಿದ್ದಾರೆ. ಹಾಸ್ಯ ನಟನೆಯಲ್ಲಿ ಎತ್ತಿದ ಕೈ ಎನಿಸಿರುವ ಅನಂತನಾಗ್ ಮತ್ತು ಕೋಮಲ್ ಜೋಡಿಯನ್ನು ಹಾಕಿಕೊಂಡು ಜನವರಿ ತಿಂಗಳಲ್ಲಿ ದೇಸಾಯಿ ಹೊಸ ಚಿತ್ರವನ್ನು ಪ್ರಾರಂಭಿಸಲಿದ್ದಾರೆ.

ಕನ್ನಡ ಚಿತ್ರರಂಗಕ್ಕೆ 'ಬೆಳದಿಂಗಳ ಬಾಲೆ', 'ನಮ್ಮೂರ ಮಂದಾರ ಹೂವೆ' ತರಹದ ಶ್ರೇಷ್ಠ ಚಿತ್ರಗಳನ್ನು ನೀಡಿದ ದೇಸಾಯಿ ಮತ್ತೆ ನಿರ್ದೇಶನ ಮಾಡಲು ಬಂದಿರುವುದು ನಿಜಕ್ಕೂ ಸಂತೋಷದ ಸುದ್ದಿ. ದೇಸಾಯಿಯವರಿಗೆ ಒಳ್ಳೆಯದಾಗಲಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com